## ಅಖಿಲ ಭಾರತ ಪತ್ರಿಕೆ

**ಜುಲೈ 2018**



# ಎಲ್ಲ ಜೀವನ ಯೋಗವಾಗಿದೆ

ಶ್ರೀ ಅರವಿಂದರು

ಯೋಗ ಸಮನ್ವಯ

ಗ್ರಂಥದಿಂದ ಆಯ್ದ ಭಾಗಗಳು

ಭಾಗ *II*

ಬೆಲೆ : 15/–



*Always do your best*
*and the Lord will take care of the results.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಎಲ್ಲ ಜೀವನ ಯೋಗವಾಗಿದೆ"

**ಭಾಗ II**

**ಅನು : ಡಾ. ಕೆ.ಎಸ್. ಆಮೂರ**
ಸಮಗ್ರ ಜ್ಞಾನದ ಯೋಗ 4
ದೈವೀ ಪ್ರೇಮದ ಯೋಗ 18
ಸಮಗ್ರ ಸ್ವ–ಪರಿಪೂರ್ಣತೆಯತ್ತ 34

**ಅನು : ಶ್ರೀ ಎಂ.ಎಸ್. ನಾಗರಹಳ್ಳಿ**
ಸಮತೆಯ ರೀತಿ 37

**ಅನು : ಡಾ. ಕೆ.ಎಸ್. ಆಮೂರ**
ಶ್ರೀಮಾತೆಯವರ ನುಡಿಗಳು 46

**ವಾರ್ತಾಪತ್ರ** 64

## (All India Magazine) ಸಂಪಾದಕೀಯ:

ಶ್ರೀ ಅರವಿಂದರು ಆರ್ಯ ಪತ್ರಿಕೆಯಲ್ಲಿ ಪ್ರಕಟಿಸಿದ ಪ್ರಧಾನ ಕೃತಿಗಳಲ್ಲಿ ಯೋಗ ಸಮನ್ವಯ (Synthesis of Yoga) ಒಂದಾಗಿದೆ. ಇದನ್ನು ಅವರು 1914 ಮತ್ತು 1919ರ ನಡುವೆ ರಚಿಸಿದ್ದರು. ಅದು ಯೋಗದ ಸರ್ವಸಾಧಾರಣ ಸ್ಥೂಲರೂಪವನ್ನು ಅದರ ಸಮನ್ವಯ ರೀತಿಯಲ್ಲಿ ಹಾಗೆಯೇ ಮಹತ್ವದ ವಿಧಾನಗಳು ಹಾಗೂ ಪರಿಣಾಮಗಳಲ್ಲಿ ಕೊಡುತ್ತದೆ. ಹಾಗಿದ್ದರೂ ಗಮನಿಸಬೇಕಾದ ಸಂಗತಿ ಎಂದರೆ ಯೋಗ ಸರಣಿ ಉತ್ಕ್ರಾಂತಿಯ ಬದಲಾವಣೆಗಳಿಗೆ ಒಳಗಾಯಿತು. ಮೊದಲನೆಯದು ಶ್ರೀಮಾತೆಯವರು ಕೊನೆಯದಾಗಿ ಪಾಂಡೀಚೇರಿಗೆ ಬಂದ ನಂತರದ ವಿಷಯ, ನಂತರದ್ದು ಫೆ.29, 1956ರಂದು ಆದ ಅತಿಮಾನಸದ ಪ್ರಕಟಣೆ ಕುರಿತಾದದ್ದು. ಯೋಗ ಸಮನ್ವಯ ಯೋಗದ ಮಹತ್ವದ ಅಂಶಗಳ, ಹೆಚ್ಚಿನ ರೂಪದಲ್ಲಿ ಗ್ರಹಿಸಬಲ್ಲ, ಸ್ಥೂಲಾವಲೋಕನವನ್ನು ಕೊಡುತ್ತದೆ. ಸಾಧಕ ತನ್ನ ಪ್ರಯಾಣವನ್ನು ಪ್ರಾರಂಭಿಸಲು ಮತ್ತು ಅದರಲ್ಲಿ ಬಹಳ ದೂರ ಹಾಗೂ ಆಳಗಳಲ್ಲಿ ಪ್ರಯಾಣ ಮಾಡಲು ಅತಿ ಕಡಿಮೆ ಚೌಕಟ್ಟುಗಳನ್ನು ಒದಗಿಸುತ್ತದೆ. ಈ ಸಂಚಿಕೆಯಲ್ಲಿ ಹಾಗೂ ಅದರ ಹಿಂದಿನ ಸಂಚಿಕೆಯಲ್ಲಿ ಆ ಅದ್ಭುತವಾದ ಪುಸ್ತಕದಿಂದ ಪ್ರಾಮುಖ್ಯತೆಯುಳ್ಳ ಹಾಗೂ ಗ್ರಹಿಸಬಲ್ಲ ಪದಚ್ಛೇದಗಳನ್ನು ಆಯ್ದುಕೊಳ್ಳಲು ಪ್ರಯತ್ನಿಸಿದ್ದೇವೆ. ಆದಾಗ್ಯೂ ಯೋಗದ ಎಲ್ಲ ಪ್ರಧಾನ ಹಾಗೂ ಮಹತ್ವದ ಅಂಶಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನ ಮಾಡಿದಾಗಲೂ ಇಡಿಯಾದ ಪಠ್ಯವನ್ನು ಅದರ ಎಲ್ಲ ವಿವರಗಳಲ್ಲಿ ಶಿಸ್ತುಬದ್ಧತೆಯಿರುವ ಅಭ್ಯಾಸ ಮಾಡುವುದನ್ನು ಬೇರೆ ಯಾವುದರಿಂದಲೂ ಮಾಡಲಾಗುವುದಿಲ್ಲ. ಇವೆರಡು ಸಂಚಿಕೆಗಳು ಓದುಗರಲ್ಲಿ ಅಭಿರುಚಿಯನ್ನು ಪ್ರಾರಂಭಿಸುವುದಕ್ಕಾಗಿವೆ. ನಂತರ ಮೂಲ ಪಠ್ಯದತ್ತ ಹೊರಳಲು ಪ್ರಯತ್ನ ಮಾಡಬಹುದು, ಅದರಿಂದಾಗಿ "ಯೋಗ ಸಮನ್ವಯ"ದ ಆಳವಾದ ಅಭ್ಯಾಸವನ್ನು ಮಾಡುವಂತಾಗುವುದು.



ಸಮಗ್ರ ಯೋಗದ ವಿಧಾನಕ್ಕೆ ಮೂರು ಹಂತಗಳಿವೆ, ಅವುಗಳನ್ನು ಕೊರೆದು ತೆಗೆದು ಭಿನ್ನವಾಗಿರುವಂತೆ ಇರಿಸಿಲ್ಲ ಇಲ್ಲವೆ ಪ್ರತ್ಯೇಕವಾಗಿರುವುದಿಲ್ಲ, ಒಂದು ಮಾನದಲ್ಲಿ ಒಂದರ ನಂತರ ಒಂದರಂತೆ ಬರುತ್ತವೆ.

ಅಲ್ಲಿ ಮೊದಲಿಗೆ ಕನಿಷ್ಠಪಕ್ಷ ಪ್ರಾರಂಭದ, ಶಕ್ತಗೊಳಿಸುವ ಸ್ವ–ವಿಶ್ವಾತೀತೆಗಾಗಿ ಪ್ರಯತ್ನವಿರಬೇಕು ಮತ್ತು ಭಗವಂತನೊಡನೆ ಸಂಪರ್ಕವಿರಬೇಕು, ನಂತರ ವಿಶ್ವಾತೀತವಾದುದನ್ನು ಸ್ವೀಕರಿಸುವುದಿರಬೇಕು, ಯಾವುದರ ಜೊತೆಗೆ ನಾವು ಸಹಭಾಗಿತ್ವದ ಲಾಭ ಪಡೆದಿರುತ್ತೇವೆಯೋ ಅದಿರಬೇಕು ಇದೆಲ್ಲ ನಮ್ಮ ಇಡೀ ಪ್ರಜ್ಞಾಪೂರ್ಣ ಸತ್ತೆಯ ಪರಿವರ್ತನೆಗಾಗಿ ಇರಬೇಕು, ಕೊನೆಯದಾಗಿ ಪರಿವರ್ತನೆ ಪಡೆದ ನಮ್ಮ ಮನುಕುಲವನ್ನು ದೈವೀ ಕೇಂದ್ರವೆಂದು ಜಗತ್ತಿನಲ್ಲಿ ಉಪಯೋಗಿಸಬೇಕು.

**(CWSA, 23/58–59)** – ಶ್ರೀ ಅರವಿಂದರು

*

# ಸಮಗ್ರ ಜ್ಞಾನದ ಯೋಗ

## ನಿರ್ಮೂಲನ ಮಾಡಬೇಕಾದ ಒಂದೇ ವಿಷಯ

ಜ್ಞಾನದ ಸಾಂಪ್ರದಾಯಿಕ ರೀತಿ ನಿರ್ಮೂಲನದಿಂದ ಮುಂದುವರಿಯುತ್ತದೆ ಮತ್ತು ಒಂದರ ನಂತರ ಒಂದರಂತೆ ದೇಹವನ್ನು, ಜೀವನವನ್ನು ಇಂದ್ರಿಯಗಳನ್ನು, ಹೃದಯವನ್ನು, ಯೋಚನೆಯನ್ನು ಕೂಡ ನಿರಾಕರಿಸುವುದಿರುತ್ತದೆ. ಅದರಿಂದಾಗಿ ನಿಶ್ಚಲವಾಗಿರುವ ದಿವ್ಯಾತ್ಮದಲ್ಲಿ ಇಲ್ಲವೆ ಪರಮೋಚ್ಚ ನಿಹಿಲ್‌ದಲ್ಲಿ ಇಲ್ಲವೆ ಅನಿಶ್ಚಿತ ಪರಿಪೂರ್ಣತೆಯಲ್ಲಿ ಮುಳುಗು ಹಾಕುವಂತಾಗುತ್ತದೆ. ಸಮಗ್ರ ಯೋಗದ ರೀತಿ ನಾವು ಸಮಗ್ರ ಸ್ವ–ನೆರವೇರಿಕೆಯನ್ನು ತಲುಪಬೇಕು ಎಂಬ ಉದ್ದೇಶ ಹೊಂದಿರುತ್ತದೆ ಮತ್ತು ನಿರ್ಮೂಲನ ಮಾಡಬೇಕಾದ ಒಂದೇ ವಿಷಯ ಅಪ್ರಜ್ಞೆ, ಅವಿದ್ಯೆ ಹಾಗೂ ಅವಿದ್ಯೆಯ ಪರಿಣಾಮ ಆಗಿರುತ್ತದೆ. ಅಹಂಕಾರದ ಆಕಾರ ತಳೆಯುವ ಸತ್ತೆಯ ಮಿಥ್ಯೆಯನ್ನು ನಿರ್ಮೂಲ ಮಾಡಬೇಕು, ಆಗ ನಮ್ಮ ನಿಜವಾದ ಸತ್ತೆ ನಮ್ಮಲ್ಲಿ ಪ್ರಕಟವಾಗಬಹುದು. ಕೇವಲ ಪ್ರಾಣಿಕ ಹಾತೊರೆತದ ಮತ್ತು ನಮ್ಮ ಮೈತಳೆದ ಅಸ್ತಿತ್ವದ ಯಾಂತ್ರಿಕ ಸುತ್ತಿನ ಆಕಾರ ಪಡೆದ ಜೀವನದ ಮಿಥ್ಯೆಯನ್ನು ನಿರ್ಮೂಲ ಮಾಡಬೇಕು. ಪ್ರಾಪಂಚಿಕ ನೋಟಗಳಿಗೆ, ದ್ವಿವಿಧ ಸಂವೇದನೆಗಳಿಗೆ ಅಧೀನವಾಗಿರುವ ಇಂದ್ರಿಯಗಳ ಮಿಥ್ಯೆಯನ್ನು ನಿರ್ಮೂಲ ಮಾಡಬೇಕು, ನಮ್ಮಲ್ಲಿ ಶ್ರೇಷ್ಠತರ ಇಂದ್ರಿಯವಿದೆ, ಅದು ಇವುಗಳ ಮೂಲಕ ವಿಷಯಗಳಲ್ಲಿರುವ ಭಗವಂತನಿಗೆ ತೆರೆದುಕೊಳ್ಳಬಲ್ಲದು ಮತ್ತು ದೈವಿಕವಾಗಿ ಉತ್ತರ ನೀಡಬಲ್ಲದು. ಭಾವೋದ್ರೇಕಗಳು, ಆಸೆಗಳು ಹಾಗೂ ಅದರ ದ್ವಿವಿಧ ಮನೋವಿಕಾರಗಳು ಇರುವ ಹೃದಯದ ಮಿಥ್ಯೆಯನ್ನು ನಿರ್ಮೂಲ ಮಾಡಬೇಕು. ಎಲ್ಲ ಜೀವಿಗಳಿಗೆ ತನ್ನ ದೈವೀ ಪ್ರೇಮದೊಂದಿಗೆ ಹಾಗೂ ಅನಂತನಿಂದ ಉತ್ತರಗಳಿಗಾಗಿ ಅನಂತ ಭಾವೋದ್ರೇಕ ಹಾಗೂ ಹಾತೊರೆತಗಳಿರುವ ಆಳಾತಿ ಆಳದ ಹೃದಯ ನಮ್ಮಲ್ಲಿ ತೆರೆದುಕೊಳ್ಳಬಹುದು. ತನ್ನ ಅಪರಿಪೂರ್ಣ ಮಾನಸಿಕ ರಚನೆಗಳೊಂದಿಗೆ, ಅದರ ದುರಹಂಕಾರದ ದೃಢೀಕರಿಸುವಿಕೆ ಹಾಗೂ ನಿರಾಕರಣೆಗಳೊಂದಿಗೆ, ಅದರ ಸೀಮಿತ ಹಾಗೂ ಪ್ರತ್ಯೇಕ ಏಕಾಗ್ರತೆಗಳೊಂದಿಗೆ ಕೂಡಿರುವ ಯೋಚನೆಯ ಮಿಥ್ಯೆಯನ್ನು ನಿರ್ಮೂಲ ಮಾಡಬೇಕು, ಜ್ಞಾನದ ಶ್ರೇಷ್ಠತರ ಕಾರ್ಯವಿಧಾನ ಹಿಂದಿದೆ ಅದು

ದೇವನ ಆತ್ಮದ ಹಾಗೂ ಪ್ರಕೃತಿಯ ಹಾಗೂ ವಿಶ್ವದ ನಿಜವಾದ ಸತ್ಯಕ್ಕೆ ತೆರೆದುಕೊಳ್ಳಬಲ್ಲದು.

**(CWSA, 23/291–92)** **– ಶ್ರೀ ಅರವಿಂದರು**

*

**ಏಕಾಗ್ರತೆಯ ಸಾಮರ್ಥ್ಯ**

ಯಾವುದೊಂದರ ಮೇಲೆ ಏಕಾಗ್ರತೆಯ ಮೂಲಕ ನಾವು ಆ ವಿಷಯವನ್ನು ತಿಳಿದುಕೊಳ್ಳಲು ಶಕ್ತರಾಗುತ್ತೇವೆ ಅದು ಮರೆಯಲ್ಲಿರಿಸಿದ ರಹಸ್ಯಗಳನ್ನು ಬಿಟ್ಟುಕೊಡುವಂತೆ ಮಾಡುತ್ತೇವೆ, ನಾವು ಈ ಸಾಮರ್ಥ್ಯವನ್ನು ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಅಲ್ಲ ಆದರೆ ಅದರಲ್ಲಿಯೇ ಇರುವ ದೈವಿಕವಾದ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಉಪಯೋಗಿಸಬೇಕು. ಇನ್ನೂ ಗ್ರಹಿಸಲಾಗಿರದ, ನಮ್ಮಿಂದ ಆಚೆಗಿರುವ ವಿಷಯವನ್ನು ದೊರಕಿಸುವುದಕ್ಕಾಗಿ ಏಕಾಗ್ರತೆಯ ಮೂಲಕ ಇಡೀ ಸಂಕಲ್ಪವನ್ನು ಒಟ್ಟುಗೂಡಿಸಬಹುದು. ಈ ಸಾಮರ್ಥ್ಯವನ್ನು ಸಾಕಷ್ಟು ತರಬೇತಿಗೊಳಪಡಿಸಿದರೆ ಅದು ಸಾಕಷ್ಟು ಏಕಮನಸ್ಸಿನದಾದರೆ, ಸಾಕಷ್ಟು ನಿಷ್ಕಪಟತನದದ್ದಾದರೆ, ತನ್ನ ಬಗ್ಗೆ ನಿಶ್ಚಿತತೆ ಹೊಂದಿದ್ದರೆ ತನಗೆ ಮಾತ್ರ ವಿಶ್ವಾಸಾರ್ಹವಾಗಿದ್ದರೆ, ವಿಶ್ವಾಸದಲ್ಲಿ ಪರಿಪೂರ್ಣವಾಗಿದ್ದರೆ ಅದನ್ನು ಯಾವುದೇ ಬಗೆಯ ವಸ್ತು–ವಿಷಯವನ್ನು ದೊರಕಿಸಲು ನಾವು ಅದನ್ನು ಉಪಯೋಗಿಸಬಹುದು, ಆದರೆ ಜಗತ್ತು ನಮಗೆ ಕೊಡಬಹುದಾದ ಅನೇಕ ವಸ್ತುಗಳನ್ನು ದೊರಕಿಸಲು ಅದನ್ನು ಉಪಯೋಗಿಸಬಾರದು. ಬೆಂಬತ್ತಲು ಯೋಗ್ಯವಾದ ಒಂದು ಉದ್ದೇಶವನ್ನು ಆಧ್ಯಾತ್ಮಿಕವಾಗಿ ಗ್ರಹಿಸಲು ಉಪಯೋಗಿಸಬೇಕು, ಅದು ಜ್ಞಾನಕ್ಕೆ ಯೋಗ್ಯವಾದ ಒಂದು ಉದ್ದೇಶ ಕೂಡ ಆಗಿರುತ್ತದೆ. ನಮ್ಮ ಇಡೀ ಸತ್ತೆಯನ್ನು ಅದರದೇ ನಿಲುವಿನ ಮೇಲೆ ಏಕಾಗ್ರತೆಗೆ ಒಳಪಡಿಸುವುದರ ಮೂಲಕ ನಾವು ಆಯ್ದುಕೊಂಡ ಏನು ಬೇಕಾದರೂ ಆಗಬಹುದು, ಉದಾಹರಣೆಗೆ ಮೊದಲು ದೌರ್ಬಲ್ಯ ಹಾಗೂ ಭಯಗಳಿರುವ ಮೊತ್ತವಾಗಿದ್ದರೆ ಅದರ ಬದಲಾಗಿ ಬಲ ಹಾಗೂ ಧೈರ್ಯವಿರುವ ಮೊತ್ತವಾಗಬಹುದು. ಇಲ್ಲವೆ ನಾವು ಎಲ್ಲವೂ ಆಗಬಹುದು, ಶ್ರೇಷ್ಠ ಪರಿಶುದ್ಧತೆ, ಪಾವಿತ್ರ್ಯ ಹಾಗೂ ಶಾಂತಿ ಹೊಂದಿರುವವರು ಇಲ್ಲವೆ ದೈವೀ ಪ್ರೇಮದ ಏಕೈಕ ವಿಶ್ವಾತ್ಮವಾಗಬಹುದು. ಆದರೆ ನಾವು

ಕೈಕೊಳ್ಳಬೇಕಾದುದನ್ನು ಕುರಿತು ಹೇಳಲಾಗಿದೆ ಸದ್ಯ ನಾವಿರುವುದಕ್ಕೆ ಹೋಲಿಸಿದರೆ ಅವೆಷ್ಟೇ ಉಚ್ಚವಾಗಿರಲಿ ಈ ಸಾಮರ್ಥ್ಯವನ್ನು ಈ ವಿಷಯಗಳಾಗುವುದಕ್ಕೆ ಉಪಯೋಗಿಸಬಾರದು, ಆದರೆ ಎಲ್ಲ ಕ್ರಿಯೆಗಳಿಂದ, ಗುಣಲಕ್ಷಣ ವೈಶಿಷ್ಟ್ಯಗಳಿಂದ ಮುಕ್ತವಾದ, ಪರಿಶುದ್ಧ ಹಾಗೂ ಪರಿಪೂರ್ಣ ದೈವೀ ಸತ್ತೆಯಾಗುವುದಕ್ಕೆ ಉಪಯೋಗಿಸಬೇಕು.

**(CWSA, 23/318)** **– ಶ್ರೀ ಅರವಿಂದರು**

*

**ಏಕಾಗ್ರತೆಗಾಗಿ ಇರಿಸಬೇಕಾದ ಹೆಜ್ಜೆಗಳು ಹಾಗೂ ವಿಧಾನ**

ಏಕಾಗ್ರತೆಗಾಗಿ ಮೊದಲ ಹೆಜ್ಜೆ ಅಲೆದಾಡುವ ಮನಸ್ಸನ್ನು ಒಂದು ನೆಲೆಗೊಂಡ ಅಲ್ಲಾಡದ ಬೆಂಬತ್ತುವಿಕೆಯನ್ನು ಒಂದೇ ವಿಷಯದ ಜೋಡಿಸಿದ ಯೋಚನೆಯ ಒಂದೇ ಮುಂದುವರಿಕೆಯನ್ನು ರೂಢಿಮಾಡಿಕೊಳ್ಳಬೇಕು, ಇದನ್ನು ಅದು ಅದರ ಲಕ್ಷ್ಯಕ್ಕೆ ತರುವ ಎಲ್ಲ ಪ್ರಲೋಭನೆಗಳಿಂದ ಮತ್ತು ಪರಕೀಯ ಕರೆಗಳಿಂದ ಏಕಾಗ್ರತೆಗೆ ಭಂಗಪಡಿಸದಂತೆ ಮಾಡಬೇಕು. ಇಂತಹ ಏಕಾಗ್ರತೆ ನಮ್ಮ ಸಾಧಾರಣ ಜೀವನದಲ್ಲಿ ಸಾಮಾನ್ಯವಾಗಿ ಇರುತ್ತದೆ. ಆದರೆ ಅದನ್ನು ಆಂತರಿಕವಾಗಿ ಕೈಕೊಳ್ಳುವುದು ಕಷ್ಟಕರವಾಗಿರುತ್ತದೆ, ಅಲ್ಲಿ ನಿಮ್ಮ ಮನಸ್ಸಿನಲ್ಲಿ ಕಾಪಾಡಿಕೊಂಡು ಬರುವಂತಹ ಬಾಹ್ಯದಲ್ಲಿರುವಂತಹ ಯಾವ ವಸ್ತುವೂ ಇರುವುದಿಲ್ಲ, ಕ್ರಿಯೆಯಿರುವುದಿಲ್ಲ. ಆದಾಗ್ಯೂ ಅದನ್ನು ಈ ಆಂತರಿಕ ಜ್ಞಾನವನ್ನು ಅರಸುವವನು ಪರಿಣಾಮಕಾರಿ ಆಗುವಂತೆ ಮಾಡಬೇಕು. ಅದು ಬೌದ್ಧಿಕವಾಗಿ ಯೋಚಿಸುತ್ತಿರುವವನ ಒಂದೇ ಸಮನೆ ಬರುತ್ತಿರುವ ಯೋಚನೆಯಾಗಬಾರದು. ಅವನ ಒಂದೇ ಉದ್ದೇಶ ಕಲ್ಪನೆಗಳನ್ನು ಮಾಡಿಕೊಳ್ಳುವುದು ಹಾಗೂ ಬೌದ್ಧಿಕವಾಗಿ ತನ್ನ ಕಲ್ಪನೆಗಳು ಕೊಂಡಿಗಳ ರೂಪದಲ್ಲಿ ಒಂದಕ್ಕೊಂದು ಕೂಡಿಕೊಂಡಿರುವುದಾಗಿರುತ್ತದೆ. ಬಹುಶಃ ಮೊದಲನೆಯದರ ಹೊರತಾಗಿ ನೆಲೆಸಲು ಅಷ್ಟೊಂದು ರೀತಿಯಲ್ಲಿ ಬಯಸುವ ತರ್ಕಮಾಡುವು ವಿಧಾನದ ಒಂದು ರೀತಿಯನ್ನು ಬಯಸಲಾಗಿರುತ್ತದೆ, ಅದು ಆ ವಿಚಾರದ ಫಲಪ್ರದ ಸಾರದ ಮೇಲೆ ಸಾಧ್ಯವಿದ್ದಷ್ಟು ಇರಬೇಕು; ಅದು ಆತ್ಮದ ಸಂಕಲ್ಪದ ಒತ್ತಾಯದ ಮೂಲಕ ಸತ್ಯದ ಎಲ್ಲ ಮುಖಗಳನ್ನು ತೆರೆದು ತೋರಿಸಬೇಕು. ಏಕಾಗ್ರತೆಗಾಗಿ ಇರುವ ವಿಷಯ ದೈವೀ ಪ್ರೇಮವಾಗಿದ್ದರೆ ಮನಸ್ಸು ದೇವರೆಂದರೇನು ಎಂಬ

ವಿಚಾರದ ಸಾರದ ಮೇಲೆ ಏಕಾಗ್ರತೆ ವಹಿಸಬೇಕು. ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂದರೆ ಭಗವಂತನ ಪ್ರೇಮದ ಅನೇಕ ಪ್ರಕಟಣೆಗಳು ಪ್ರಕಾಶಮಯವಾದ ರೀತಿಯಲ್ಲಿ ಮೇಲೆದ್ದು ಬರಬೇಕು; ಆದರೆ ಯೋಚನೆಯಲ್ಲಷ್ಟೇ ಅಲ್ಲ, ಆದರೆ ಸಾಧಕನ ಸತ್ತೆಯ ಹೃದಯದಲ್ಲಿ ಹಾಗೂ ದೃಷ್ಟಿಯಲ್ಲಿ ಬರಬೇಕು. ಯೋಚನೆ ಮೊದಲು ಬರಬಹುದು ಮತ್ತು ನಂತರ ಅನುಭವ ಬರಬಹುದು; ಆದರೆ ಸರಿಸಮಾನವಾಗಿ ಅನುಭವ ಮೊದಲು ಬರಬಹುದು ಮತ್ತು ಜ್ಞಾನ ಅನುಭವದಿಂದ ಮೇಲೆದ್ದು ಬರಬಹುದು, ನಂತರ ಸಿದ್ಧಿಸಿಕೊಂಡ ವಿಷಯ ನೆಲೆಸುವಂತಾಗಬೇಕು, ಅದು ಸತತ ಅನುಭವವಾಗುವವರೆಗೆ ಅದನ್ನು ಹೆಚ್ಚು ಹೆಚ್ಚಾಗಿ ಹಿಡಿದಿಟ್ಟುಕೊಳ್ಳಬೇಕು, ಅದು ಕೊನೆಗೆ ಸತ್ತೆಯ ಧರ್ಮ ಇಲ್ಲವೆ ನಿಯಮವಾಗುವುದು.

ಇದು ಏಕಾಗ್ರತೆಗೆ ಒಳಪಡಿಸಿದ ಧ್ಯಾನದ ವಿಧಾನ, ಆದರೆ ಸತತ ಪ್ರಯತ್ನವಿರುವ ವಿಧಾನ ಕೇವಲ ವಿಚಾರದ ಸಾರದ ಮೇಲೆ ಏಕಾಗ್ರತೆಯಲ್ಲಿ ಇಡೀ ಮನಸ್ಸನ್ನು ಸ್ಥಿರಗೊಳಿಸುವುದಾಗಿದೆ: ಅದರಿಂದಾಗಿ ಆ ವಿಷಯ ಕುರಿತು ಯೋಚನೆಯ ಜ್ಞಾನವನ್ನು ಇಲ್ಲವೆ ಮನೋವೈಜ್ಞಾನಿಕ ಅನುಭವವನ್ನು ತಲುಪುವುದಾಗಿರುವುದಿಲ್ಲ, ಆದರೆ ವಿಚಾರದ ಹಿಂದಿರುವ ಆ ವಿಷಯದ ಸಾರವನ್ನು ತಲುಪಬೇಕಾಗಿರುತ್ತದೆ. ಈ ವಿಧಾನದಲ್ಲಿ ಯೋಚನೆ ನಿಂತು ಹೋಗುತ್ತದೆ, ಆ ವಿಷಯದ ಮಗ್ನವಾದ ಇಲ್ಲವೆ ಅತ್ಯಾನಂದವಿರುವ ಧ್ಯಾನ ಇಲ್ಲವೆ ಅದನ್ನು ಆಂತರಿಕ ಸಮಾಧಿಯಲ್ಲಿ ಮುಳುಗಿಸುವುದರ ಮೂಲಕ ದಾಟಿ ಹೋಗುತ್ತದೆ.

ಮೂರನೆಯ ವಿಧಾನ ಆ ವಿಷಯದ ಮೇಲೆ ಸತತ ಪ್ರಯತ್ನ ಮಾಡಲು ಧ್ಯಾನದ ಮೇಲೆ ಏಕಾಗ್ರತೆ ಇರಿಸುವುದಾಗಿರುವುದಿಲ್ಲ ಇಲ್ಲವೆ ಯೋಚನೆಯ ದೃಷ್ಟಿಯ ಒಂದು ಉದ್ದೇಶದ ಸತತ ಪ್ರಯತ್ನವಿರುವ ಧ್ಯಾನದ ಮೇಲೆ ಏಕಾಗ್ರತೆ ಇರಿಸುವುದಿರುವುದಿಲ್ಲ, ಆದರೆ ಮೊದಲು ಮನಸ್ಸನ್ನು ಒಟ್ಟಿನಲ್ಲಿ ನಿಶ್ಚಲಗೊಳಿಸುವುದಿರುತ್ತದೆ. ಇದನ್ನು ಅನೇಕ ರೀತಿಗಳಲ್ಲಿ ಕೈಕೊಳ್ಳಬಹುದು; ಒಂದು ರೀತಿ ಎಂದರೆ ಮನಸ್ಸಿನ ಕ್ರಿಯೆಯಿಂದ ಒಟ್ಟಿನಲ್ಲಿ ಅದರಲ್ಲಿ ಭಾಗವಹಿಸದೆ ಕೇವಲ ಜಾಗರೂಕತೆಯಿಂದ ನೋಡುತ್ತ ಹಿಂದೆ ನಿಲ್ಲುವುದಾಗಿದೆ. ಅದರ ಜಿಗಿತಕ್ಕೆ ಹಾಗೂ ಓಡುವುದಕ್ಕೆ ಅನುಮತಿ ದೊರಕದೆ ಇರುವುದರಿಂದ ದಣಿದುಕೊಂಡು ಅದು ಹೆಚ್ಚುತ್ತಿರುವ, ಮತ್ತು ಕೊನೆಯಲ್ಲಿ ಪರಿಪೂರ್ಣವಾಗಿರುವ ನಿಶ್ಚಲತೆಯಲ್ಲಿ

ಬಿದ್ದುಬಿಡುತ್ತದೆ. ಇನ್ನೊಂದು ರೀತಿ ಎಂದರೆ ಯೋಚನೆಯ ಸೂಚನೆಗಳನ್ನು ಅವು ಬಂದಾಗೆಲ್ಲ ನಿರಾಕರಿಸುವುದಾಗಿದೆ ಮನಸ್ಸಿನಿಂದ ದೂರ ಎಸೆದು ಬಿಡುವುದಾಗಿದೆ ಮತ್ತು ಸತ್ತೆಯ ಶಾಂತಿಯನ್ನು ಭದ್ರವಾಗಿ ಹಿಡಿದುಕೊಳ್ಳಬೇಕು, ಅದು ಮನಸ್ಸಿನ ತೊಂದರೆ ಹಾಗೂ ಬಂಡಾಯದ ಹಿಂದೆ ನಿಜವಾಗಿ ಯಾವಾಗಲೂ ಅಸ್ತಿತ್ವದಲ್ಲಿರುತ್ತದೆ. ಈ ರಹಸ್ಯ ಶಾಂತಿಯ ಮೇಲಿನ ಪರದೆ ಸರಿದಾಗ ಶ್ರೇಷ್ಠ ಶಾಂತಿ ಸತ್ತೆಯ ಮೇಲೆ ನೆಲೆಸುತ್ತದೆ ಮತ್ತು ಅದರೊಂದಿಗೆ ಸಾಮಾನ್ಯವಾಗಿ ಎಲ್ಲವನ್ನೂ ವ್ಯಾಪಿಸಿರುವ ನಿಶ್ಚಲನೀರವತೆಯಲ್ಲಿರುವ ಬ್ರಹ್ಮನ ಬಗ್ಗೆ ಗ್ರಹಿಕೆ ಹಾಗೂ ಅನುಭವ ಬರುತ್ತವೆ, ಉಳಿದದ್ದೆಲ್ಲವೂ ಮೊದಲು ರೂಪದಲ್ಲಿ, ಛಾಯಾರೂಪದಲ್ಲಿ ಇರುವಂತೆ ತೋರಿಬರುತ್ತದೆ. ಈ ಸ್ಥಿರತೆಯ ಆಧಾರದ ಮೇಲೆ ಇತರ ಪ್ರತಿಯೊಂದನ್ನು ಜ್ಞಾನದಲ್ಲಿ ಹಾಗೂ ಅನುಭವದಲ್ಲಿ ನಿರ್ಮಾಣಮಾಡಬಹುದು, ಇನ್ನು ಮುಂದೆ ಆ ನಿರ್ಮಾಣ ಶಾಶ್ವತ ಗೋಚರಸಂಗತಿಗಳನ್ನು ಕುರಿತಾಗಿರುವುದಿಲ್ಲ, ಆದರೆ ದೈವೀ ಪ್ರಕಟಣೆಯ ಆಳಾತಿ ಆಳದ ಸತ್ಯವನ್ನು ಕುರಿತಾಗಿರುತ್ತದೆ.

**(CWSA, 23/323–24)** **– ಶ್ರೀ ಅರವಿಂದರು**

*

**ತ್ಯಾಗ**

ಮತ್ತೆ ನಮ್ಮ ತ್ಯಾಗ, ಸ್ಪಷ್ಟವಾಗಿ, ಆಂತರಿಕ ತ್ಯಾಗವಾಗಿರಬೇಕು, ವಿಶೇಷವಾಗಿ, ಎಲ್ಲದಕ್ಕಿಂತಲೂ ಹೆಚ್ಚಾಗಿ ಇಂದ್ರಿಯಗಳಲ್ಲಿ ಹಾಗೂ ಹೃದಯದಲ್ಲಿ ಆಸೆಯ ಕಡುಬಯಕೆ, ಯೋಚನೆ ಹಾಗೂ ಕ್ರಿಯೆಗಳಲ್ಲಿ ಸ್ವ–ಸಂಕಲ್ಪ, ಪ್ರಜ್ಞೆಯ ಕೇಂದ್ರದಲ್ಲಿ ಅಹಂಭಾವವನ್ನು ತ್ಯಾಗಮಾಡಬೇಕು. ಏಕೆಂದರೆ ಈ ವಿಷಯಗಳು ಮೂರು ಗಂಟುಗಳಾಗಿರುತ್ತವೆ, ಅವುಗಳ ಮೂಲಕ ನಾವು ನಮ್ಮ ನಿಮ್ನತರ ಸ್ವಭಾವದ ಬಂಧನಕ್ಕೊಳಗಾಗಿರುತ್ತೇವೆ ಮತ್ತು ಇವು ಕೊನೆಗೊಳ್ಳುವಂತೆ ತ್ಯಾಗ ಮಾಡಿದರೆ ನಮ್ಮನ್ನು ಕಟ್ಟಿಹಾಕುವ ಬೇರೇನೂ ಇರುವುದಿಲ್ಲ. ಹಾಗಾಗಿ ಅಂಟಿಕೊಳ್ಳುವಿಕೆ ಹಾಗೂ ಆಸೆಗಳು ಕೊನೆಗೊಳ್ಳುವಂತೆ ಹೊರಗೆ ಚೆಲ್ಲಿಕೊಡಬೇಕು, ಜಗತ್ತಿನಲ್ಲಿ ನಾವು ಅಂಟಿಕೊಳ್ಳಬೇಕಾದುದು ಏನೂ ಇರುವುದಿಲ್ಲ, ಶ್ರೀಮಂತಿಕೆಯೂ ಅಲ್ಲ, ಬಡತನವೂ ಅಲ್ಲ, ಸಂತೋಷವೂ ಅಲ್ಲ, ವೇದನೆಯೂ ಅಲ್ಲ, ಜೀವನವೂ ಅಲ್ಲ, ಮೃತ್ಯುವೂ ಅಲ್ಲ, ಶ್ರೇಷ್ಠತೆಯೂ ಅಲ್ಲ, ಕೀಳರಿಮೆಯೂ ಅಲ್ಲ, ದುರ್ಗುಣವೂ

ಅಲ್ಲ, ಸದ್ಗುಣವೂ ಅಲ್ಲ, ಮಿತ್ರನಲ್ಲ, ಹೆಂಡತಿ ಅಲ್ಲ, ಮಕ್ಕಳಲ್ಲ, ದೇಶವಲ್ಲ, ನಮ್ಮ ಕಾರ್ಯವಾಗಲಿ ಮಣಿಹವಾಗಲಿ ಅಲ್ಲ, ಸ್ವರ್ಗವೂ ಅಲ್ಲ, ಪೃಥ್ವಿಯೂ ಅಲ್ಲ ಇಲ್ಲವೆ ಅವುಗಳಲ್ಲಿ ಇರುವುದಲ್ಲ, ಅದರಾಚೆಗೆ ಇರುವುದಲ್ಲ. ಇದರರ್ಥ ನಾವು ಪ್ರೀತಿಸಬಹುದಾದ ಏನೂ ಇರುವುದಿಲ್ಲ, ದಿವ್ಯಾನಂದವನ್ನು ಅನುಭವಕ್ಕೆ ತೆಗೆದುಕೊಳ್ಳುವ ಏನೂ ಇರುವುದಿಲ್ಲ, ಏಕೆಂದರೆ ಪ್ರೇಮದಲ್ಲಿ ಅಂಟಿಕೊಳ್ಳುವಿಕೆ ಅಹಂಭಾವ, ಮತ್ತು ಪ್ರೇಮವೇ ಸ್ವತಃ ಅಲ್ಲ, ಆಸೆ ಸೀಮಿತತೆ ಹಾಗೂ ಹರ್ಷಕ್ಕಾಗಿ ತೃಪ್ತಿಗಾಗಿ ಇರುವ ಹಸಿವಿನಲ್ಲಿ ರಕ್ಷಣೆ ಇಲ್ಲದಿರುವಿಕೆ, ಆದರೆ ವಸ್ತು–ವಿಷಯಗಳಲ್ಲಿ ದೈವೀ ದಿವ್ಯಾನಂದವನ್ನು ಅರಸುವುದಲ್ಲ.

ನಾವು ದೈವೀಕಾರ್ಯಗಳಲ್ಲಿ ಪರಿಪೂರ್ಣರಾಗಬೇಕಾದರೆ ನಾವು ಈಗಾಗಲೇ ನೋಡಿದಂತೆ ಯೋಚನೆ ಹಾಗೂ ಕ್ರಿಯೆಗಳಲ್ಲಿ ಸ್ವ–ಸಂಕಲ್ಪವನ್ನು ಪೂರ್ತಿ ತ್ಯಾಗ ಮಾಡಬೇಕು, ದೈವೀ ಜ್ಞಾನದಲ್ಲಿ ಪರಿಪೂರ್ಣರಾಗಬೇಕಾದರೆ ಅದನ್ನು ಸಮನಾದ ರೀತಿಯಲ್ಲಿ ತ್ಯಾಗಮಾಡಬೇಕು. ಈ ಸ್ವ–ಸಂಕಲ್ಪದ ಅರ್ಥ ಮಾನಸಿಕ ಅಹಂಭಾವ, ಅದು ತನ್ನ ಆದ್ಯತೆಗಳಿಗೆ, ರೂಢಿಗಳಿಗೆ, ಅದರ ಗತಕಾಲದ ಇಲ್ಲವೆ ವರ್ತಮಾನ ಕಾಲದ ಯೋಚನೆಯ ರೂಪತಾಳುವಿಕೆಗಳಿಗೆ, ದೃಷ್ಟಿಕೋನಕ್ಕೆ ಸಂಕಲ್ಪಕ್ಕೆ ಅಂಟಿಕೊಳ್ಳುತ್ತದೆ, ಏಕೆಂದರೆ ಅವುಗಳನ್ನು ಅದು ತಾನೇ ಎಂದು ಇಲ್ಲವೆ ತನ್ನದೇ ಎಂದು ಪರಿಗಣಿಸುತ್ತದೆ ಮತ್ತು ಅವುಗಳ ಸುತ್ತ "ನಾನೆನ್ನುವಿಕೆ" ಹಾಗೂ "ನನ್ನದೆನ್ನುವಿಕೆ" ಇವುಗಳ ಸೂಕ್ಷ್ಮ ಎಳೆಗಳೆನ್ನುವಂತೆ ಹೆಣೆಯುತ್ತದೆ ಮತ್ತು ಅವುಗಳಲ್ಲಿ ಜೇಡರ ಹುಳು ಜೀವಿಯ ಬಲೆಯಲ್ಲಿರುವಂತೆ ಇರುತ್ತದೆ, ಅದು ಕ್ಷೋಭೆಗೊಳಗಾಗುವುದನ್ನು ದ್ವೇಷಿಸುಸತ್ತದೆ, ಅದು ಜೇಡರ ಹುಳು ತನ್ನ ಬಲೆಯ ಮೇಲೆ ಆಕ್ರಮಣ ಮಾಡಿದಾಗ ಆಗುವ ರೀತಿಯದಾಗಿರುತ್ತದೆ. ಜೇಡರ ಹುಳು ತನ್ನ ಬಲೆಯ ಮೇಲೆ ಆಕ್ರಮಣವನ್ನು ದ್ವೇಷಿಸುವ ಹಾಗೆ ಹೊಸ ದೃಷ್ಟಿಕೋನ ಹಾಗೂ ರೂಪತಾಳುವಿಕೆಗಳಿಗೆ ಸ್ಥಳಾಂತರಿಸಿದರೆ ಅದು ಪರಕೀಯ ಎಂಬ ಭಾವನೆ ತಂದುಕೊಳ್ಳುತ್ತದೆ, ಅಸಂತುಷ್ಟವಾಗುತ್ತದೆ, ಜೇಡರ ಹುಳು ಕೂಡ ಅದನ್ನು ಬೇರೆ ಬಲೆಯಲ್ಲಿರಿಸಿದರೆ ಅಂತಹ ಭಾವನೆ ತಂದುಕೊಳ್ಳುತ್ತದೆ. ಈ ಅಂಟಿಕೊಳ್ಳುವಿಕೆಯನ್ನು ಮನಸ್ಸಿನಿಂದ ಇಡಿಯಾಗಿ ಕತ್ತರಿಸಿ ಹಾಕಬೇಕು. ಜಗತ್ತಿಗೆ ಹಾಗೂ ಜೀವನಕ್ಕೆ ನಾವು ಹೊಂದಿರುವ ಮನೋಭಾವವನ್ನು ಎಚ್ಚತ್ತುಕೊಂಡಿರದ ಮನಸ್ಸು ಅದು ಸ್ವಾಭಾವಿಕ ಅಂಶವೆಂದು ಹಿಡಿದುಕೊಂಡಿರುವುದನ್ನು ಬಿಟ್ಟುಕೊಡಬೇಕಷ್ಟೇ ಅಲ್ಲ,

ಆದರೆ ನಾವು ನಮ್ಮದೇ ಆದ ಮಾನಸಿಕ ರಚನೆಯಲ್ಲಿ ಬಂಧನಕ್ಕೊಳಗಾಗಿ ಉಳಿದುಕೊಳ್ಳಬಾರದು, ಇಲ್ಲವೆ ಯಾವುದೇ ಬೌದ್ಧಿಕ ಯೋಚನೆಯ ಪದ್ಧತಿಯಲ್ಲಿ, ಧಾರ್ಮಿಕ ಮತ ತತ್ವಗಳ ವ್ಯವಸ್ಥೆಯಲ್ಲಿ, ಇಲ್ಲವೆ ತಾರ್ಕಿಕ ತೀರ್ಮಾನಗಳಲ್ಲಿ ಉಳಿದುಕೊಳ್ಳಬಾರದು, ಮನಸ್ಸಿನ ಹಾಗೂ ಇಂದ್ರಿಯಗಳ ಜಾಲ ದೂರದೂರವಾಗುವಂತೆ ಕತ್ತರಿಸಬೇಕಷ್ಟೇ ಅಲ್ಲ, ಆದರೆ ಚಿಂತಕನ ಬಲೆ, ದೇವತಾ ಶಾಸ್ತ್ರಜ್ಞನ, ಚರ್ಚು ನಿರ್ಮಾಣ ಮಾಡುವವನ, ಬಲ ಶಬ್ದದ ಜಾಲಬಂಧಗಳು ಮತ್ತು ವಿಚಾರದ ದಾಸ್ಯ ಇವೆಲ್ಲವುಗಳಾಚೆಗೆ ಪಲಾಯನ ಮಾಡಬೇಕು.

**(CWSA, 23/329–330)** **– ಶ್ರೀ ಅರವಿಂದರು**

*

**ಅಂತರಂಗದಲ್ಲಿರುವ ಕಣ್ಣು ಎಲ್ಲವೂ ಆಗಿದೆ**

ಸಿದ್ಧಿ, ನೆರವೇರಿಕೆ ಕಂಡುಕೊಳ್ಳುವಿಕೆ, ಏಕೈಕ ದಿವ್ಯಾತ್ಮನ ಸೇವೆ ಇವು ನಮ್ಮಿಂದ ಒಂದು ಕ್ರಿಯೆಯನ್ನು ಒತ್ತಾಯದಿಂದ ಬೇಡುತ್ತವೆ, ಅದು ಇತರರಿಗೆ ಸ್ವ–ಸೇವೆ, ಇಲ್ಲವೆ ಅಹಂಭಾವದ ಅರ್ಥದಲ್ಲಿ ಸ್ವ–ದೃಢೀಕರಣ ಎಂದು ತೋರಿಬಂದರೆ ಇಲ್ಲವೆ ಅಹಂಭಾವದ ಸಂತೋಷಪಡುವಿಕೆ, ಸ್ವ–ಲೋಲುಪತೆ ಎಂದು ತೋರಿ ಬಂದರೆ ಆ ಕಾರ್ಯವನ್ನು ನಾವು ಮಾಡಬೇಕು, ಇತರ ಜನರ ಅಭಿಪ್ರಾಯಗಳಿಗಿಂತ ಹೆಚ್ಚಾಗಿ ಅಂತರಂಗದಲ್ಲಿರುವ ಮಾರ್ಗದರ್ಶಕನ ಆಳಿಕೆಗೆ ಒಳಗಾಗಬೇಕು. ಸುತ್ತುಮುತ್ತಲಿರುವ ವಾತಾವರಣದ ಪ್ರಭಾವ ಬಹಳಷ್ಟು ಸಲ ಬಹಳಷ್ಟು ಸೂಕ್ಷ್ಮರೂಪದಿಂದ ಕಾರ್ಯಮಾಡುತ್ತದೆ. ನಾವು ಆದ್ಯತೆ ನೀಡುತ್ತೇವೆ, ಬಹುಮಟ್ಟಿಗೆ ಅಪ್ರಜ್ಞೆಯಿಂದ ಉಡುಪು ಧರಿಸುತ್ತೇವೆ, ಅದು ಹೊರಗಿನಿಂದ ನೋಡುವವರಿಗೆ ಅತ್ಯಂತ ಒಳ್ಳೆಯದೆಂದು ಕಾಣಿಸುತ್ತದೆ ಮತ್ತು ನಾವು ಆಂತರಿಕ ಕಣ್ಣಿನ ಮೇಲೆ ಒಂದು ಪರದೆ ಬೀಳಲು ಅನುವು ಮಾಡಿಕೊಡುತ್ತೇವೆ, ನೆರಿಗೆನೆರಿಗೆಯಾಗುವಂತೆ ಅಳವಡಿಸಿದ ಉಡುಪು ಧರಿಸಿ ಹರಕೆಹೊತ್ತು ಕೈಕೊಂಡ ಬಡತನದಲ್ಲಿ, ಸೇವೆಗಾಗಿ ಇರುವ ಉಡುಪಿನಲ್ಲಿ, ಉದಾಸೀನತೆಯ ಹಾಗೂ ತ್ಯಾಗದ ಮತ್ತು ಸಂತತ್ವ ಇರುವ ನಿರ್ಮಲ ಸಂತತ್ವದ ಬಾಹ್ಯ ಸಾಕ್ಷಿಗಳನ್ನು ಒದಗಿಸುವುದರಲ್ಲಿ ನಾವು ಪ್ರಚೋದನೆಗೆ ಒಳಗಾಗುತ್ತೇವೆ, ಏಕೆಂದರೆ ಸಂಪ್ರದಾಯ, ಅಭಿಪ್ರಾಯ ನಮ್ಮಿಂದ ಅದನ್ನು ಒತ್ತಾಯದಿಂದ ಕೇಳುತ್ತದೆ ಮತ್ತು

ಅದರಿಂದಾಗಿ ನಮ್ಮ ಸುತ್ತುಮುತ್ತಲಿನ ವಾತಾವರಣದಲ್ಲಿ ಅನಿಸಿಕೆಯನ್ನು ಉಂಟುಮಾಡಬಹುದು. ಆದರೆ ಇದೆಲ್ಲ ಗರ್ವ ಹಾಗೂ ಭ್ರಮೆ. ಈ ವಸ್ತುಗಳನ್ನು ಧರಿಸಲು ನಮಗೆ ಕರೆಬಂದಿರಬಹುದು, ಏಕೆಂದರೆ ಅದು ನಮ್ಮ ಸೇವೆಯ ಸಮವಸ್ತ್ರವಾಗಿರಬಹುದು ಹಾಗೆಯೇ ಸಮನಾಗಿ ಆಗಿರಲಿಕ್ಕೂ ಇಲ್ಲ. ಮನುಷ್ಯನ ಬಾಹ್ಯ ಕಣ್ಣಿಗೆ ಮಹತ್ವವಿಲ್ಲ, ಅಂತರಂಗದ ಕಣ್ಣು ಎಲ್ಲವೂ ಆಗಿದೆ.

**(CWSA, 23/331) – ಶ್ರೀ ಅರವಿಂದರು**

*

**ತ್ಯಾಗ ಹಾಗೂ ಸಂತೋಷಪಡುವಿಕೆ**

ತ್ಯಾಗದ ವಿಚಾರಕ್ಕೆ ನಾವು ಕೊಡುತ್ತಿರುವ ವ್ಯಾಪ್ತಿ ಈಗಿನ ಸ್ಥಿತಿಯಲ್ಲಿ ಅದಕ್ಕೆ ಅಂಟಿಕೊಂಡ ಅರ್ಥದಿಂದ ಭಿನ್ನವಾಗಿದೆ ಎಂಬುದನ್ನು ನೋಡಲಾಗುವುದು. ಸದ್ಯದ ಸ್ಥಿತಿಯಲ್ಲಿ ಅದರ ಅರ್ಥ ಸ್ವ–ನಿರಾಕರಣೆ, ಹರ್ಷದ ನಿಷೇಧ, ಹರ್ಷ ನೀಡುವ ವಸ್ತುಗಳನ್ನು ನಿರಾಕರಿಸುವುದಾಗಿದೆ. ಮನುಷ್ಯನ ಆತ್ಮಕ್ಕೆ ಸ್ವ–ನಿರಾಕರಣೆ ಅವಶ್ಯವಾದ ಶಿಸ್ತುಪಾಲನೆಯಾಗಿದೆ, ಏಕೆಂದರೆ ಅವನ ಹೃದಯ ಅಜ್ಞಾನದಿಂದ ಅಂಟಿಕೊಂಡಿರುತ್ತದೆ, ಹರ್ಷದ ನಿಷೇಧ ಅವಶ್ಯವಾಗಿದೆ, ಏಕೆಂದರೆ ಅವನ ಹೃದಯ ಹಿಡಿತಕ್ಕೊಳಗಾಗಿದೆ, ಇಂದ್ರಿಯಗಳಿಗೆ ಸಂತೋಷ ನೀಡುವ ತೃಪ್ತಿಗಳ ಮಣ್ಣು ಲೇಪಿಸಿದ ಜೇನುತುಪ್ಪದಲ್ಲಿ ಅಡ್ಡಿಗೊಳಗಾಗಿದೆ; ಹರ್ಷ ನೀಡುವ ವಸ್ತುಗಳನ್ನು ನಿರಾಕರಿಸುವುದನ್ನು ಹೇರಲಾಗಿದೆ, ಏಕೆಂದರೆ ಮನಸ್ಸು ವಸ್ತುವಿನ ಮೇಲೆ ಸ್ಥಿರಗೊಳ್ಳುತ್ತದೆ, ಅದರಾಚೆಗೆ ಹೋಗಲು ಬಿಟ್ಟುಕೊಡುವುದಿಲ್ಲ, ಅಂತರಂಗದಲ್ಲಿ ತನ್ನನ್ನು ಬಿಟ್ಟುಕೊಡುವುದಿಲ್ಲ. ಮನುಷ್ಯನ ಮನಸ್ಸು ಈ ರೀತಿಯಲ್ಲಿ ಅಜ್ಞಾನಿಯಾಗಿರದಿದ್ದರೆ, ಅಂಟಿಕೊಳ್ಳುವಿಕೆ, ಅದರ ತಳಮಳದ ಅಶಾಶ್ವತೆಯಲ್ಲಿ ಬಂಧನಕ್ಕೊಳಗಾಗುವಿಕೆ, ವಸ್ತುಗಳ ರೂಪದಿಂದ ಭ್ರಮೆಗೊಳ–ಗಾಗುವಿಕೆ ಇವೆಲ್ಲ ಇರದಿದ್ದರೆ ತ್ಯಾಗದ ಆವಶ್ಯಕತೆ ಉಳಿದುಕೊಳ್ಳುತ್ತಿರಲಿಲ್ಲ; ಆತ್ಮ ದಿವ್ಯಾನಂದದ ಮಾರ್ಗದಲ್ಲಿ ಕಡಿಮೆಯಾದುದರಿಂದ ಶ್ರೇಷ್ಠತರವಾದುದೆಡೆಗೆ, ಸಂತೋಷದಿಂದ ದೈವೀ ಸಂತೋಷದೆಡೆಗೆ ಪ್ರಯಾಣ ಮಾಡಬಹುದಿತ್ತು. ಸದ್ಯ ಅದು ವ್ಯಾವಹಾರಿಕವಾದದ್ದಲ್ಲ. ಅದು ಅಂಟಿಕೊಂಡಿರುವ ಪ್ರತಿಯೊಂದನ್ನು ತನ್ನಂತರಂಗದಿಂದ ಬಿಟ್ಟುಕೊಡಬೇಕು, ಅದರಿಂದಾಗಿ ತಮ್ಮಲ್ಲಿ ನೈಜತೆ–ಯುಳ್ಳವುಗಳನ್ನು ಲಾಭದ ರೀತಿಯಲ್ಲಿ ಪಡೆಯಬಹುದು. ಬಾಹ್ಯದಲ್ಲಿ ತ್ಯಾಗ

ಅವಶ್ಯವಾಗಿರುವುದಿಲ್ಲ, ಆದರೆ ಅದು ಸ್ವಲ್ಪ ಸಮಯದವರೆಗೆ ಅವಶ್ಯವಾಗಿರುತ್ತದೆ, ಅನೇಕ ವಿಷಯಗಳಲ್ಲಿ ಅತ್ಯಗತ್ಯವಾಗಿರುತ್ತದೆ, ಕೆಲವೊಮ್ಮೆ ಎಲ್ಲದರಲ್ಲಿ ಉಪಯುಕ್ತವಾಗಿರುತ್ತದೆ. ಸಂಪೂರ್ಣ ಬಾಹ್ಯತ್ಯಾಗ ಒಂದು ಹಂತವಾಗಿರುತ್ತದೆ, ಅದರ ಮೂಲಕ ಆತ್ಮ ಪ್ರಗತಿಯಲ್ಲಿ ದಾಟಿಕೊಂಡು ಹೋಗಬೇಕಾಗುತ್ತದೆ, ಆದಾಗ್ಯೂ ಅದು ಸ್ವ–ಸಂಕಲ್ಪದಿಂದ ಕೈಕೊಳ್ಳಲಾದ ಹಿಂಸಾಚಾರ, ಹಾಗೂ ಭೀಕರ ಸ್ವರೂಪದ ವೇದನೆ ಇವುಗಳನ್ನು ಹೊಂದಿರಬಾರದು, ಅವು ನಮ್ಮೊಳಗಿರುವ ಭಗವಂತನಿಗೆ ಅಪರಾಧವಾಗಿರುತ್ತವೆ. ಆದರೆ ಕೊನೆಯಲ್ಲಿ ಈ ತ್ಯಾಗ ಇಲ್ಲವೆ ಸ್ವ–ನಿರಾಕರಣೆ ಉಪಕರಣ ರೂಪದಲ್ಲಿರುತ್ತವೆ, ಅದರ ಉಪಯೋಗದ ಅವಧಿ ದಾಟಿಕೊಂಡು ಹೋಗುತ್ತದೆ. ವಸ್ತುವನ್ನು ನಿರಾಕರಿಸುವ ಅವಧಿ ನಿಂತು ಹೋಗಿರುತ್ತದೆ, ಆಗ ಆ ವಸ್ತು ನಮ್ಮನ್ನು ಇನ್ನು ಮುಂದೆ ನಿರಾಕರಿಸುವ ಅವಧಿ ನಿಂತು ಹೋಗಿರುತ್ತದೆ, ಆಗ ಆ ವಸ್ತು ನಮ್ಮನ್ನು ಇನ್ನು ಮುಂದೆ ಬಲೆಯಲ್ಲಿರಿಸುವುದಿಲ್ಲ, ಆತ್ಮ ಸಂತೋಷಪಡುವುದು ಆ ವಸ್ತುವನ್ನು ಕುರಿತಾಗಿರುವುದಿಲ್ಲ, ಆದರೆ ಭಗವಂತ ಅಭಿವ್ಯಕ್ತಪಡಿಸುವ ವಸ್ತುವಾಗಿರುತ್ತದೆ ಹರ್ಷದ ನಿಷೇಧ ಇನ್ನು ಮುಂದೆ ಅವಶ್ಯವಾಗಿರುವುದಿಲ್ಲ, ಆಗ ಆತ್ಮ ಇನ್ನು ಮುಂದೆ ಹರ್ಷವನ್ನು ಅರಸುತ್ತಿರುವುದಿಲ್ಲ, ಎಲ್ಲ ವಿಷಯಗಳಲ್ಲಿ ಸಮನಾಗಿ ಭಗವಂತನ ದಿವ್ಯಾನಂದವನ್ನು ವಶಪಡಿಸಿಕೊಂಡಿರುತ್ತದೆ, ಸ್ವತಃ ಆ ವಸ್ತುವನ್ನು ವೈಯಕ್ತಿಕವಾಗಿ ಇಲ್ಲವೆ ಭೌತಿಕವಾಗಿ ವಶದಲ್ಲಿ ಇಟ್ಟುಕೊಳ್ಳುವ ಆವಶ್ಯಕತೆ ಇರುವುದಿಲ್ಲ, ಸ್ವ–ನಿರಾಕರಣೆ ತನ್ನ ಕ್ಷೇತ್ರವನ್ನು ಕಳೆದುಕೊಳ್ಳುತ್ತದೆ, ಆಗ ಇನ್ನುಮುಂದೆ ಆತ್ಮ ಯಾವುದರ ಮೇಲೂ ಹಕ್ಕು ಸಾಧಿಸುವುದಿಲ್ಲ, ಆದರೆ ಎಲ್ಲ ಸತ್ತೆಗಳಲ್ಲಿರುವ ಏಕೈಕ ದಿವ್ಯಾತ್ಮನ ಸಂಕಲ್ಪವನ್ನು ಪ್ರಜ್ಞಾಪೂರ್ವಕವಾಗಿ ವಿಧೇಯತೆಯಿಂದ ಪಾಲಿಸುತ್ತದೆ. ಭವ್ಯ ನಿಯಮದಿಂದ ಆಗ ನಾವು ಮುಕ್ತರಾಗಿ–ರುತ್ತೇವೆ ಮತ್ತು ದಿವ್ಯಾತ್ಮನ ಮುಕ್ತಿಯಲ್ಲಿ ನಮ್ಮನ್ನು ಬಿಟ್ಟುಕೊಡಲಾಗಿರುತ್ತದೆ.

**(CWSA, 23/333)** **– ಶ್ರೀ ಅರವಿಂದರು**

*

**ನಿರ್ಲಿಪ್ತತೆ**

ಪ್ರಯತ್ನ ಮಾಡಿದರೆ ಮನಸ್ಸಿಗೆ ನಿರ್ಲಿಪ್ತತೆಯ ಈ ಸಾಮರ್ಥ್ಯವಿದೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ, ಅದು ದೇಹದಿಂದ ಹಿಂದೆ ನಿಲ್ಲಬಲ್ಲದು,

ಕೇವಲ ವಿಚಾರದಲ್ಲಿ ಅಷ್ಟೇಅಲ್ಲ, ಭೌತಿಕವಾಗಿರುವಂತೆ, ಅದಕ್ಕೂ ಹೆಚ್ಚಾಗಿ ಪ್ರಾಣಿಕವಾಗಿರುವಂತೆ ನಿಲ್ಲಬಲ್ಲದು. ದೇಹಕ್ಕೆ ಸಂಬಂಧಿಸಿದ ವಿಷಯಗಳಿಗೆ ಉದಾಸೀನ ಮನೋಭಾವದಿಂದ ಮನಸ್ಸಿನ ಈ ನಿರ್ಲಿಪ್ತತೆಯನ್ನು ಬಲಪಡಿಸಬೇಕು. ಅತ್ಯಾವಶ್ಯಕವಾಗಿ ಅದರ ನಿದ್ರೆ ಇಲ್ಲವೆ ಅದರ ಎಚ್ಚತ್ತಿರುವಿಕೆ, ಅದರ ಚಲನೆ ಇಲ್ಲವೆ ವಿಶ್ರಾಂತಿ, ಅದರ ನೋವು ಇಲ್ಲವೆ ಅದರ ಹರ್ಷ, ಅದರ ಆರೋಗ್ಯ ಇಲ್ಲವೆ ಅನಾರೋಗ್ಯ, ಅದರ ಜೀವಶಕ್ತಿ ಇಲ್ಲವೆ ದಣಿವು, ಅದರ ಸೌಖ್ಯ ಇಲ್ಲವೆ ಅಸೌಖ್ಯ, ಅದು ಏನು ತಿನ್ನುತ್ತದೆ ಇಲ್ಲವೆ ಕುಡಿಯುತ್ತದೆ ಎಂಬುದನ್ನು ಕುರಿತು ಕಾಳಜಿ ಮಾಡಬಾರದು. ಇದರರ್ಥ ನಮಗೆ ಸಾಧ್ಯವಾಗುವಷ್ಟು ದೇಹವನ್ನು ನಾವು ಸರಿಯಾದ ಕ್ರಮಬದ್ಧ ರೀತಿಯಲ್ಲಿ ಕಾಪಾಡಿಕೊಂಡು ಬರುವುದಿಲ್ಲ ಎಂದಲ್ಲ, ನಾವು ಹಿಂಸಾತ್ಮಕ ವೈರಾಗ್ಯದಲ್ಲಿ ಇಲ್ಲವೆ ಧನಾತ್ಮಕವಾಗಿ ಭೌತಿಕ ಚೌಕಟ್ಟಿನ ಬಗ್ಗೆ ನಿಷ್ಕಾಳಜಿ ಇವುಗಳಲ್ಲಿ ಬಿದ್ದುಬಿಡಬಾರದು. ಆದರೆ ನಾವು ಮನಸ್ಸಿನಲ್ಲಿ ಹಸಿವೆ ಇಲ್ಲವೆ ನೀರಡಿಕೆ ಇಲ್ಲವೆ ಅಸೌಖ್ಯ ಇಲ್ಲವೆ ಅನಾರೋಗ್ಯ ಇವುಗಳ ಪರಿಣಾಮಕ್ಕೊಳಗಾಗಬಾರದು, ಅಂತಹದನ್ನು ಭೌತಿಕ ಹಾಗೂ ಪ್ರಾಣಿಕ ಮನುಷ್ಯ ದೇಹದ ವಿಷಯಗಳಿಗೆ ಅಂಟಿಸುತ್ತಾನೆ, ಅವು ಗೌಣವಾಗಿರುತ್ತವೆ, ಮತ್ತು ಕೇವಲ ಉಪಕರಣದ ಮಹತ್ವವುಳ್ಳದ್ದಾಗಿರುತ್ತವೆ. ಈ ಉಪಕರಣದ ಮಹತ್ವ ಆವಶ್ಯಕತೆಯ ಪ್ರಮಾಣವನ್ನು ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಬಾರದು. ಉದಾಹರಣೆಗೆ ಮನಸ್ಸಿನ ಪರಿಶುದ್ಧತೆ ನಾವು ಸೇವಿಸುವ ಆಹಾರದ ಮೇಲೆ ಇಲ್ಲವೆ ಪಾನೀಯದ ಮೇಲೆ ಅವಲಂಬಿಸಿರುತ್ತದೆ ಎಂದು ಕಲ್ಪನೆ ಮಾಡಿಕೊಳ್ಳಬಾರದು, ಆದಾಗ್ಯೂ ಒಂದು ಹಂತದಲ್ಲಿ ಆಹಾರ ಹಾಗೂ ಪಾನೀಯಗಳನ್ನು ಸೇವಿಸುವುದರಲ್ಲಿ ಕಟ್ಟುನಿಟ್ಟುಗಳು ಆಂತರಿಕ ಪ್ರಗತಿಗೆ ಉಪಯುಕ್ತವಾಗಿರುತ್ತವೆ, ಇನ್ನೊಂದೆಡೆಗೆ ಮನಸ್ಸಿನ ಇಲ್ಲವೆ ಜೀವನದ ಅವಲಂಬನೆ ಆಹಾರ ಹಾಗೂ ಪಾನೀಯಗಳ ಸೇವನೆ ಇವು ರೂಢಿಗಿಂತ ಬೇರೇನೂ ಅಲ್ಲ ಎಂದು ಇವೆರಡು ತತ್ವಗಳ ನಡುವೆ ಪ್ರಕೃತಿ ರೂಢಿಗತ ಸಂಬಂಧವನ್ನಿರಿಸಿದೆ ಎಂದು ಯೋಚಿಸಬಾರದು. ವಾಸ್ತವದಲ್ಲಿ ನಾವು ಸೇವಿಸುವ ಆಹಾರವನ್ನು ತದ್ವಿರುದ್ಧ ರೂಢಿ ಹಾಗೂ ಸಂಬಂಧಗಳ ಮೂಲಕ ಕನಿಷ್ಠಮಟ್ಟಕ್ಕೆ ಕುಗ್ಗಿಸಬಹುದು, ಮಾನಸಿಕ ಹಾಗೂ ಪ್ರಾಣಿಕ ಜೀವಶಕ್ತಿ ಯಾವುದೇ ರೀತಿಯಲ್ಲಿ ಕುಗ್ಗುವುದಿಲ್ಲ. ತದ್ವಿರುದ್ಧವಾಗಿಯೂ ಕೂಡ ನ್ಯಾಯಯುತವಾದ ಅಭಿವೃದ್ಧಿ–

ಯೊಂದಿಗೆ ಅವು ಶ್ರೇಷ್ಠತರ ಜೀವಶಕ್ತಿಯ ಕಾರ್ಯ ಸಂಭಾವ್ಯತೆಯನ್ನು ಹೊಂದಲು ತರಬೇತು ನೀಡಬಹುದು, ಅವು ಭೌತಿಕ ಆಹಾರಗಳ ಅಲ್ಪ ಪ್ರಮಾಣದೊಂದಿಗೆ ಸಂಬಂಧ ಹೊಂದಿರುವುದಿಕ್ಕಿಂತ ಹೆಚ್ಚಿನ ರೀತಿಯಲ್ಲಿ ಮಾನಸಿಕ ಹಾಗೂ ಪ್ರಾಣಿಕ ಚೈತನ್ಯಗಳ ರಹಸ್ಯ ಕಾರಂಜಿಗಳ ಮೇಲೆ ನೆಚ್ಚಿಕೊಳ್ಳುವುದರಿಂದ ಅದನ್ನು ಪಡೆಯಬಹುದು.

**(CWSA, 23/343–44)** **– ಶ್ರೀ ಅರವಿಂದರು**

*

**ಆಂತರಿಕ ಪ್ರತ್ಯೇಕತೆ**

ಆದ್ದರಿಂದ ಮಾನಸಿಕ ದೈವೀ ಪುರುಷ ಆಸೆಯ ಮನಸ್ಸಿನೊಂದಿಗೆ ಸಹವಾಸ ಮತ್ತು ಸ್ವ–ಗುರುತಿಸಿಕೊಳ್ಳುವಿಕೆ ಇವುಗಳಿಂದ ತನ್ನನ್ನು ಪ್ರತ್ಯೇಕಗೊಳಿಸಬೇಕು. ಅವನು ಹೇಳಬೇಕು: "ಹೋರಾಡುವ ಮತ್ತು ವೇದನೆಪಡುವ, ದುಃಖಿಸುವ ಹಾಗೂ ಸಂತೋಷಪಡುವ, ಪ್ರೀತಿಸುವ ಹಾಗೂ ದ್ವೇಷಿಸುವ, ಭರವಸೆ ತಾಳುವ ಹಾಗೂ ಭಗ್ನಗೊಳ್ಳುವ, ಸಿಟ್ಟಿಗೇಳುವ ಹಾಗೂ ಹೆದರಿಕೊಳ್ಳುವ, ಪ್ರಸನ್ನ ಹಾಗೂ ನಿರಾಶೆಗೊಳಗಾಗುವ ಪ್ರಾಣಿಕ ಮನೋಭಾವಗಳಿಗೆ ಹಾಗೂ ಮನೋವಿಕಾರದ ಭಾವೋದ್ರೇಕಗಳಿರುವ ಈ ವಸ್ತು ನಾನಲ್ಲ. ಇವೆಲ್ಲವೂ ಸಂವೇದನಾತ್ಮಕ ಹಾಗೂ ಮನೋವಿಕಾರವಿರುವ ಮನಸ್ಸಿನಲ್ಲಿ ಕೇವಲ ಪ್ರಕೃತಿಯ ಕಾರ್ಯಗತಿಗಳು." ಮನಸ್ಸು ಆಗ ತನ್ನ ಮನೋವಿಕಾರಗಳಿಂದ ಹಿಂದೆಳೆದುಕೊಳ್ಳುತ್ತದೆ ಮತ್ತು ಇವುಗಳೊಂದಿಗೆ, ದೈಹಿಕ ಚಲನೆಗಳು ಹಾಗೂ ಅನುಭವಗಳಿಗಿರುವ ರೀತಿಯಲ್ಲಿ ಅವಲೋಕನ ಮಾಡುತ್ತದೆ ಇಲ್ಲವೆ ಸಾಕ್ಷಿಯಾಗುತ್ತದೆ. ಅಲ್ಲಿ ಈ ಮನೋವಿಕಾರದ ಮನಸ್ಸಿರುತ್ತದೆ, ಅದರಲ್ಲಿ ಈ ಎಲ್ಲ ಮನಸ್ಥಿತಿಗಳು ಹಾಗೂ ಭಾವೋದ್ರೇಕಗಳು ಆಗುವುದನ್ನು ಮುಂದುವರಿಸುತ್ತವೆ, ಅವು ಪ್ರಕೃತಿಯ ಚಿತ್ತಸ್ಥಿತಿಗಳ ರೂಢಿಗನುಸಾರವಾಗಿ ಇರುತ್ತವೆ ಮತ್ತು ಅಲ್ಲಿ ಅವಲೋಕನ ಮಾಡುವ ಮನಸ್ಸಿರುತ್ತದೆ, ಅದು ಅವುಗಳನ್ನು ನೋಡುತ್ತದೆ, ಅಭ್ಯಾಸ ಮಾಡುತ್ತದೆ, ಅರ್ಥ ಮಾಡಿಕೊಳ್ಳುತ್ತದೆ, ಆದರೆ ಅವುಗಳಿಗೆ ಅಂಟಿಕೊಳ್ಳುವುದಿಲ್ಲ. ಅಲ್ಲಿ ಅವಲೋಕನ ಮಾಡುವ ಮನಸ್ಸು ತನ್ನಿಂದ ಬೇರೆಯವರಾದ ಗಣ್ಯಪುರುಷರ ಮಾನಸಿಕ ಹಂತದ ಮೇಲೆ ಒಂದು ಬಗೆಯ ಕ್ರಿಯೆ ಹಾಗೂ ಲೀಲೆ ನಡೆಸುತ್ತ ಇರುವ ರೀತಿಯಲ್ಲಿ ಕೈಕೊಳ್ಳುತ್ತದೆ.

ಮೊದಲು ಅಭಿರುಚಿ, ಗುರುತಿಸಿಕೊಳ್ಳುವಿಕೆಯ ಮರಳುವಿಕೆ ಇರುವ ರೂಢಿಯಿಂದ, ನಂತರ ಇಡಿಯಾದ ಸ್ಥಿರತೆ ಹಾಗೂ ನಿರ್ಲಿಪ್ತತೆಯಿಂದ ಮತ್ತು ಕೊನೆಗೆ ಸ್ಥಿರತೆಯನ್ನಷ್ಟೇ ಅಲ್ಲ, ತನ್ನದೇ ನಿಶ್ಚಲ ನೀರವತೆಯಲ್ಲಿರುವ ಅಸ್ತಿತ್ವದ ಪರಿಶುದ್ಧ ದಿವ್ಯಾನಂದವನ್ನು ಸಿದ್ಧಿಸಿಕೊಳ್ಳುವುದನ್ನು ಅವಲೋಕಿಸುತ್ತದೆ, ಅಲ್ಲಿ ಅವುಗಳ ನೈಜತೆ ಇಲ್ಲದಿರುವುದನ್ನು ಕುರಿತು ಮುಗುಳ್ನಗೆಯಿರುತ್ತದೆ. ಅದು ಆಟವಾಡುತ್ತಿರುವ ಮಗು ಆಟದಲ್ಲಿ ತನ್ನನ್ನು ಕಳೆದುಕೊಂಡು ಕಾಲ್ಪನಿಕ ಸುಖ–ದುಃಖಗಳನ್ನು ಅನುಭವಿಸುವ ರೀತಿಯದಾಗಿರುತ್ತದೆ. ಎರಡನೆಯದಾಗಿ ಅದು ಅನುಮತಿ ನೀಡುವ ಪ್ರಭುವಾಗಿರುವುದರ ಬಗ್ಗೆ ಅರಿವು ತಂದುಕೊಳ್ಳುತ್ತದೆ. ಅವನು ಅನುಮತಿಯನ್ನು ಹಿಂತೆಗೆದುಕೊಳ್ಳುವುದರ ಮೂಲಕ ಈ ಲೀಲೆ ನಿಂತು ಹೋಗುವಂತೆ ಮಾಡಬಲ್ಲನು. ಅನುಮತಿಯನ್ನು ಹಿಂತೆಗೆದುಕೊಳ್ಳುವುದರ ಮೂಲಕ ಈ ಲೀಲೆ ನಿಂತು ಹೋಗುವಂತೆ ಮಾಡಬಲ್ಲನು. ಅನುಮತಿಯನ್ನು ಹಿಂತೆಗೆದುಕೊಂಡಾಗ ಇನ್ನೊಂದು ಪ್ರಾಮುಖ್ಯತೆಯುಳ್ಳ ಗೋಚರ ಸಂಗತಿ ಸಂಭವಿಸುತ್ತದೆ, ಮನೋವಿಕಾರದ ಮನಸ್ಸು ಸಾಮಾನ್ಯವಾಗಿ ಸ್ಥಿರ, ಪರಿಶುದ್ಧ ಮತ್ತು ಈ ಪ್ರತಿಕ್ರಿಯೆಗಳಿಂದ ಮುಕ್ತ ಆಗಿರುತ್ತದೆ, ಅವು ಬಂದಾಗಲೂ ಕೂಡ ಅವು ಇನ್ನು ಮುಂದೆ ಅಂತರಂಗದಿಂದ ಮೇಲೆದ್ದು ಬರುವುದಿಲ್ಲ, ಆದರೆ ಅದರ ಮೇಲೆ ಬಾಹ್ಯದಿಂದ ಪರಿಣಾಮದ ರೀತಿಯಲ್ಲಿ ಬೀಳುತ್ತಿರುವಂತೆ ತೋರಿಬರುತ್ತವೆ, ಅವುಗಳಿಗೆ ನಾರುಗಳು ಇನ್ನೂ ಪ್ರತಿಕ್ರಿಯಿಸಲು ಶಕ್ತವಾಗಿರುತ್ತವೆ, ಆದರೆ ಪ್ರತಿಸ್ಪಂದಿಸುವ ಈ ರೂಢಿ ಮೃತ್ಯುವನ್ನಪ್ಪುತ್ತದೆ ಮತ್ತು ಮನೋವಿಕಾರದ ಮನಸ್ಸು ಸಕಾಲದಲ್ಲಿ ಇಡಿಯಾಗಿ ತ್ಯಾಗ ಮಾಡಿದ ಭಾವೋದ್ರೇಕಗಳಿಂದ ಇಡಿಯಾಗಿ ವಿಮೋಚನೆ ಪಡೆಯುತ್ತದೆ. ಭರವಸೆ ಹಾಗೂ ಭಯ, ಸಂತೋಷ ಹಾಗೂ ದುಃಖ, ಒಲವಿರುವಿಕೆ ಹಾಗೂ ಒಲವಿಲ್ಲದಿರುವಿಕೆ, ಆಕರ್ಷಣೆ ಹಾಗೂ ಹಿಮ್ಮೆಟ್ಟುಸುವಿಕೆ, ತೃಪ್ತಿ ಹಾಗೂ ಅತೃಪ್ತಿ, ಹರ್ಷ ಹಾಗೂ ನಿರಾಶೆ, ನಡುಕ ಹುಟ್ಟಿಸುವ ಗಾಬರಿ ಹಾಗೂ ಕಡುಕೋಪ, ಭಯ, ಜುಗುಪ್ಸೆ ಹಾಗೂ ನಾಚಿಕೆ ಹಾಗೂ ಪ್ರೇಮದ ಹಾಗೂ ದ್ವೇಷದ ಭಾವೋದ್ರೇಕಗಳು ವಿಮೋಚನೆಗೊಂಡ ಚೈತ್ಯಸತ್ತೆಯಿಂದ ದೂರದಲ್ಲಿ ಪತನಗೊಳ್ಳುವವು.

**(CWSA, 23/353)** – ಶ್ರೀ ಅರವಿಂದರು

*

ಶುದ್ಧಿ, ಮುಕ್ತಿ, ಸಿದ್ಧಿ ಹಾಗೂ ಭುಕ್ತಿ ಇವು ಯೋಗದ ರಚನೆಗಾಗಿ ಇರುವ ಅಂಶಗಳು.

**(CWSA, 24/639)** **– ಶ್ರೀ ಅರವಿಂದರು**

*

**ಜಗತ್ತಿನಲ್ಲಿ ದೇವನನ್ನು ತಿಳಿದುಕೊಳ್ಳುವುದು ಹಾಗೂ ನೋಡುವುದು**

ಯೋಗಿಯು ಸಾಂತವಾದುದರಲ್ಲಿ ದೇವನನ್ನು ನೋಡುವುದನ್ನು ಹಾಗೂ ತಿಳಿದುಕೊಳ್ಳುವುದನ್ನು ಮತ್ತು ದೈವೀ ಪ್ರಜ್ಞೆಗೆ ಹಾಗೂ ದೈವೀ ಕ್ರಿಯೆಗೆ ವಾಹಿನಿಯಾಗುವುದನ್ನು ಮುಂದುವರಿಸುತ್ತಾನೆ, ಹಾಗಾಗಿ ಜಗತ್ತಿನ ಜ್ಞಾನ, ಜೀವನಕ್ಕೆ ಸೇರಿದುದೆಲ್ಲವನ್ನು ಭವ್ಯವಾಗಿಸುವುದು ಹಾಗೂ ಮೇಲಕ್ಕೆತ್ತುವುದು ಅವನ ವ್ಯಾಪ್ತಿಯಲ್ಲಿ ಬರುತ್ತದೆ. ಕೇವಲ, ಎಲ್ಲದರಲ್ಲಿ ದೇವನನ್ನು ಪರಮೋಚ್ಚ ನೈಜತೆಯನ್ನು ನೋಡುತ್ತಾನೆ. ಅವನ ಕಾರ್ಯದ ಉದ್ದೇಶ ದೇವನ ಜ್ಞಾನದತ್ತ, ಪರಮೋಚ್ಚ ನೈಜತೆಯನ್ನು ವಶಪಡಿಸಿಕೊಳ್ಳುವತ್ತ ಮನುಕುಲಕ್ಕೆ ಸಹಾಯ ಮಾಡುವುದಿರುತ್ತದೆ, ಅವನು ದೇವನನ್ನು ವಿಜ್ಞಾನದ ದತ್ತಾಂಶಗಳಿಗೆ ಮೂಲಕ, ತತ್ವಜ್ಞಾನದ ಸಾರಸಂಗ್ರಹದ ಮೂಲಕ, ಸೌಂದರ್ಯದ ರೂಪಗಳು ಹಾಗೂ ಒಳ್ಳೆಯದರ ರೂಪಗಳು ಇವುಗಳ ಮೂಲಕ, ಜೀವನದ ಎಲ್ಲ ಚಟುವಟಿಕೆಗಳ ಮೂಲಕ, ಜಗತ್ತಿನ ಗತಕಾಲ ಹಾಗೂ ಅದರ ಪರಿಣಾಮಗಳಲ್ಲಿ, ಸದ್ಯದ ಕಾಲ ಹಾಗೂ ಅದರ ಪ್ರವೃತ್ತಿಗಳಲ್ಲಿ, ಭವಿಷ್ಯತ್ತಿನಲ್ಲಿ ಹಾಗೂ ಅದರ ಶ್ರೇಷ್ಠ ಮುಂದುವರಿಕೆಯಲ್ಲಿ ಕಾಣುತ್ತಾನೆ. ಇವುಗಳಲ್ಲಿ ಯಾವುದರಲ್ಲಿಯೇ ಆಗಲಿ ಇಲ್ಲವೆ ಎಲ್ಲವುಗಳಲ್ಲಿಯೇ ಆಗಲಿ ಅವನು ತನ್ನ ಜ್ಞಾನೋದಯ ಪಡೆದ ದರ್ಶನವನ್ನು ಮತ್ತು ಆತ್ಮದ ಮುಕ್ತಗೊಂಡ ಸಾಮರ್ಥ್ಯವನ್ನು ತರಬಲ್ಲನು. ನಿಮ್ನತರ ಜ್ಞಾನ ಒಂದು ಹೆಜ್ಜೆಯಾಗಿತ್ತು, ಅದರಿಂದ ಅವನು ಉಚ್ಚತರವಾದದ್ದರತ್ತ ಏರಿಹೋಗಿದ್ದಾನೆ, ಉಚ್ಚತರವಾದದ್ದು ನಿಮ್ನತರವಾದದ್ದನ್ನು ಪ್ರಕಾಶಿಸುತ್ತದೆ ಹಾಗೂ ಅದನ್ನು ತನ್ನದೇ ಭಾಗವನ್ನಾಗಿ ಮಾಡಿಕೊಳ್ಳುತ್ತದೆ ಅದನ್ನು ಕೇವಲ ಅದರ ನಿಮ್ನತರ ಅಂಚಿನಲ್ಲಿ ಮತ್ತು ಬಾಹ್ಯ ತೇಜೋರಾಶಿಯನ್ನು ಹೊರಸೂಸುವುದರಲ್ಲಿ ಮಾಡಬಹುದು.

**(CWSA, 23/517–18)** **– ಶ್ರೀ ಅರವಿಂದರು**

*

ಸೂರ್ಯಕಾಂತಿ ಹೂವು ಸೂರ್ಯನತ್ತ ಹೊರಳುವ ರೀತಿಯಲ್ಲಿ ಆತ್ಮ ಇಲ್ಲವೆ ಚೈತ್ಯಸತ್ತೆ ದೈವೀಸತ್ಯದತ್ತ ಹೊರಳುವುದು ಅದರ ಸ್ವಭಾವವೇ ಆಗಿರುತ್ತದೆ, ದೈವಿಕವಾದುದೆಲ್ಲದಕ್ಕೆ ಇಲ್ಲವೆ ದೈವತ್ವದತ್ತ ಪ್ರಗತಿ ಸಾಧಿಸುತ್ತಿರುವುದಕ್ಕೆ ಒಪ್ಪಿಗೆ ನೀಡುತ್ತದೆ ಮತ್ತು ಅಂಟಿಕೊಳ್ಳುತ್ತದೆ, ಅದೆಲ್ಲದರ ತಪ್ಪುಬಳಕೆ ಇಲ್ಲವೆ ಅದರ ನಿರಾಕರಣೆಯಾದುದರಿಂದ, ಮಿಥ್ಯೆ ಹಾಗೂ ಅದೈವಿಕವಾದುದರಿಂದ ಹಿಂದೆಗೆಯುತ್ತದೆ.

**(CWSA, 23/153)** **– ಶ್ರೀ ಅರವಿಂದರು**

*



ಅಜ್ಞಾನವಿರುವ, ಸೀಮಿತ ಹಾಗೂ ಅಹಂಭಾವದ ಪ್ರಜ್ಞೆ ಪವಾಡಗಳನ್ನು ಒತ್ತಾಯದಿಂದ ಬೇಡುತ್ತದೆ. ಮನುಷ್ಯ ಜ್ಞಾನೋದಯ ಪಡೆದ ಕೂಡಲೆ ಎಲ್ಲೆಡೆಯಲ್ಲಿ ಹಾಗೂ ಯಾವಾಗಲೂ ಪವಾಡಗಳಿರುವುದನ್ನು ತಿಳಿದುಕೊಳ್ಳುತ್ತಾನೆ.

ಈ ಪವಾಡದಲ್ಲಿ ಹಾಗೂ ದೈವೀಕೃಪೆಯಲ್ಲಿ ಹೆಚ್ಚಿನ ನಂಬಿಕೆಯನ್ನು ಹೊಂದಿದ ಹಾಗೆ ಅವನು ಅದನ್ನು ನೋಡಲು, ಹೆಚ್ಚು ಸಾಮರ್ಥ್ಯ ಹೊಂದಿದವನಾಗುತ್ತಾನೆ ಇಲ್ಲವೆ ಅದನ್ನು ಸತತ ಗ್ರಹಿಸುತ್ತ ಅದಿರುವ ಪ್ರತಿಯೊಂದು ಸ್ಥಳದಲ್ಲಿ ಅದನ್ನು ನೋಡಲು ಅಜ್ಞಾನ, ನಂಬಿಕೆಯಲ್ಲಿ ಕೊರತೆ, ಕುರುಡು ಅಹಂಭಾವ ಇವು ಮನುಷ್ಯ ನೋಡುವುದಕ್ಕೆ ತಡೆ ಉಂಟುಮಾಡುತ್ತವೆ.

**(CWM, 7/379)** **– ಶ್ರೀಮಾತೆ**

*

## ದೈವೀ ಪ್ರೇಮದ ಯೋಗ

**ಪರಮೋಚ್ಚ ಸತ್ತೆ**

ಈ ಪರಮೋಚ್ಚ ಸತ್ತೆ ವಿಶ್ವಂಭರ ಸತ್ತೆಯೂ ಕೂಡ ಆಗಿರುತ್ತದೆ ಮತ್ತು ವಿಶ್ವದೊಡನಿರುವ ನಮ್ಮ ಸಂಬಂಧಗಳು ಅವನೊಡನೆ ಸಂಬಂಧದಲ್ಲಿ ಪ್ರವೇಶಿಸಲು ಸಾಧನಗಳಾಗಿರುತ್ತವೆ, ಈ ಪ್ರವೇಶಕ್ಕೆ ಆ ಎಲ್ಲ ಸಾಧನಗಳನ್ನು ತಯಾರು ಮಾಡಲಾಗಿರುತ್ತದೆ. ನಮ್ಮ ಮೇಲಿರುವ ವಿಶ್ವಂಭರ ಅಸ್ತಿತ್ವದ ಕ್ರಿಯೆಯನ್ನು ನಾವು ಎದುರಿಸುವ ಮನೋವಿಕಾರಗಳು ನಿಜವಾಗಿ ಅವನತ್ತ ನಿರ್ದೇಶಿತವಾಗಿರುತ್ತವೆ, ಮೊದಲು ಅದನ್ನು ಅಜ್ಞಾನದಲ್ಲಿ ಮಾಡಲಾಗಿರುತ್ತದೆ ಆದರೆ ಅವನತ್ತ ಬೆಳೆಯುತ್ತಿರುವ ಜ್ಞಾನದಿಂದ ನಿರ್ದೇಶನ ಮಾಡಿದರೆ ಅವನೊಡನೆ ಬಹಳ ಹತ್ತಿರದಲ್ಲಿರುವ ಸಂಬಂಧಗಳಲ್ಲಿ ಪ್ರವೇಶಿಸುತ್ತೇವೆ, ನಾವು ಏಕತೆಯತ್ತ ನಮ್ಮನ್ನು ಎಳೆದುಕೊಂಡ ಹಾಗೆ ಅವುಗಳಲ್ಲಿರುವ ಮಿಥ್ಯೆ ಹಾಗೂ ಅಜ್ಞಾನ ಪತನಗೊಳ್ಳುತ್ತವೆ. ನಾವಿರುವ ಪ್ರಗತಿಯ ಹಂತದಲ್ಲಿ ನಮ್ಮನ್ನು ಕೈಗೆತ್ತಿಕೊಂಡು ಅವೆಲ್ಲವುಗಳಿಗೆ ಅವನು ಉತ್ತರ ನೀಡುತ್ತಾನೆ. ಏಕೆಂದರೆ ನಮ್ಮ ಅಪರಿಪೂರ್ಣ ಸಮೀಪಿಸುವಿಕೆಗೆ ಯಾವುದೇ ಬಗೆಯ ಪ್ರತಿಸ್ಪಂದನ ಇಲ್ಲವೆ ಸಹಾಯ ನಮ್ಮನ್ನು ಭೇಟಿಮಾಡದಿದ್ದರೆ ಹೆಚ್ಚು ಪರಿಪೂರ್ಣವಾದ ಸಂಬಂಧಗಳನ್ನು ಎಂದಿಗೂ ಸ್ಥಾಪಿಸಲಾಗುವುದಿಲ್ಲ. ಜನರು ಅವನನ್ನು ಸಮೀಪಿಸುವ ರೀತಿಯ ಹಾಗೆ ಅವನು ಅವರನ್ನು ಒಪ್ಪಿಕೊಳ್ಳುತ್ತಾನೆ ಮತ್ತು ಅವರ ಭಕ್ತಿಗೆ ದೈವೀ ಪ್ರೇಮದಿಂದ ಪ್ರತಿಸ್ಪಂದಿಸುತ್ತಾನೆ. ತಥೈವ ಭಜತೆ.

ಸತ್ತೆಯ ರೂಪ ಯಾವುದೇ ಆಗಿರಲಿ, ಅವರು ಅವನಿಗೆ ಯಾವುದೇ

ಗುಣಲಕ್ಷಣಗಳನ್ನು ಕೈಗಡ ಕೊಟ್ಟಿರಲಿ, ಆ ರೂಪ ಹಾಗೂ ಗುಣಲಕ್ಷಣಗಳು ಮೂಲಕ ಅಭಿವೃದ್ಧಿ ಹೊಂದಲು ಅವನು ಸಹಾಯ ಮಾಡುತ್ತಾನೆ, ಅವುಗಳ ಮುನ್ನಡೆಗೆ ಉತ್ತೇಜನ ನೀಡುತ್ತಾನೆ, ಇಲ್ಲವೆ ಆ ಮುನ್ನಡೆಯ ಮೇಲೆ ಅಳಿಕೆ ನಡೆಸುತ್ತಾನೆ, ಅವುಗಳ ನೇರ ರೀತಿಯಲ್ಲಿ ಇಲ್ಲವೆ ಒರಟು ರೀತಿಯಲ್ಲಿ ಅವುಗಳನ್ನು ತನ್ನೆಡೆಗೆ ಎಳೆದುಕೊಳ್ಳುತ್ತಾನೆ. ಅವರು ಅವನದೇನನ್ನು ನೋಡುತ್ತಾರೋ ಅದು ಒಂದು ಸತ್ಯವಾಗಿರುತ್ತದೆ, ಆದರೆ ಅವರಿಗೆ ಅವರದೇ ಸತ್ತೆ ಹಾಗೂ ಪ್ರಜ್ಞೆಗಳ ಮೂಲಕ ಪ್ರತಿನಿಧಿಸಲಾಗಿರುತ್ತದೆ, ಅದು ಭಾಗಶಃ, ವಿರೂಪಗೊಂಡ ರೀತಿಯಲ್ಲಿ, ಅದರದೇ ಉಚ್ಚತರ ನೈಜತೆಯ ಮೂಲಕವಲ್ಲ. ನಾವು ದೈವತ್ವದ ಬಗ್ಗೆ ಅರಿವು ತಂದುಕೊಂಡಾಗ ಅದು ಧರಿಸುವ ಮುಖದಲ್ಲಲ್ಲ. ಇದು ಧರ್ಮದ ಹೆಚ್ಚು ಒರಟಾದ, ಹೆಚ್ಚು ಪ್ರಾಥಮಿಕ ಅಂಶಗಳಿರುವ ಅವರ ಅಶಾಶ್ವತತೆಯ ಹಾಗೂ ದಾಟಿಕೊಂಡು ಹೋಗುವಿಕೆಯ ವಾಕ್ಯದ ನ್ಯಾಯಯುತವಾಗಿರುವಿಕೆ. ಅವರು ನ್ಯಾಯವಾದದ್ದನ್ನು ಮಾಡುತ್ತಾರೆ, ಏಕೆಂದರೆ ಅವರ ಹಿಂದೆ ಭಗವಂತನ ಸತ್ಯವೊಂದಿರುತ್ತದೆ, ಮಾನವ ಪ್ರಜ್ಞೆ ಅಭಿವೃದ್ಧಿ ಹೊಂದುತ್ತಿರುವ ಹಂತದಲ್ಲಿ ಆ ರೀತಿಯಲ್ಲಿ ಮಾತ್ರ ಭಗವಂತನ ಆ ಸತ್ಯವನ್ನು ಸಮೀಪಿಸಬಹುದು, ಮುಂದೆ ಸಾಗಲು ಸಹಾಯ ಪಡೆಯಬಹುದು: ಅವರನ್ನು ದೂಷಿಸಲಾಗುತ್ತದೆ. ಏಕೆಂದರೆ ಈ ಒರಟು ಕಲ್ಪನೆಗಳು ಹಾಗೂ ಭಗವಂತನೊಡನೆ ಇರುವ ಸಂಬಂಧಗಳಲ್ಲಿ ಪಟ್ಟುಹಿಡಿಯುವುದು ಆ ಹತ್ತಿರದ ಏಕತೆಯನ್ನು ತಪ್ಪಿಸಿಕೊಳ್ಳುವುದಾಗಿದೆ, ಆ ಏಕತೆಯತ್ತ ಈ ಒರಟು ಪ್ರಾರಂಭಗಳು ಅವೆಷ್ಟೇ ತಡವರಿಸುತ್ತಿರಲಿ ಮೊದಲ ಹೆಜ್ಜೆಗಳಾಗಿರುತ್ತವೆ.

**(CWSA, 24)** **– ಶ್ರೀ ಅರವಿಂದರು**

*

**ಎಲ್ಲ ಲೋಕಗಳ ಪ್ರಭು ಹಾಗೂ ಎಲ್ಲ ಜೀವಿಗಳ ಮಿತ್ರ**

ಭಗವಂತ ದೈವೀಪ್ರಭುವಾಗಿದ್ದರೂ ಯಾರಿಗೂ ಶಿಕ್ಷೆ ನೀಡುವುದಿಲ್ಲ, ಬೆದರಿಸುವುದಿಲ್ಲ, ವಿಧೇಯತೆಯನ್ನು ಒತ್ತಾಯದಿಂದ ಹೇರುವುದಿಲ್ಲ. ಮಾನವ ಆತ್ಮ ಭಗವಂತನತ್ತ ಮುಕ್ತವಾಗಿ ಬರಬೇಕು ಮತ್ತು ಅವನ ಪರವಶಗೊಳಿಸುವ ಶಕ್ತಿಗೆ ಅರ್ಪಣೆ ಮಾಡಿಕೊಳ್ಳಬೇಕು, ಅದರಿಂದಾಗಿ ಅದನ್ನು ಹಿಡಿದುಕೊಂಡು ತನ್ನದೇ ದೈವಿಕ ಸ್ತರಗಳತ್ತ ಮೇಲಕ್ಕೆತ್ತಬಹುದು ಮತ್ತು ಅನಂತದಿಂದ ಹಾಗೂ

ಅತ್ಯುಚ್ಚವಾದುದಕ್ಕೆ ಸೇವೆ ಸಲ್ಲಿಸುವುದರ ಮೂಲಕ ಪ್ರಭುತ್ವದ ಆ ಸಂತೋಷವನ್ನು ಸಾಂತವಾದ ಅದಕ್ಕೆ ಕೊಡಬಹುದು, ಅದರಿಂದ ಅಹಂಭಾವದಿಂದ ಹಾಗೂ ನಿಮ್ನ ಸ್ವಭಾವದಿಂದ ಸ್ವಾತಂತ್ರ್ಯ ಬರುತ್ತದೆ. ಪ್ರೇಮ ಈ ಸಂಬಂಧಕ್ಕೆ ಬೀಗದ ಕೈಯಾಗಿರುತ್ತದೆ ಮತ್ತು ಈ ಸೇವೆ (ದಾಸ್ಯಮ್) ಭಾರತೀಯ ಯೋಗದಲ್ಲಿ ದೈವೀ ಮಿತ್ರನಿಗೆ ಸಂತೋಷದ ಸೇವೆಯಾಗಿರುತ್ತದೆ ಇಲ್ಲವೆ ದೈವೀ ಪ್ರೇಮಿಗೆ ಭಾವೋದ್ರೇಕದ ಸೇವೆಯಾಗಿರುತ್ತದೆ. ಗೀತೆಯಲ್ಲಿ ಜಗತ್ತಿನ ದೈವೀ ಪ್ರಭು ತನ್ನ ಸೇವಕ ಇಲ್ಲವೆ ಭಕ್ತನಿಂದ ಉಪಕರಣಕ್ಕಿಂತಲೂ ಹೆಚ್ಚೇನು ಆಗುವುದನ್ನು ಕೇಳುವುದಿಲ್ಲ, ಈ ಹಕ್ಕನ್ನು ಮಿತ್ರನಾಗಿ, ಮಾರ್ಗದರ್ಶಕನಾಗಿ, ಉಚ್ಚತರ ದಿವ್ಯಾತ್ಮನಾಗಿ ಸಾಧಿಸುತ್ತಾನೆ ಮತ್ತು ತನ್ನನ್ನು ಎಲ್ಲ ಜೀವಿಗಳ ಮಿತ್ರ, ಸರ್ವಲೋಕ ಮಹೇಶ್ವರಮ್, ಸುಹೃದಮ್ ಸರ್ವಭೂತಾನಾಮ್ ಎಂದು ಸರ್ವಲೋಕಗಳ ಪ್ರಭುವೆಂದು ವರ್ಣಿಸುತ್ತಾನೆ. ಇವೆರಡು ಸಂಬಂಧಗಳು ಒಟ್ಟಿಗೆ ಸಾಗಬೇಕು, ಒಂದಿಲ್ಲದೆ ಇನ್ನೊಂದು ಪರಿಪೂರ್ಣವಾಗಲಾರದು. ವಿಧೇಯತೆಯನ್ನು ಒತ್ತಾಯದಿಂದ ಬೇಡುವ ಪಿತೃತ್ವವಿದೆ, ಏಕೆಂದರೆ ಅವನು ನಮ್ಮನ್ನು ಮಾಡಿರುತ್ತಾನೆ, ಆದರೆ ಪ್ರೇಮದ ಪಿತೃತ್ವ ಯೋಗದಲ್ಲಿ ನಮ್ಮನ್ನು ಹೆಚ್ಚು ಹತ್ತಿರದ ಆತ್ಮದ ಏಕತೆಗೆ ಕರೆದೊಯ್ಯುತ್ತದೆ. ಇವೆರಡರಲ್ಲಿಯೂ ಪ್ರೇಮ ನಿಜವಾದ ಬೀಗದ ಕೈಯಾಗಿರುತ್ತದೆ ಮತ್ತು ಪರಿಪೂರ್ಣ ಪ್ರೇಮ ಭಯದ ಉದ್ದೇಶವನ್ನು ಒಪ್ಪಿಕೊಳ್ಳುವುದಕ್ಕೆ ಹೊಂದಿಕೆಯಾಗುವುದಿಲ್ಲ. ಭಗವಂತನಿಗೆ ಆತ್ಮದ ಹತ್ತಿರವಾಗುವಿಕೆ ಉದ್ದೇಶ–ವಾಗಿರುತ್ತದೆ ಮತ್ತು ಭಯ ಯಾವಾಗಲೂ ಅಡ್ಡಗೋಡೆಯನ್ನು ಹಾಗೂ ದೂರವನ್ನು ಇರಿಸುತ್ತದೆ. ದೈವೀ ಸಾಮರ್ಥ್ಯಕ್ಕೆ ಭಯ ಗೌರವ ಇವು ದೂರವಿರುವ ಹಾಗೂ ವಿಭಜನೆ ಇರುವ ಕುರುಹುಗಳು ಮತ್ತು ಅವು ಪ್ರೇಮದ ಆತ್ಮೀಯತೆಯಲ್ಲಿ ಮಾಯವಾಗುತ್ತವೆ. ಅಲ್ಲದೆ ಭಯ ನಿಮ್ನತರ ಸ್ವಭಾವಕ್ಕೆ ಹಾಗೂ ಆತ್ಮಕ್ಕೆ ಸೇರಿರುತ್ತದೆ ಹಾಗೂ ಉಚ್ಚತರವಾದ ದಿವ್ಯಾತ್ಮನನ್ನು ಸಮೀಪಿಸಿ ಅದರ ಸಾನ್ನಿಧ್ಯದಲ್ಲಿ ಪ್ರವೇಶಿಸಬಹುದಾದಕ್ಕಿಂತ ಮೊದಲು ಅದನ್ನು ಬದಿಗೆ ಸರಿಸಿಡಬೇಕಾಗುತ್ತದೆ.

**(CWSA, 24/565–56)** – ಶ್ರೀ ಅರವಿಂದರು

*

**ಪ್ರಾರ್ಥನೆ ಹಾಗೂ ಭಗವಂತನೊಡನೆ ಸಂಬಂಧಗಳು**

ನಮಗಾಗಿ ಈ ಸಂಬಂಧವನ್ನು ತಯಾರು ಮಾಡಲು ಪ್ರಾರ್ಥನೆ ಸಹಾಯ ಮಾಡುತ್ತದೆ, ಮೊದಲು ನಿಮ್ನಸ್ತರದಲ್ಲಿ, ಅಲ್ಲಿದ್ದಾಗಲೂ ಕೂಡ ಅದು ಕೇವಲ ಅಹಂಕಾರ ಹಾಗೂ ಸ್ವ–ಭ್ರಮೆ ಇವುಗಳೊಡನೆ ಹೊಂದಿಕೊಂಡಿರುತ್ತದೆ, ಆದರೆ ನಂತರ ಅದರ ಹಿಂದಿರುವ ಆಧ್ಯಾತ್ಮಿಕ ಸತ್ಯಗಳತ್ತ ನಮ್ಮನ್ನು ಎಳೆದುಕೊಂಡು ಹೋಗಬಹುದು. ಆಗ ಬೇಡಿಕೊಂಡದ್ದನ್ನು ಕೊಡುವುದು ಅಷ್ಟೊಂದು ಮಹತ್ವದ್ದಾಗಿರುವುದಿಲ್ಲ, ಆದರೆ ಸಂಬಂಧವೇ ಸ್ವತಃ, ದೇವನೊಡನೆ ಮನುಷ್ಯನ ಜೀವನ, ಪ್ರಜ್ಞಾಪೂರ್ಣ ವಿನಿಮಯ ಮಹತ್ವದ್ದಾಗಿರುತ್ತವೆ. ಆಧ್ಯಾತ್ಮಿಕ ವಿಷಯಗಳಲ್ಲಿ ಮತ್ತು ಆಧ್ಯಾತ್ಮಿಕ ಲಾಭ ಪಡೆಯುವುದರಲ್ಲಿ ಈ ಪ್ರಜ್ಞಾಪೂರ್ಣ ಸಂಬಂಧ ದೊಡ್ಡ ಸಾಮರ್ಥ್ಯವಾಗಿರುತ್ತದೆ, ಅದು ನಮ್ಮದೇ ಇಡಿಯಾದ ಸ್ವಂತದ ಮೇಲೆ ನೆಚ್ಚಿಕೊಂಡಿರುವ ಹೋರಾಟ ಹಾಗೂ ಪ್ರಯತ್ನಗಳಿಗಿಂತ ಹೆಚ್ಚು ಶ್ರೇಷ್ಠವಾದ ಸಾಮರ್ಥ್ಯವಾಗಿರುತ್ತದೆ ಮತ್ತು ಅದು ಹೆಚ್ಚು ಪೂರ್ಣವಾದ ಆಧ್ಯಾತ್ಮಿಕ ಬೆಳವಣಿಗೆಯನ್ನು ಹಾಗೂ ಅನುಭವವನ್ನು ತರುತ್ತದೆ. ನಮ್ಮನ್ನು ಯಾವ ಶ್ರೇಷ್ಠ ವಿಷಯಕ್ಕಾಗಿ ತಯಾರು ಮಾಡಲಾಗಿರುತ್ತದೆಯೋ ಅದರಲ್ಲಿ ಅವಶ್ಯವಾಗಿ ಪ್ರಾರ್ಥನೆ ನಿಂತುಹೋಗಬಹುದು– ವಾಸ್ತವದಲ್ಲಿ ನಂಬಿಕೆ, ಸಂಕಲ್ಪ ಅಭೀಪ್ಸೆ ಇವು ಇರುವವರೆಗೆ ನಾವು ಪ್ರಾರ್ಥನೆ ಎಂದು ಕರೆಯುವ ರೂಪವೇ ಸ್ವತಃ ಅವಶ್ಯವಾಗಿರುವುದಿಲ್ಲ.– ಇಲ್ಲವೆ ಸಂಬಂಧದ ಸಂತೋಷಕ್ಕಾಗಿ ಪ್ರಾರ್ಥನೆ ಉಳಿದುಕೊಳ್ಳಬಹುದು. ಹಾಗೆಯೇ ಅದು ಸಿದ್ಧಿಸಿಕೊಳ್ಳಲು ಅರಸುತ್ತಿರುವ ಅದರ ಉದ್ದೇಶಗಳು, ಅರ್ಥ ಇಲ್ಲವೆ ಅಭಿರುಚಿ ಇವು ನಾವು ಉದ್ದೇಶರಹಿತ ಭಕ್ತಿಯನ್ನು ತಲುಪುವವರೆಗೆ ಹೆಚ್ಚು ಉಚ್ಚತರವಾಗುತ್ತ ಹೋಗುತ್ತವೆ, ಆ ಭಕ್ತಿ ಪರಿಶುದ್ಧ, ಸರಳ, ಬೇರೆ ಯಾವ ಒತ್ತಾಯದ ಬೇಡಿಕೆ ಇಲ್ಲವೆ ಹಾತೊರೆತ ಇರದೆ ಇರುವಂತಹದಾಗಿರುತ್ತದೆ.

ಭಗವಂತನತ್ತ ಈ ಮನೋಭಾವದಿಂದ ಮೇಲೆದ್ದು ಬರುವ ಸಂಬಂಧಗಳು ಮಗು ತಂದೆ–ತಾಯೊಂದಿರ ಜೊತೆಗೆ, ದೈವೀ ಮಿತ್ರನ ಜೊತೆಗೆ ಇರುವಂತಹ ಸಂಬಂಧಗಳಾಗಿರುತ್ತವೆ. ಈ ವಿಷಯಗಳು ಇರುವ ಹಾಗೆ ಭಗವಂತನತ್ತ ಮಾನವ ಆತ್ಮ ಸಹಾಯ ರಕ್ಷಣೆ, ಮಾರ್ಗದರ್ಶನ, ಫಲಪ್ರದತೆ ಇವುಗಳಿಗಾಗಿ– ಇಲ್ಲವೆ ಜ್ಞಾನ ಗುರಿಯಾಗಿದ್ದರೆ, ಮಾರ್ಗದರ್ಶಕ, ಬೋಧಕ, ಪ್ರಕಾಶವನ್ನು

ಕೊಡುವವ, ಏಕೆಂದರೆ ಭಗವಂತ ಜ್ಞಾನದ ಸೂರ್ಯನಾಗಿರುತ್ತಾನೆ ಇವಾಗಿರುವವನ ಬಳಿ ಇರುವುದಕ್ಕಾಗಿ– ಅದು ಉಪಶಮನಕ್ಕಾಗಿ ನೋವಿನಿಂದ, ವೇದನೆಯಿಂದ ಬರುತ್ತದೆ, ಅದೇ ಸ್ವತಃ ವೇದನೆಯಿಂದ ಇಲ್ಲವೆ ನೋವಿನ ಆವಾಸಸ್ಥಾನವಾಗಿರುವ ಜಗತ್ತಿನ ಅಸ್ತಿತ್ವದಿಂದ ಮುಕ್ತಿ ಪಡೆಯುವುದಕ್ಕಾಗಿ ಇರಬಹುದು ಇಲ್ಲವೆ ಅದರ ಎಲ್ಲ ಆಂತರಿಕ ಮತ್ತು ನಿಜವಾದ ಕಾರಣಗಳಿಂದಾಗಿರಬಹುದು. ಈ ವಿಷಯಗಳಲ್ಲಿ ಒಂದು ವಿಶಿಷ್ಟ ಮುನ್ನಡೆಯ ಹಂತವಿರುವದನ್ನು ನಾವು ಕಂಡುಕೊಳ್ಳುತ್ತೇವೆ. ಏಕೆಂದರೆ ಪಿತೃತ್ವ ಯಾವಾಗಲೂ ಹತ್ತಿರದಲ್ಲಿರುವುದು, ಗಾಢವಾಗಿರುವುದು, ಭಾವೋದ್ರೇಕದಿಂದಿ–ರುವುದು, ಅನ್ಯೋನ್ಯತೆಯಿಂದ ಇರುವುದು ಅತಿ ಕಡಿಮೆ, ಹಾಗಾಗಿ ಯೋಗದಲ್ಲಿ ಅದರ ಆಶ್ರಯ ಪಡೆಯುವುದು ಕಡಿಮೆ, ಯೋಗ ಅತ್ಯಂತ ಹತ್ತಿರದ ಏಕತೆಯನ್ನು ಅರಸುತ್ತದೆ, ದೈವೀ ಮಿತ್ರನ ವಿಷಯದಲ್ಲಿ, ಅದು ಹೆಚ್ಚಿನ ಮಾಧುರ್ಯ, ಅನ್ಯೋನ್ನತೆ ಹೊಂದಿರುವಂತಹದು, ಅಸಮತೆ ಇದ್ದಾಗಲೂ ಕೂಡ ಸಮತೆಯನ್ನು, ಅನ್ಯೋನ್ಯತೆಯನ್ನು ಹಾಗೂ ಪರಸ್ಪರ ಆತ್ಮದ ಅರ್ಪಣೆಯ ಪ್ರಾರಂಭವನ್ನು ಒಪ್ಪಿಕೊಳ್ಳುತ್ತದೆ ಅದಕ್ಕೆ ಅತ್ಯಂತ ಹತ್ತಿರದಲ್ಲಿ ಈ ಸಂಬಂಧ, ಎಲ್ಲದಕ್ಕೂ ಸಾಕಷ್ಟಾಗುವ ಪ್ರೇಮದ ಉದ್ದೇಶದ ಹೊರತಾಗಿ, ಉದ್ದೇಶರಹಿತವಾದಾಗ, ಅದು ಅಸ್ತಿತ್ವದ ಲೀಲೆಯಲ್ಲಿ ಜೊತೆ ಆಟಗಾರನ ಮುಕ್ತ ಹಾಗೂ ಸಂತೋಷವಿರುವ ಸಂಬಂಧತ್ತ ಹೊರಳುತ್ತದೆ. ಮಾತೆ ಹಾಗೂ ಮಗು ಇವರ ನಡುವಿರುವ ಸಂಬಂಧ ಇನ್ನೂ ಹೆಚ್ಚು ಹತ್ತಿರದ್ದು ಹಾಗೂ ಅನ್ಯೋನ್ಯವಾದದ್ದು ಆಗಿರುತ್ತದೆ ಮತ್ತು ಅದು ಹಾಗಾಗಿ ಧಾರ್ಮಿಕ ಭಾವನೆ ಬಹಳ ಸಮೃದ್ಧವಾಗಿ ಉತ್ಸುಕವಾಗಿರುವಲ್ಲಿ ಮತ್ತು ಪುರುಷನ ಹೃದಯದಿಂದ ಹೆಚ್ಚು ಸೌಹಾರ್ದಯುತವಾಗಿ ಜಿಗಿದು ಬಂದಾಗ ಹೆಚ್ಚು ಭವ್ಯವಾದ ಪಾತ್ರ ವಹಿಸುತ್ತದೆ. ಆತ್ಮ ತನ್ನ ಎಲ್ಲ ಆಸೆಗಳು ಹಾಗೂ ತೊಂದರೆಗಳೊಂದಿಗೆ ಮಾತೆಯ ದಿವ್ಯಾತ್ಮದತ್ತ ಹೋಗುತ್ತದೆ ಮತ್ತು ದೈವೀಮಾತೆ ಅದು ಹಾಗಿರಲಿ ಎಂಬ ಒಲವು ಇಟ್ಟುಕೊಂಡಿರುತ್ತಾಳೆ, ಅದರಿಂದಾಗಿ ತನ್ನ ಪ್ರೇಮದ ಹೃದಯದ ಧಾರೆ ಪ್ರವಹಿಸುವಂತಾಗುತ್ತದೆ. ಈ ಪ್ರೇಮದ ಸ್ವ–ಅಸ್ತಿತ್ವದಲ್ಲಿರುವ ಸ್ವಭಾವದಿಂದಾಗಿ ಅವಳತ್ತ ಅದು ಹೊರಳುತ್ತದೆ ಮತ್ತು ಏಕೆಂದರೆ ಅದು ಮನೆಯನ್ನು ನಮಗೆ ತೋರಿಸುತ್ತದೆ, ಅದರತ್ತ ನಾವು ಜಗತ್ತಿನಲ್ಲಿ ನಮ್ಮ

ಅಲೆದಾಟಗಳಿಂದ ಹೊರಳುತ್ತೇವೆ, ಅದರ ಎದೆಯಲ್ಲಿ ನಾವು ವಿಶ್ರಾಂತಿಯನ್ನು ಕಂಡುಕೊಳ್ಳುತ್ತೇವೆ.

**(CWSA, 24/567–68)** **– ಶ್ರೀ ಅರವಿಂದರು**

*

**ದೈವೀ ಪ್ರೇಮಿಗಾಗಿ ಹಾತೊರೆತ**

ಆದರೆ ಅತ್ಯುಚ್ಚ ಹಾಗೂ ಅತಿಶ್ರೇಷ್ಠ ಸಂಬಂದ ಯಾವುದೇ ಸರ್ವಸಾಧಾರಣ ಧಾರ್ಮಿಕ ಉದ್ದೇಶಗಳಿಂದ ಸುರುವಾಗುವುದಿಲ್ಲ, ಆದರೆ ಅದಕ್ಕೂ ಹೆಚ್ಚಾಗಿ, ಯೋಗದ ಸಾರವೆಂದು, ಪ್ರೇಮದ ಸ್ವಭಾವದಿಂದಲೇ ಸುರುವಾಗುತ್ತದೆ, ಅದು ಪ್ರೀತ್ಯಾಸ್ಪದನಿಗಾಗಿ ಪ್ರೀತಿಸುವವನ ಭಾವೋದ್ರೇಕ. ಭಗವಂತನೊಡನೆ ಅಂತಿಮ ಏಕತೆಗಾಗಿ ಬಯಕೆ ಎಲ್ಲೆಲ್ಲಿರುವುದೋ ಅಲ್ಲಿ ರೂಪದ ದೈವೀ ಹಾತೊರೆತ ಧರ್ಮಗಳಲ್ಲಿಯೂ ಕೂಡ ತನ್ನ ಮಾರ್ಗವನ್ನು ಮಾಡಿಕೊಳ್ಳುತ್ತದೆ. ಅವು ಅದಿಲ್ಲದೆ ಕೈಕೊಳ್ಳುತ್ತಿರುವಂತೆ ಮತ್ತು ಅವುಗಳ ಸಾಧಾರಣ ಪದ್ಧತಿಯಲ್ಲಿ ಅದಕ್ಕೆ ಯಾವ ಸ್ಥಾನವನ್ನು ಕೊಡದೆ ಇರುವಂತೆ ತೋರಿಬರುತ್ತದೆ. ಇಲ್ಲಿ ಕೇಳಲಾದ ಒಂದು ವಿಷಯ ಪ್ರೇಮ, ಭಯ ಹುಟ್ಟಿಸುವಂತಹ ಒಂದು ವಿಷಯ ಪ್ರೇಮ ಕಳೆದು ಹೋಗುವುದಾಗಿದೆ. ಒಂದು ವೇದನೆಯೆಂದರೆ ಪ್ರೇಮ ಪ್ರತ್ಯೇಕಗೊಳ್ಳುವುದರಿಂದಾಗುವ ವೇದನೆಯಾಗಿದೆ. ಏಕೆಂದರೆ ಪ್ರೀತಿಸುವವನಿಗಾಗಿ ಉಳಿದೆಲ್ಲ ವಿಷಯಗಳು ಅಸ್ತಿತ್ವದಲ್ಲಿರುವುದಿಲ್ಲ ಇಲ್ಲವೆ ಪ್ರಸಂಗಗಳು ಇಲ್ಲವೆ ಪರಿಣಾಮಗಳ ರೂಪದಲ್ಲಿ ಬರುತ್ತವೆ, ಪ್ರೇಮದ ಉದ್ದೇಶ ಹಾಗೂ ಷರತ್ತುಗಳ ರೂಪದಲ್ಲಿ ಬರುವುದಿಲ್ಲ. ಎಲ್ಲ ಪ್ರೇಮ ನಿಜವಾಗಿ ಅದರ ಸ್ವಭಾವದಲ್ಲಿ ಸ್ವ–ಅಸ್ತಿತ್ವದಲ್ಲಿ ಇರುವುದಾಗಿದೆ, ಏಕೆಂದರೆ ಅದು ಸತ್ತೆಯಲ್ಲಿರುವ ರಹಸ್ಯ ಏಕತೆಯಿಂದ ಇಲ್ಲವೆ ಏಕೆಂದರೆ ಆತ್ಮಗಳ ನಡುವೆ ಹೃದಯದಲ್ಲಿ ಏಕತೆ ಹಾಗೂ ಏಕತೆಗಾಗಿ ಬಯಕೆ ಹಾಗೂ ಆ ಏಕತೆಯ ಅರ್ಥದಿಂದ ಜಿಗಿದು ಬರುತ್ತದೆ. ಆ ಆತ್ಮಗಳು ಇನ್ನೂ ಒಂದರಿಂದ ಇನ್ನೊಂದು ಭಿನ್ನವಾಗಿದೆ, ವಿಭಜನೆಗೊಳಗಾಗಿದೆ ಎಂದು ಕಲ್ಪನೆ ಮಾಡಿಕೊಳ್ಳಲು ಶಕ್ತವಾಗಿರುತ್ತವೆ. ಹಾಗಾಗಿ ಈ ಉಳಿದೆಲ್ಲ ಸಂಬಂಧಗಳೂ ಕೂಡ ಕೇವಲ ಪ್ರೇಮಕ್ಕಾಗಿ ಅವುಗಳ ಸ್ವ–ಅಸ್ತಿತ್ವದಲ್ಲಿರುವ, ಉದ್ದೇಶರಹಿತ ಸಂತೋಷದತ್ತ

ತಲುಪಬಹುದು. ಆದರೆ ಅವು ಇನ್ನೂ ಪ್ರಾರಂಭಿಸುವ ಮತ್ತು ಕೊನೆಯವರೆಗೆ ಇತರ ಉದ್ದೇಶಗಳಲ್ಲಿ ಪಾತ್ರವಹಿಸುವ ತೃಪ್ತಿಯನ್ನು ಕಂಡುಕೊಳ್ಳುತ್ತವೆ. ಅಲ್ಲಿ ನಿಜವಾಗಿ ವಶಪಡಿಸಿಕೊಳ್ಳುವುದಕ್ಕಾಗಿ ಬಯಕೆ ಇರುತ್ತದೆ, ಸ್ವ–ಅಸ್ತಿತ್ವದಲ್ಲಿರುವ ಪ್ರೇಮದ ಪೂರ್ಣತೆಯಲ್ಲಿ ಇದರ ಮೇಲೂ ಕೂಡ ಜಯ ಸಾಧಿಸಬಹುದು. ಭಕ್ತನ ಕೊನೆಯ ಒತ್ತಾಯದ ಬೇಡಿಕೆ ಎಂದರೆ ತನ್ನ ಭಕ್ತಿ ನಿಂತು ಹೋಗದಿರಲಿ ಇಲ್ಲವೆ ಕುಗ್ಗದಿರಲಿ ಎಂದಾಗಿದೆ. ಅವನು ಸ್ವರ್ಗವನ್ನಾಗಲಿ ಇಲ್ಲವೆ ಜನ್ಮತಾಳುವುದರಿಂದ ಮುಕ್ತಿಯನ್ನಾಗಲಿ ಇಲ್ಲವೆ ಬೇರೆ ಯಾವ ವಸ್ತುವನ್ನಾಗಲಿ ಬೇಡುವುದಿಲ್ಲ. ಆದರೆ ಕೇವಲ ತನ್ನ ಪ್ರೇಮ ಶಾಶ್ವತವಾಗಲಿ ಹಾಗೂ ಪರಿಪೂರ್ಣವಾಗಲಿ ಎಂದು ಬೇಡುತ್ತಾನೆ.

**(CWSA, 24/569)** **– ಶ್ರೀ ಅರವಿಂದರು**

*

**ಮನಸ್ಸಿನ ಭಕ್ತಿಯ ಮೂಲಕ ಅರಸುವ ಮೂರು ಹಂತಗಳು**

ಭಗವಂತನಿಗಾಗಿ ಯೋಚನೆಗಳನ್ನು ಮುಡುಪಾಗಿರಿಸುವುದಿದೆ. ಅದನ್ನು ಕುರಿತು ಕರ್ತವ್ಯದಲ್ಲಿ ತೊಡಗಿಕೊಳ್ಳುವುದಿರುತ್ತದೆ. ಇದು ಮನಸ್ಸಿನ ಆರಾಧನೆಯ ವಿಷಯವನ್ನು ಸ್ಥಿರಗೊಳಿಸುವುದಾಗಿದೆ. ಏಕೆಂದರೆ ಸ್ವಾಭಾವಿಕವಾಗಿ ತಳಮಳ–ದಿಂದಿರುವ ಮಾನವ ಮನಸ್ಸು ಇತರ ವಿಷಯಗಳಲ್ಲಿ ತೊಡಗಿಕೊಂಡಿರುತ್ತದೆ ಮತ್ತು ಅದನ್ನು ಮೇಲ್ಗಡೆಗೆ ನಿರ್ದೇಶಿತವಾದದ್ದನ್ನಾಗಿ ಮಾಡಿದಾಗಲೂ ಕೂಡ ಸತತ ಜಗತ್ತಿನ ಎಳೆತಕ್ಕೊಳಗಾಗುವುದು. – ಹಾಗಾಗಿ ಕೊನೆಯಲ್ಲಿ ರೂಢಿಗತವಾಗಿ ಅವನ ಬಗ್ಗೆ ಯೋಚಿಸುತ್ತದೆ ಮತ್ತು ಉಳಿದದ್ದೆಲ್ಲ ಗೌಣವಾದ ವಿಷಯ ಮತ್ತು ಅವನ ಸಂಬಂಧದಲ್ಲಿ ಯೋಚನೆಯಿರಬೇಕು. ಇದನ್ನು ಬಹಳಷ್ಟು ಸಲ ಮಾನವ ಪ್ರತಿಮೆಯ ಸಹಾಯದಿಂದ ಇಲ್ಲವೆ ಹೆಚ್ಚು ಅನ್ಯೋನ್ಯತೆಯಿರುವ, ಗುಣಲಕ್ಷಣಗಳಿರುವ ಮಂತ್ರ ಇಲ್ಲವೆ ದೈವೀ ಹೆಸರು ಇವುಗಳ ಮೂಲಕ ಮಾಡಲಾಗುತ್ತದೆ, ಅದರ ಮೂಲಕ ದೈವೀ ಸತ್ತೆಯನ್ನು ಸಿದ್ಧಿಸಿಕೊಳ್ಳಲಾಗುತ್ತದೆ. ಪದ್ಧತಿಗೆ ಒಳಪಡಿಸುವವರು ಭಾವಿಸಿಕೊಂಡ ಹಾಗೆ ಮನಸ್ಸಿನ ಭಕ್ತಿಯ ಮೂಲಕ ಅರಸುವ ಮೂರು ಹಂತಗಳಿವೆ. ಮೊದಲನೆಯದಾಗಿ ಸತತ ದೇವನ ಹೆಸರನ್ನು, ಗುಣಲಕ್ಷಣಗಳನ್ನು ಮತ್ತು

ಅವುಗಳಿಗೆ ಅಂಟಿಸಿದ ಎಲ್ಲವನ್ನೂ ಕೇಳುತ್ತಿರುವುದಾಗಿದೆ. ಎರಡನೆಯದಾಗಿ ಅವುಗಳನ್ನು ಕುರಿತು ಸತತ ಯೋಚಿಸುವುದಾಗಿದೆ. ಇಲ್ಲವೆ ದೈವೀಸತ್ತೆ ಇಲ್ಲವೆ ದೈವೀ ವ್ಯಕ್ತಿತ್ವ ಕುರಿತು ಮೂರನೆಯದಾಗಿ ಆ ವಿಷಯದ ಮೇಲೆ ಮನಸ್ಸು ಸ್ಥಿರಗೊಳ್ಳುವಂತೆ, ನೆಲೆಸುವಂತೆ ಮಾಡುವುದಾಗಿದೆ ಮತ್ತು ಇದರಿಂದ ಪೂರ್ತಿ ಸಿದ್ಧಿ ಬರುತ್ತದೆ ಮತ್ತು ಇವುಗಳ ಮೂಲಕವೂ ಕೂಡ ಜೊತೆಗೂಡಿದ ಭಾವನೆ ಇಲ್ಲವೆ ಏಕಾಗ್ರತೆ ಬಹಳ ಗಾಢವಾದಾಗ ಅತ್ಯಂತ ಸಂತೋಷ ನೀಡುವ ಸಮಾಧಿ ಕೂಡ ಬರುತ್ತದೆ, ಅದರಲ್ಲಿ ಬಾಹ್ಯ ವಿಷಯಗಳಿಂದ ದಾಟಿಕೊಂಡು ಹೋಗಿರುತ್ತದೆ. ಆದರೆ ಇದೆಲ್ಲ ನಿಜವಾಗಿ ಪ್ರಾಸಂಗಿಕವಾಗಿ ಆಗುವಂತಹದು, ಅವಶ್ಯವಾದ ಒಂದು ವಿಷಯವೆಂದರೆ, ಆರಾಧನೆಯ ಉದ್ದೇಶ ಕುರಿತು ಮನಸ್ಸಿನಲ್ಲಿ ಯೋಚನೆಯ ಗಾಢವಾದ ಭಕ್ತಿ ಇರುವುದಾಗಿದೆ ಆದಾಗ್ಯೂ ಅದು ಜ್ಞಾನದ ರೀತಿಯಲ್ಲಿ ಚಿಂತನೆ ಮಾಡುವುದಕ್ಕೆ ಹತ್ತಿರವಾಗಿದ್ದರೂ ಅದರಿಂದ ಇದು ಮನೋಭಾವದಲ್ಲಿ ಭಿನ್ನವಾಗಿರುತ್ತದೆ, ಅದು ಅದರ ನಿಜವಾದ ಸ್ವಭಾವದಲ್ಲಿ ಸ್ಥಿರವಾಗಿರುವುದಿಲ್ಲ, ಆದರೆ ಅತ್ಯಂತ ಸಂತೋಷವಿರುವ ಚಿಂತನೆಯಾಗಿರುತ್ತದೆ, ಅದು ಭಗವಂತನಲ್ಲಿ ದಾಟಿಕೊಂಡು ಹೋಗುವುದನ್ನು ಅರಸುವುದಿಲ್ಲ, ಆದರೆ ಭಗವಂತನನ್ನು ನಮ್ಮೊಳಗೆ ತಂದುಕೊಂಡು ಅವನ ಸಾನ್ನಿಧ್ಯದ ಆಳವಾದ ಸಂತೋಷದಲ್ಲಿ ಇಲ್ಲವೆ ಅವನ ವಶದಲ್ಲಿರುವುದರಲ್ಲಿ ನಮ್ಮನ್ನು ಕಳೆದುಕೊಳ್ಳುವುದನ್ನು ಅರಸುತ್ತದೆ. ಇಲ್ಲಿಯೂ ಕೂಡ ಆತ್ಮದ ಪ್ರತ್ಯೇಕಗೊಳಿಸುವ ಸ್ವ–ಮುಡುಪಾಗಿರಿಸುವಿಕೆ ಇರಬಹುದು, ಅದು ಜೀವನದ ಉಳಿದೆಲ್ಲ ಯೋಚನೆಯನ್ನು ಶಾಶ್ವತವಾದ, ಸ್ತರಗಳ ಆಚೆಗಿರುವುದರತ್ತ ಇರುವುದಕ್ಕಾಗಿ ಬಿಟ್ಟುಕೊಡುವುದಿರುತ್ತದೆ ಇಲ್ಲವೆ ಎಲ್ಲವನ್ನೂ ಒಳಗೊಳ್ಳುವ ಮುಡುಪಾಗಿರಿಸಿ–ಕೊಳ್ಳುವಿಕೆ ಇರುತ್ತದೆ, ಅದರಲ್ಲಿ ಎಲ್ಲ ಯೋಚನೆಗಳು ಜೀವನದಲ್ಲಿ ತೊಡಗಿಕೊಂಡಿರುವುದರಲ್ಲಿಯೂ ಕೂಡ ಪ್ರತಿಯೊಂದು ಯೋಚನೆ ಅವನನ್ನು ನೆನಪಿಸಿಕೊಳ್ಳುತ್ತದೆ. ಇತರ ಯೋಗಗಳಲ್ಲಿ ಇರುವ ಹಾಗೆ ಇದರಲ್ಲಿಯೂ ಕೂಡ ಮನುಷ್ಯ ಭಗವಂತನನ್ನು ಎಲ್ಲೆಡೆಯಲ್ಲಿ ನೋಡುವುದರತ್ತ ಮತ್ತು ಭಗವಂತನನ್ನು ಸಿದ್ಧಿಸಿಕೊಂಡಿರುವುದನ್ನು ತನ್ನ ಎಲ್ಲ ಆಂತರಿಕ ಚಟುವಟಿಕೆಗಳಲ್ಲಿ ಹಾಗೂ ಬಾಹ್ಯ ಕ್ರಿಯೆಗಳಲ್ಲಿ ಸುರಿಯುವುದರತ್ತ ಬರುತ್ತಾನೆ.

**(CWSA, 24/574–75)** – ಶ್ರೀ ಅರವಿಂದರು

*

## ಸಮಗ್ರ ಭಕ್ತಿಯ ರೀತಿ

ಭಕ್ತಿಯ ಸಮಗ್ರ ಯೋಗದ ರೀತಿ ಭಗವಂತನ ಈ ಕಲ್ಪನೆಯನ್ನು ವಿಶ್ವಂಭರಗೊಳಿಸುವುದಾಗಿದೆ, ಅನ್ಯೋನ್ಯವಾಗುವಂತೆ ಅವನಿಗೆ ವ್ಯಕ್ತಿರೂಪಕೊಡುವುದಾಗಿದೆ, ಎಲ್ಲ ಸತ್ತೆಗೆ ಅವನ ಸಾನ್ನಿಧ್ಯ ಸತತ ಇರುವಂತೆ ಮಾಡುವುದಾಗಿದೆ, ಇಡೀ ಸತ್ತೆಯನ್ನು ಅವನಿಗಾಗಿ ಭಕ್ತಿ ತೋರಿಸಲು, ಬಿಟ್ಟುಕೊಡುವುದಾಗಿದೆ, ಶರಣಾಗತವಾಗುವುದಾಗಿದೆ, ಅದರಿಂದಾಗಿ ಅವನು ನಮ್ಮ ಹತ್ತಿರ ಹಾಗೂ ನಮ್ಮಲ್ಲಿ ನೆಲೆಸುವನು, ನಾವು ಅವನೊಡನೆ ಅವನಲ್ಲಿ ನೆಲೆಸುವೆವು. ಈ ಬಗೆಯ ಭಕ್ತಿಗೆ 'ಮನನ' ಹಾಗೂ ದರ್ಶನ, ಎಲ್ಲ ವಸ್ತು–ವಿಷಯಗಳಲ್ಲಿ ಸತತ ಅವನ ಬಗ್ಗೆ ಯೋಚಿಸುವುದು ಹಾಗೂ ನೋಡುತ್ತಿರುವುದು ಅವಶ್ಯವಾಗಿದೆ. ಭೌತಿಕ ಪ್ರಕೃತಿಯ ವಸ್ತು–ವಿಷಯಗಳನ್ನು ನಾವು ನೋಡಿದಾಗ ನಮ್ಮ ಪ್ರೇಮದ ದೈವೀ ಉದ್ದೇಶವನ್ನು ನೋಡಬೇಕು, ನಾವು ಜನರನ್ನು ಹಾಗೂ ಸತ್ತೆಗಳನ್ನು ನೋಡಿದಾಗ ಅವರಲ್ಲಿ ಹಾಗೂ ಅವರೊಡನೆ ಇರುವ ನಮ್ಮ ಸಂಬಂಧದಲ್ಲಿ ಅವನನ್ನು ನೋಡಬೇಕು, ಅದು ಅವುಗಳಲ್ಲಿ ನಾವು ಅವನ ರೂಪಗಳಿರುವ ಸಂಬಂಧದಲ್ಲಿ ಪ್ರವೇಶ ಮಾಡುತ್ತಿರುವುದನ್ನು ನೋಡಬೇಕು. ಭೌತಿಕ ಪ್ರಪಂಚದ ಸೀಮಿತತೆಯನ್ನು ಮುರಿದುಕೊಂಡು ಹೋದಾಗ ಅದನ್ನು ನಾವು ತಿಳಿದುಕೊಳ್ಳುತ್ತೇವೆ ಇಲ್ಲವೆ ಇತರ ಸ್ತರಗಳಲ್ಲಿರುವ ಸತ್ತೆಗಳೊಡನೆ ಸಂಬಂಧವನ್ನು ಹೊಂದುತ್ತೇವೆ, ಆದಾಗ್ಯೂ ಆ ಯೋಚನೆ ಹಾಗೂ ದರ್ಶನ ನಮ್ಮ ಮನಸ್ಸಿಗೆ ನಿಜವಾಗುವಂತೆ ಮಾಡಬೇಕು. ಕೇವಲ ಭೌತಿಕ ಹಾಗೂ ತೋರಿಕೆಯ ರೂಪಗಳಿಗೆ ಅಂಗಹೀನವಾದ ಸಂಬಂಧಗಳಿಗೆ ತೆರೆದುಕೊಂಡಿರುವ ನಮ್ಮ ಮನಸ್ಸುಗಳ ಸಾಮಾನ್ಯ ರೂಢಿ ಮತ್ತು ಅಂತರಂಗದೊಳಗಿರುವ ದೇವ ಪ್ರಮುಖನನ್ನು ಅಲಕ್ಷಿಸುವ ಎಲ್ಲವನ್ನೂ ಅಪ್ಪಿಕೊಳ್ಳುವಿಕೆಗೆ ಎಲ್ಲವನ್ನೂ ಒಳಗೊಳ್ಳುವಿಕೆಗೆ ಈ ಆಳಾತಿ ಆಳದ ಹಾಗೂ ವಿಸ್ತಾರವಾದ ಹಾಗೂ ಈ ಶ್ರೇಷ್ಠ ಸಂಬಂಧಕ್ಕೆ ಶರಣಾಗಬೇಕು. ನಮ್ಮ ಹೃದಯದಿಂದ ಹಾಗೂ ಎಲ್ಲ ಸತ್ತೆಯಿಂದ ನಾವು ಪೂಜಿಸುವ ಈ ಒಬ್ಬ ದೇವನನ್ನು ಎಲ್ಲ ದೇವ ಪ್ರಮುಖರಲ್ಲಿ ನೋಡಬೇಕು, ಅವು ಅವನ ದೈವತ್ವದ ರೂಪಗಳಾಗಿರುತ್ತವೆ. ಹೀಗೆ ನಮ್ಮ ಆಧ್ಯಾತ್ಮಿಕ ಅಪ್ಪುಗೆಯನ್ನು ಭವ್ಯವಾಗಿ ವಿಸ್ತರಿಸುತ್ತ ನಾವು ಒಂದು ಬಿಂದುವಿನ ಬಳಿ ತಲುಪುತ್ತೇವೆ, ಅಲ್ಲಿ ಎಲ್ಲವೂ

ಅವನೇ ಆಗಿರುತ್ತಾನೆ ಮತ್ತು ಈ ಪ್ರಜ್ಞೆಯ ಸಂತೋಷದಿಂದ ನಮಗೆ ಒಂದು ಬಿಂದುವನ್ನು ತಲುಪಲಾಗುತ್ತದೆ ಅಲ್ಲಿ ಎಲ್ಲವೂ ಅವನೇ ಆಗಿರುತ್ತಾನೆ ಮತ್ತು ಪ್ರಜ್ಞೆಯ ಈ ದಿವ್ಯಾನಂದ ಈ ಜಗತ್ತಿನತ್ತ ನೋಡುವ ನಮಗೆ ಸಾಮಾನ್ಯ ಅಡೆತಡೆಗೊಳಗಾಗದ ರೀತಿಯಾಗಿರುತ್ತದೆ. ಅದು ನಮಗೆ ಬಾಹ್ಯ ಇಲ್ಲವೆ ವ್ಯಕ್ತಿನಿಷ್ಠವಾಗಿ ಅವನೊಡನಿರುವ ಏಕತೆಯನ್ನು ತರುತ್ತದೆ.

**– ಶ್ರೀ ಅರವಿಂದರು**

*

**ಪ್ರೀತ್ಯಾಸ್ಪದನ ಪ್ರತಿಮೆ**

ಆಂತರಿಕವಾಗಿ ಪ್ರೀತ್ಯಾಸ್ಪದನ ಪ್ರತೀಕ ಒಳಗಣ್ಣಿಗೆ ಗೋಚರವಾಗಬೇಕು, ತನ್ನ ಅರಮನೆಯಲ್ಲಿ ವಾಸಿಸುವ ಹಾಗೆ ನಮ್ಮಲ್ಲಿ ವಾಸಮಾಡಬೇಕು, ತನ್ನ ಸಾನ್ನಿಧ್ಯದ ಮಾಧುರ್ಯದಿಂದ ನಮ್ಮ ಹೃದಯಗಳನ್ನು ರೂಪಿಸಬೇಕು, ಮಿತ್ರನ ರೀತಿಯಲ್ಲಿ ನಮ್ಮ ಮನಸ್ಸಿನ ಹಾಗೂ ಜೀವನದ ಎಲ್ಲ ಚಟುವಟಿಕೆಗಳ ಮೇಲೆ ಅಧ್ಯಕ್ಷತೆ ವಹಿಸಬೇಕು, ನಮ್ಮ ಸತ್ತೆಯ ಶಿಖರದಿಂದ ಪ್ರಭು ಹಾಗೂ ಪ್ರೀತಿಸುವವ–ನಾಗಿರಬೇಕು, ಮೇಲಿನಿಂದ ತನ್ನೊಡನೆ ಹಾಗೂ ವಿಶ್ವದೊಡನೆ ನಮ್ಮನ್ನು ಏಕಗೊಳಿಸಬೇಕು. ಸತತ ಆಂತರಿಕ ಸಹಭಾಗಿತ್ವ ಹತ್ತಿರದ, ಶಾಶ್ವತ ಹಾಗೂ ವಿಫಲವಾಗದ ಸಂತೋಷವಾಗಿರುತ್ತದೆ. ನಮ್ಮ ಸಾಮಾನ್ಯ ಪೂರ್ವಾಕ್ರಮಣಗಳಿಂದ ಪೂರ್ತಿ ದೂರವಾಗಿ ನಮ್ಮೊಳಗೇ ವಿಶ್ರಾಂತಿ ಪಡೆಯಲು ಅಸಾಧಾರಣ ಹತ್ತಿರವಿರುವಿಕೆಗೆ ಹಾಗೂ ಆರಾಧನೆಗೆ ಈ ಸಹಭಾಗಿತ್ವವನ್ನು ಮಿತಿಗೊಳಿಸಬಾರದು ಇಲ್ಲವೆ ನಮ್ಮ ಮಾನವ ಚಟುವಟಿಕೆಗಳನ್ನು ದೂರವಿರಿಸಿ ಅದನ್ನು ಅರಸಬಾರದು. ನಮ್ಮ ಎಲ್ಲ ಯೋಚನೆಗಳು, ಪ್ರಚೋದನೆಗಳು, ಭಾವನೆಗಳು, ಕ್ರಿಯೆಗಳು ಇವುಗಳಿಗೆ ಅನುಮತಿ ನೀಡುವುದನ್ನು, ಅನುವು ಮಾಡದೆ ಇರುವುದನ್ನು ಕುರಿತು ಅವನ ಗಮನ ಸೆಳೆಯಬೇಕು ಇಲ್ಲವೆ ನಾವಿನ್ನೂ ಈ ಮಟ್ಟವನ್ನು ತಲುಪಲು ಶಕ್ತರಾಗದಿದ್ದರೆ ನಮ್ಮ ಯಜ್ಞಾಹುತಿಯ ಅಭೀಪ್ಸೆಯಲ್ಲಿ ಅವನಿಗೆ ಸಮರ್ಪಿಸಬೇಕು. ಅದರಿಂದಾಗಿ ಅವನು ಹೆಚ್ಚು ಹೆಚ್ಚಾಗಿ ನಮ್ಮಲ್ಲಿ ಅವರೋಹಣ ಮಾಡುವನು, ಅವೆಲ್ಲವುಗಳಲ್ಲಿ ಪ್ರಸ್ತುತವಿರುವನು ಮತ್ತು ತನ್ನ ಎಲ್ಲ ಸಂಕಲ್ಪ ಹಾಗೂ ಸಾಮರ್ಥ್ಯಗಳೊಡನೆ ಅವನ ಪ್ರಕಾಶ ಹಾಗೂ ಜ್ಞಾನದೊಂದಿಗೆ, ಪ್ರೇಮ ಹಾಗೂ ದಿವ್ಯಾನಂದದೊಂದಿಗೆ ಸುತ್ತುವರಿಯುವನು, ಕೊನೆಯಲ್ಲಿ ನಮ್ಮ ಎಲ್ಲ

ಭಾವನೆಗಳು, ಪ್ರಚೋದನೆಗಳು, ಕ್ರಿಯೆಗಳು ಅವನಿಂದ ಮುಂದುವರಿಯಲು ಪ್ರಾರಂಭಿಸುತ್ತವೆ ಮತ್ತು ತಮ್ಮದೇ ಕೆಲವು ದೈವಿಕ ಬೀಜ ಹಾಗೂ ರೂಪಗಳಲ್ಲಿ ಬದಲಾಗುತ್ತವೆ. ನಮ್ಮ ಇಡೀ ಆಂತರಿಕ ಜೀವನದಲ್ಲಿ ಅವನ ಸತ್ತೆಯ ಭಾಗವೆಂದು ಪ್ರಜ್ಞೆಯಲ್ಲಿ ಬೆಳೆದಿರುತ್ತೇವೆ, ನಾವು ಆರಾಧಿಸುವ ಭಗವಂತನ ಅಸ್ತಿತ್ವ ಮತ್ತು ನಮ್ಮದೇ ಜೀವನಗಳ ಮಧ್ಯದಲ್ಲಿ ಇನ್ನು ಮುಂದೆ ವಿಚ್ಛೇದನೆ ಇಲ್ಲದಂತಾಗುವವರೆಗೆ ಹಾಗಾಗುತ್ತದೆ, ಹಾಗೆಯೇ ಎಲ್ಲ ಸಂಭವಿಸುವಿಕೆಗಳಲ್ಲಿ ದೈವೀ ಪ್ರೀತ್ಯಾಸ್ಪದದನ್ನು ನೋಡುವತ್ತ ಬರುತ್ತೇವೆ. ಹಾಗೆಯೇ ಎಲ್ಲ ಸಂಭವಿಸುವಿಕೆಗಳಲ್ಲಿ ದೈವೀ ಪ್ರೀತ್ಯಾಸ್ಪದ ನಮ್ಮೊಡನೆ ವ್ಯವಹರಿಸುವುದನ್ನು ನೋಡುವತ್ತ ಬರಬೇಕು ಮತ್ತು ಅವುಗಳಲ್ಲಿ ಎಂತಹ ಸಂತೋಷ ಕಂಡುಕೊಳ್ಳಬೇಕೆಂದರೆ ದುಃಖ, ವೇದನೆ ಮತ್ತು ಭೌತಿಕ ನೋವು ಅವನ ಕಾಣಿಕೆಗಳಾಗಿರುತ್ತವೆ ಮತ್ತು ದಿವ್ಯಾನಂದವಾಗುವತ್ತ ಹೊರಳುತ್ತವೆ, ಕೊನೆಗೆ ದೈವೀ ಸಂಪರ್ಕದ ಅರ್ಥದಿಂದ ಹತವಾಗಿ ದಿವ್ಯಾನಂದದಲ್ಲಿ ಮಾಯವಾಗುತ್ತವೆ, ಏಕೆಂದರೆ ಅವನ ಹಸ್ತಗಳ ಸ್ಪರ್ಶ ಅದ್ಭುತ ಪ್ರಜ್ಞೆಯ ರಸತಜ್ಞವಾಗಿರುತ್ತದೆ. ಕೆಲವರು ಜೀವನವನ್ನು ತಿರಸ್ಕರಿಸುತ್ತಾರೆ, ಏಕೆಂದರೆ ಅದು ದುಃಖ, ನೋವುಗಳೊಂದಿಗೆ ಕಲಂಕಿತವಾಗಿರುತ್ತದೆ, ಆದರೆ ದೇವನಿಗೆ ಪ್ರೀತ್ಯಾಸ್ಪದನಾದವನಿಗೆ ಅವನನ್ನು ಭೇಟಿಮಾಡುವ ಸಾಧನವಾಗುತ್ತದೆ, ಅವನ ಒತ್ತುಕೊಡುವ ಮುದ್ರೆಯಿರುತ್ತದೆ, ಮತ್ತು ಕೊನೆಗೆ ಅವನ ಸ್ವಭಾವದೊಂದಿಗೆ ನಮ್ಮ ಏಕತೆ ಸಾಕಷ್ಟು ಪೂರ್ಣವಾದ ಕೂಡಲೆ ನಿಂತುಹೋಗುತ್ತದೆ, ಈ ವಿಶ್ವಂಭರ ದಿವ್ಯಾನಂದದ ಮುಸುಕುಗಳು ಅದನ್ನು ಮರೆಯಲ್ಲಿರಿಸಲಾರವು. ಅವು ಆನಂದವಾಗಿ ಬದಲಾಗುತ್ತವೆ.

**(CWSA, 24/601–02)** **– ಶ್ರೀ ಅರವಿಂದರು**

*

**ಭಗವಂತನೊಡನೆ ಹಲವಾರು ಬಗೆಯ ಸಂಬಂಧ**

ಈ ಏಕತೆಯನ್ನುಂಟು ಮಾಡುವ ಎಲ್ಲ ಸಂಬಂಧಗಳು ಈ ಮಾರ್ಗದಲ್ಲಿ ಗಾಢವಾಗಿ ಮತ್ತು ದಿವ್ಯಾನಂದದಿಂದ ವ್ಯಕ್ತಿಗತವಾಗುತ್ತವೆ. ಕೊನೆಯಲ್ಲಿ ಅವೆಲ್ಲವುಗಳನ್ನು ಕೈಗೆತ್ತಿಕೊಳ್ಳುವುದು ಇಲ್ಲವೆ ಹಾಗೂ ಏಕತೆಯಲ್ಲಿರಿಸುವುದು ಪ್ರೀತಿಸುವವನ ಹಾಗೂ ಪ್ರೀತ್ಯಾಸ್ಪದನ ಸಂಬಂಧವಾಗಿರುತ್ತದೆ, ಏಕೆಂದರೆ ಅದು

ಎಲ್ಲದಕ್ಕಿಂತಲೂ ಗಾಢವಾದದ್ದು ಹಾಗೂ ದಿವ್ಯಾನಂದವಿರುವಂತಹದು ಆಗಿದ್ದು ಉಳಿದೆಲ್ಲವನ್ನೂ ಅದರ ಎತ್ತರಗಳಲ್ಲಿ ಮೇಲ್ಗಡೆ ಕೊಂಡೊಯ್ಯುತ್ತದೆ, ಆದಾಗ್ಯೂ ಅವುಗಳನ್ನು ಮೀರಿ ಹೋಗುತ್ತದೆ. ಬೋಧಕ ಹಾಗೂ ಮಾರ್ಗದರ್ಶಕನಾಗಿರುವ ಅವನು ನಮ್ಮನ್ನೂ ಜ್ಞಾನದತ್ತ ಕರೆದೊಯ್ಯುತ್ತಾನೆ. ಅಭಿವೃದ್ಧಿಗೊಳ್ಳುತ್ತಿರುವ ಆಂತರಿಕ ಪ್ರಕಾಶ ಹಾಗೂ ದರ್ಶನಗಳ ಪ್ರತಿಯೊಂದು ಹೆಜ್ಜೆಯಲ್ಲಿ ನಮ್ಮ ಮನಸ್ಸಿನ ಮಣ್ಣಿಗೆ ಎರಕ ಕೊಡುವ ಕಲಾಕಾರನದಿರುವ ಹಸ್ತದ ಸ್ಪರ್ಶದಂತೆ ಅವನದಿರುತ್ತದೆ, ಅವನ ಧ್ವನಿ ಸತ್ಯವನ್ನು ಹಾಗೂ ಅದರ ಶಬ್ದವನ್ನು ತೆರೆದು ತೋರಿಸುತ್ತದೆ. ಪ್ರತಿಸ್ಪಂದಿಸಲು ಅವನು ಯೋಚನೆಯೊಂದನ್ನು ಕೊಡುತ್ತಾನೆ, ಅದು ಅವನ ಮಿಂಚುತ್ತಿರುವ ಭರ್ಚಿಗಳಿಂದ ಬರುವ ಕ್ಷಣಿಕ ಪ್ರಕಾಶದಂತಿರುತ್ತದೆ, ನಮ್ಮ ಅಜ್ಞಾನದ ಅಂಧಕಾರವನ್ನು ಬೆನ್ನತ್ತಿ ಅದು ಓಡಿಸುತ್ತದೆ.

ಅವನು ದೈವೀ ಪ್ರಭು, ಆದರೆ ಈ ಬಗೆಯ ಸಮೀಪಿಸುವಿಕೆಯಲ್ಲಿ ಎಲ್ಲ ಭಯಭಕ್ತಿ, ಭಯ ಹಾಗೂ ಪ್ರತ್ಯೇಕಗೊಳಿಸುವಿಕೆ ಮತ್ತು ಕೇವಲ ವಿಧೇಯತೆ ಇವೆಲ್ಲ ಮಾಯವಾಗುತ್ತವೆ, ಏಕೆಂದರೆ ಈ ವಿಷಯಗಳನ್ನು ತಾಳಿಕೊಳ್ಳದ ಹಾಗೆ ನಾವು ಹತ್ತಿರದವರು, ಅವನೊಡನೆ ಏಕತೆ ಪಡೆದವರು ಆಗಿರುತ್ತೇವೆ, ನಮ್ಮ ಸತ್ತೆಯ ಪ್ರೀತ್ಯಾಸ್ಪದನು ಅದನ್ನು ಕೈಗೆತ್ತಿಕೊಳ್ಳುತ್ತಾನೆ, ಉಪಯೋಗಿಸುತ್ತಾನೆ ವಿಧೇಯತೆ ಸೇವಕನ ಕುರುಹು. ಆದರೆ ಅದು ಈ ಸಂಬಂಧದಲ್ಲಿ ಅದು ಅತ್ಯಂತ ಕೆಳಮಟ್ಟದ ಹಂತ, ದಾಸ್ಯ ನಂತರ ನಾವು ವಿಧೇಯರಾಗಿರುವುದಲ್ಲ, ಆದರೆ ಅವನ ಸಂಕಲ್ಪದ ಪ್ರಕಾರ ಚಲನೆಗೊಳಗಾಗುತ್ತೇವೆ, ಅದು ಸಂಗೀತಕಾರನ ಬೆರಳಿಗೆ ತಂತಿ ಉತ್ತರಕೊಡುವ ರೀತಿಯಲ್ಲಿರುತ್ತದೆ. ಉಪಕರಣವಾಗುವುದು ಸ್ವ-ಶರಣಾಗತಿಯ ಹಾಗೂ ಅಧೀನಪಡಿಸಿಕೊಳ್ಳುವಿಕೆಯ ಉಚ್ಚತರ ಹಂತ. ಆದರೆ ಇದು ಜೀವಂತವಿರುವ ಹಾಗೂ ಪ್ರೀತಿಸುವ ಉಪಕರಣ ಮತ್ತು ಅದು ನಮ್ಮ ಇಡೀ ಸ್ವಭಾವ ದೇವನ ಗುಲಾಮನಾಗುವುದರಲ್ಲಿ ಕೊನೆಗೊಳ್ಳುತ್ತದೆ, ಅವನ ಒಡೆತನದಲ್ಲಿ ದೈವೀ ಹಿಡಿತ ಹಾಗೂ ಪ್ರಭುತ್ವ ಇವುಗಳಿಗೆ ತನ್ನದೇ ದಿವ್ಯಾನಂದದ ಅಧೀನತೆಯಲ್ಲಿ ಸಂತೋಷಪಡಿಸುತ್ತದೆ.

ಅವನು ಮಿತ್ರ, ಉಪದೇಶಕ, ಸಹಾಯಕ, ತೊಂದರೆ ಹಾಗೂ ಕಷ್ಟದಲ್ಲಿರುವಾಗ ಸಂರಕ್ಷಕ, ನಮಗಾಗಿ ಹೋರಾಡುವ ವಿರೋಚಿತ ನಾಯಕ ಇಲ್ಲವೆ, ಅವನ ಗುರಾಣಿಯಡಿಯಲ್ಲಿ ನಾವು ಹೋರಾಡುತ್ತೇವೆ, ನಮ್ಮ

ಮಾರ್ಗಗಳಲ್ಲಿ ರಥ ನಡೆಸುವವ, ಕಪ್ತಾನ, ಅವನು ಸಹಕಾರಿ ಹಾಗೂ ಶಾಶ್ವತವಾಗಿ ಜೊತೆಗಿರುವವನು ಜೀವನದ ಲೀಲೆಯಲ್ಲಿ ಜೊತೆ ಆಟಗಾರ. ಆದರೆ ಇನ್ನೂ ಇಲ್ಲಿಯವರೆಗೆ ಒಂದು ವಿಶಿಷ್ಟ ವಿಭಜನೆ ಇದೆ, ಅದೆಷ್ಟೇ ಹರ್ಷದಾಯಕವಾಗಿರಲಿ ಮತ್ತು ಗೆಳೆತನ ಉಪಕಾರ ಬುದ್ಧಿಯ ತೋರಿಕೆಯಿಂದ ಬಹಳಷ್ಟು ಸೀಮಿತವಾಗಿದೆ. ಪ್ರೀತ್ಯಾಸ್ಪದನು ಗಾಯವನ್ನುಂಟು ಮಾಡಬಹುದು, ಬಿಟ್ಟುಕೊಟ್ಟು ಹೋಗಬಹುದು, ನಮ್ಮೊಡನೆ ಕೋಪಗೊಂಡಿರಬಹುದು, ನಂಬಿಕೆದ್ರೋಹ ಮಾಡಬಹುದು, ಆದಾಗ್ಯೂ ನಮ್ಮ ಪ್ರೇಮ ತಾಳಿಕೊಳ್ಳುತ್ತದೆ, ಈ ವೈರುಧ್ಯಗಳಿಂದ ಅಭಿವೃದ್ಧಿಯನ್ನೂ ಕೂಡ ಪಡೆಯುತ್ತದೆ. ಅವು ಮರಳಿ ಏಕವಾದುದರ ಸಂತೋಷವನ್ನು ಮತ್ತು ಆ ಸಂತೋಷದ ಒಡೆತನವನ್ನು ಹೆಚ್ಚಿಸುತ್ತವೆ. ಅವುಗಳ ಮೂಲಕ ಪ್ರೀತ್ಯಾಸ್ಪದ ಮಿತ್ರನಾಗಿ ಉಳಿದುಕೊಳ್ಳುತ್ತಾನೆ. ಅವನು ಕೈಕೊಳ್ಳುವುದೆಲ್ಲ ಕೊನೆಯಲ್ಲಿ ನಮ್ಮ ಆತ್ಮದ ಪರಿಪೂರ್ಣತೆಗಾಗಿ ಹಾಗೂ ಅವನು ನಮ್ಮಲ್ಲಿ ಕಂಡುಕೊಳ್ಳುವ ಸಂತೋಷಕ್ಕಾಗಿ ಇರುತ್ತದೆ. ಈ ವೈರುಧ್ಯಗಳು ಶ್ರೇಷ್ಠತರ ಅನ್ಯೋನ್ಯತೆಯತ್ತ ಕರೆದೊಯ್ಯುತ್ತವೆ, ಅವನು ನಮ್ಮ ಸತ್ತೆಯ ತಂದೆ, ತಾಯಿ, ಮೂಲ, ರಕ್ಷಕ ಮತ್ತು ಲೋಲುಪತೆಯಿಂದ ಒಲವು ತೋರಿಸುವವ, ನಮ್ಮ ಆಸೆಗಳನ್ನು ಕೊಡುವವನಾಗಿದ್ದಾನೆ. ಅವನು ನಮ್ಮ ಬಯಕೆಯಿಂದ ಜನ್ಮತಾಳಿದವನು, ಅವನಿಗೆ ನಾವು ಒಲವು ತೋರಿಸುತ್ತೇವೆ, ಹತ್ತಿರವಾಗುತ್ತೇವೆ. ಈ ಎಲ್ಲ ವಿಷಯಗಳನ್ನು ಪ್ರೀತ್ಯಾಸ್ಪದನು ಕೈಗೆತ್ತಿಕೊಳ್ಳುತ್ತಾನೆ. ಅವನ ಪ್ರೇಮ ಅದರ ಆತ್ಮೀಯತೆಯಲ್ಲಿ ಹಾಗೂ ಏಕತೆಯಲ್ಲಿ ಪಿತೃತ್ವದ ಹಾಗೂ ಮಾತೃತ್ವದ ಕಾಳಜಿಯನ್ನು ಕಾಪಾಡಿಕೊಂಡು ಬರುತ್ತದೆ, ಅದರ ಮೇಲೆ ಮಾಡುವ ನಮ್ಮ ಒತ್ತಾಯದ ಬೇಡಿಕೆಗಳನ್ನು ಪೂರೈಸುತ್ತದೆ. ಆ ಆಳಾತಿಆಳದ, ಹಲವಾರು ಬದಿಗಳಿರುವ ಸಂಬಂಧದಲ್ಲಿ ಎಲ್ಲವೂ ಏಕವಾಗಿರುತ್ತದೆ.

**(CWSA, 24/603–04)** – ಶ್ರೀ ಅರವಿಂದರು

*

**ಭಗವಂತನನ್ನು ಕುರಿತು ಬೆಳೆಯುತ್ತಿರುವ ಪ್ರೇಮ**

ಭಗವಂತನನ್ನು ಕುರಿತು ಬೆಳೆಯುತ್ತಿರುವ ಪ್ರೇಮ ತನ್ನೊಂದಿಗೆ ಅವನ ಬಗ್ಗೆ ವಿಸ್ತಾರಗೊಂಡ ಜ್ಞಾನ, ತನ್ನ ಸ್ವಭಾವದಲ್ಲಿ ಹಾಗೂ ಜೀವನದಲ್ಲಿ ದೈವೀ ಸಂಕಲ್ಪದ ಕ್ರಿಯೆ ಇವುಗಳನ್ನು ಕೊಂಡೊಯ್ಯಬೇಕು, ದೈವೀ ಪ್ರೀತ್ಯಾಸ್ಪದನು ತನ್ನನ್ನು ತೆರೆದು

ತೋರಿಸುತ್ತಾನೆ, ಜೀವನದ ಒಡೆತನವನ್ನು ಕೈಗೆತ್ತಿಕೊಳ್ಳುತ್ತಾನೆ. ಆದರೆ ಇನ್ನೂ ಸಾರಭೂತವಾದ ಸಂಬಂಧ ಎಲ್ಲ ವಿಷಯಗಳು ಪ್ರವಹಿಸುತ್ತಿರುವ ಪ್ರೇಮ, ಭಾವೋದ್ರೇಕದ ಪ್ರೇಮ, ಸಂಪೂರ್ಣ, ನೆರವೇರಿಕೆಯನ್ನು ಕುರಿತು ನೂರಾರು ಸಂಬಂಧಗಳನ್ನು ಅರಸುವುದು, ಪರಸ್ಪರ ಒಡೆತನಕ್ಕಾಗಿ ಪ್ರತಿಯೊಂದು ಸಾಧನ, ಏಕತೆಯ ಸಂತೋಷದ ಲಕ್ಷಾನುಗಟ್ಟಲೆ ಮುಖಗಳಿಂದ ಬರುತ್ತದೆ.

ಮನಸ್ಸಿನ ಎಲ್ಲ ಭೇದಗಳು, ಎಲ್ಲ ಅಡ್ಡಗೋಡೆಗಳು ಮತ್ತು "ಇರುವುದು ಸಾಧ್ಯವಿಲ್ಲ" ಎನಿಸುವುದು, ತರ್ಕದ ಎಲ್ಲ ನಿರ್ದಯತೆಯಿಂದ ಮಾಡಿದ ವಿಶ್ಲೇಷಣೆಗಳು ಈ ಪ್ರೇಮದಿಂದ ಅಣಕಕ್ಕೊಳಗಾಗುತ್ತವೆ ಇಲ್ಲವೆ ಅವುಗಳನ್ನು ಏಕತೆಯ ದ್ವಾರಗಳು, ಪರೀಕ್ಷೆಗಳು ಹಾಗೂ ಕ್ಷೇತ್ರಗಳು ಎಂದು ಉಪಯೋಗಿಸಲಾಗುತ್ತದೆ. ಪ್ರೇಮ ನಮಗೆ ಹಲವಾರು ರೀತಿಗಳಿಂದ ಬರುತ್ತದೆ, ದೈವೀ ಪ್ರೇಮಿಯ ಸೌಂದರ್ಯಕ್ಕೆ ಎಚ್ಚತ್ತುಕೊಳ್ಳುವಿಕೆಯಿಂದ ಬರಬಹುದು, ಆದರ್ಶಮುಖ ಹಾಗೂ ಅವನ ಪ್ರತೀಕದಿಂದ ಬರಬಹುದು, ಜಗತ್ತಿನಲ್ಲಿರುವ ವಿಷಯಗಳ ಸಹಸ್ರಾರು ಮುಖಗಳ ಹಿಂದಿರುವ ಅವನದೇ ರಹಸ್ಯಪೂರ್ಣ ಸೂಚನೆಗಳು ಇವುಗಳಿಂದ ಬರಬಹುದು, ಹೃದಯದ ನಿಧಾನಗತಿಯಿಂದ ಇಲ್ಲವೆ ಹಠಾತ್ತನೆ ಆಗುವ ಆವಶ್ಯಕತೆಯಿಂದ ಬರಬಹುದು, ಹೃದಯದಲ್ಲಿರುವ ಅಸ್ಪಷ್ಟ ದಾಹದಿಂದ ಬರಬಹುದು, ನಮ್ಮ ಹತ್ತಿರವಿರುವ ಯಾರೋ ಒಬ್ಬರು ಪ್ರೇಮದೊಂದಿಗೆ ನಮ್ಮನ್ನು ಎಳೆಯುತ್ತಿರುವ ಇಲ್ಲವೆ ಬೆಂಬತ್ತಿರುವ ಭಾವನೆಯಿಂದ ಬರಬಹುದು, ಇಲ್ಲವೆ ನಾವು ಶೋಧಿಸಬೇಕಾದ ದಿವ್ಯಾನಂದವಿರುವ ಹಾಗೂ ಸೌಂದರ್ಯವಿರುವ ಆ ಯಾರೋ ಒಬ್ಬರ ಪ್ರೇಮದಿಂದ ಕೈಕೊಳ್ಳಬಹುದು.

**(CWSA, 24/604–05)** – ಶ್ರೀ ಅರವಿಂದರು

*

**ನಾವು ಅವನನ್ನು ಅರಸಬಹುದು ಇಲ್ಲವೆ ದೈವೀ ಪ್ರೇಮಿ ನಮ್ಮನ್ನು ಬೆಂಬತ್ತಬಹುದು**

ನಾವು ಭಾವೋದ್ರೇಕದಿಂದ ಅವನನ್ನು ಅರಸಬಹುದು ಮತ್ತು ಗೋಚರಿಸದಿರದ ಪ್ರೀತ್ಯಾಸ್ಪದನನ್ನು ಬೆಂಬತ್ತಬಹುದು, ಆದರೆ ಹಾಗೆಯೇ ನಾವು ಯೋಚಿಸದಿರುವ ಪ್ರೀತ್ಯಾಸ್ಪದನು ನಮ್ಮನ್ನು ಬೆಂಬತ್ತಿರಬಹುದು, ಜಗತ್ತಿನ ಮಧ್ಯದಲ್ಲಿ ನಮ್ಮ ಮೇಲೆ ಬರಬಹುದು ಹಾಗೂ ನಮ್ಮನ್ನು ಮೊದಲೇ ತನ್ನದೇ

ಆದದ್ದಕ್ಕಾಗಿ ಹಿಡಿತದಲ್ಲಿರಿಸಿಕೊಳ್ಳಬಹುದು, ನಾವು ಒಪ್ಪಬಹುದು ಇಲ್ಲವೆ ಒಪ್ಪದೇ ಇರಬಹುದು. ಅವನು ಮೊದಲು ಪ್ರೇಮದ ಕೋಪದಿಂದ ಕೂಡಿದ ಶತ್ರುವಿನ ಹಾಗೆ ಕೂಡ ಬರಬಹುದು ಹಾಗೂ ನಮ್ಮ ಅತ್ಯಂತ ಮುಂಚಿನ ಸಂಬಂಧಗಳು ಸಮರ ಹಾಗೂ ಹೋರಾಟಗಳದ್ದಾಗಿರಬಹುದು. ಮೊದಲು ಪ್ರೇಮ ಹಾಗೂ ಆಕರ್ಷಣೆ ಇರುವಲ್ಲಿ ಭಗವಂತ ಹಾಗೂ ಆತ್ಮಗಳ ನಡುವೆ ಇರುವ ಸಂಬಂಧಗಳು ಇನ್ನೂ ದೀರ್ಘಕಾಲದವರೆಗೆ ತಪ್ಪುತಿಳಿವಳಿಕೆ, ಅಪರಾಧ, ಅಸೂಯೆ ಹಾಗೂ ಕೋಪ, ಪ್ರೇಮದ ಹೋರಾಟ ಹಾಗೂ ಜಗಳಗಳು, ಭರವಸೆ ಹಾಗೂ ನಿರಾಶೆ, ಉಪಸ್ಥಿತಿ ಇಲ್ಲದೆ ಇರುವುದರ, ಪ್ರತ್ಯೇಕತೆ ಇವುಗಳಿಂದ ಇನ್ನೂ ವೈವಿಧ್ಯಮಯವಾಗಿರಬಹುದು. ನಾವು ಹೃದಯದ ಎಲ್ಲ ಭಾವೋದ್ರೇಕಗಳನ್ನು ಏಕತೆಯ ಏಕೈಕ ದಿವ್ಯಾನಂದವಾಗುವವರೆಗೆ ಅವನ ವಿರುದ್ಧ ಚೆಲ್ಲಿಕೊಡುತ್ತೇವೆ.

ಆದರೆ ಅದು ಕೂಡ ಏಕತಾನತೆಯಲ್ಲ. ಮಾನವ ಮಾತಿನ ನಾಲಿಗೆಗೆ ಅತ್ಯಂತ ಹೆಚ್ಚಿನ ಏಕತೆಯನ್ನು ಕುರಿತು ಹೇಳುವುದು ಸಾಧ್ಯವಿಲ್ಲ. ಮತ್ತು ದೈವೀ ಪ್ರೇಮದ ಆನಂದದ ಎಲ್ಲ ಶಾಶ್ವತ ಎಲ್ಲ ವೈವಿಧ್ಯವನ್ನು ಕುರಿತು ನಮ್ಮ ಉಚ್ಚತರ ಹಾಗೂ ನಿಮ್ನತರ ಅಂಗಗಳು ಅದರ ಪ್ರವಾಹದಿಂದ ತುಂಬಿಕೊಂಡಿರುತ್ತವೆ, ಮನಸ್ಸು ಹಾಗೂ ಜೀವನ ಆತ್ಮಕ್ಕಿಂತ ಕಡಿಮೆ ರೀತಿಯಲ್ಲಿ ತುಂಬಿಕೊಂಡಿರುವುದಿಲ್ಲ. ದೇಹ ಕೂಡ ಅದರ ಪಾಲನ್ನು ಪಡೆಯುತ್ತದೆ, ಅದರ ಸ್ಪರ್ಶದ ಭಾವನೆ ತಂದುಕೊಳ್ಳುತ್ತದೆ, ಅದರ ಅಂಗಗಳಲ್ಲಿ, ರಕ್ತನಾಳಗಳಲ್ಲಿ, ನರಗಳಲ್ಲಿ ಅದರ ಪ್ರವಹಿಸುತ್ತಿರುವ ಅತ್ಯಾನಂದ ಮಧುವಿರುತ್ತದೆ 'ಅಮೃತ', ಸತ್ತೆಯ ಕೊನೆಯ ಶಬ್ದಗಳು ದೈವೀ ಪ್ರೇಮ, ದಿವ್ಯಾನಂದ, ರಹಸ್ಯದ ರಹಸ್ಯಗಳು, ಅದ್ಭುತಗಳ ಅದ್ಭುತಗಳು.

**(CWSA, 24/604)** – **ಶ್ರೀ ಅರವಿಂದರು**

*

**ದೈವೀಪ್ರೀತ್ಯಾಸ್ಪದನ ಅಳವಿಗೆ ನಿಲುಕದಂತಹದು ಏನೂ ಇಲ್ಲ**

ಹೀಗೆ ವಿಶ್ವಂಭರಗೊಂಡ, ವ್ಯಕ್ತಿಗತಗೊಳಿಸಿದ, ಅದರ ಗಾಢತೆಗಳತ್ತ ಮೇಲಕ್ಕೆತ್ತಲಾದ, ಎಲ್ಲವನ್ನೂ ಆಕ್ರಮಿಸುವಂತೆ ಮಾಡಿದ ಎಲ್ಲವನ್ನೂ ಅಪ್ಪಿಕೊಳ್ಳುವ, ಎಲ್ಲದರ ನೆರವೇರಿಕೆ ಕಂಡುಕೊಳ್ಳುವ ಪ್ರೇಮ ಹಾಗೂ ದಿವ್ಯಾನಂದಗಳ ರೀತಿ ಪರಮೋಚ್ಚ ಮುಕ್ತಿಯನ್ನು ಕೊಡುತ್ತದೆ. ಆದರೆ ಪ್ರೇಮದ

ಸಂಪೂರ್ಣ ಏಕತೆ ಮುಕ್ತಿಯನ್ನು ಕೊಡುತ್ತದೆ ಮತ್ತು ಮುಕ್ತಿಗೆ ಬೇರೆ ಅರ್ಥವಿಲ್ಲ, ಅದು ಎಲ್ಲ ಬಗೆಯ ಮುಕ್ತಿಗಳನ್ನು ಒಟ್ಟಿಗೆ ಒಳಗೊಳ್ಳುತ್ತದೆ, ಅದು ಕೆಲವರು ಹೊಂದಿರುವಂತೆ ಕೇವಲ ಒಂದರ ನಂತರ ಒಂದರಂತೆ ಬರುವ ಪರಸ್ಪರ ಬೇರೆಯಾಗಿರುವ ಮುಕ್ತಿಗಳಾಗಿರುವುದಿಲ್ಲ.

ನಮ್ಮಲ್ಲಿ "ಸಾಯುಜ್ಯ" ಎಂಬ ಆತ್ಮದೊಂದಿಗೆ ಭಗವಂತನ ಪರಿಪೂರ್ಣ ಏಕತೆಯಿದೆ, ಅದರಲ್ಲಿ ಇಲ್ಲಿ ವ್ಯತ್ಯಾಸದ ಮೇಲೆ ಅವಲಂಬಿಸಿರುವುದರಲ್ಲಿರುವುದರ ವಿಷಯ ಸೂಚಿಯಿದೆ– ಆದರೆ ಅಲ್ಲಿ ವ್ಯತ್ಯಾಸ ಕೇವಲ ಏಕತೆಯ ಒಂದು ರೂಪ– ಆನಂದ ಕೂಡ, ಹತ್ತಿರವಿರುವಿಕೆ, ಸಂಪರ್ಕ ಹಾಗೂ ಪರಸ್ಪರ ಸಾನ್ನಿಧ್ಯ ಇವೆಲ್ಲ ಇರುವ ಸಾಮೀಪ್ಯ ಹಾಗೂ ಸಾಲೋಕ್ಯ ಇವುಗಳಿವೆ, ನಾವು ಏಕರೂಪದ್ದೆಂದು, ಸಾದೃಶ್ಯವಾದದ್ದೆಂದು ಕರೆಯುವ ಪ್ರತಿಫಲನವಿದೆ, ಮತ್ತು ಇತರ ಅದ್ಭುತ ವಿಷಯಗಳು ಕೂಡ ಇವೆ, ಅವುಗಳಿಗೆ ಭಾಷೆಯಲ್ಲಿ ಇನ್ನೂ ಹೆಸರು ಕೊಡಲಾಗಿಲ್ಲ. ಪ್ರೀತ್ಯಾಸ್ಪದನ ಅಳವಿಗೆ ಬರದಂತಹದು ಇಲ್ಲವೆ ಅವನಿಗೆ ನಿರಾಕರಿಸುವುಂತಾಗುವ ಯಾವುದೂ ಇಲ್ಲ, ಏಕೆಂದರೆ ಅವನು ದೈವೀ ಪ್ರೀತಿಸುವವನ ವಿಶೇಷ ಪ್ರೀತಿಗೆ ಪಾತ್ರನಾದವನು ಹಾಗೂ ಪ್ರೀತ್ಯಾಸ್ಪದವನ ಆತ್ಮವಾಗಿರುತ್ತಾನೆ.

**(CWSA, 24/605–06)** **– ಶ್ರೀ ಅರವಿಂದರು**

*

ನಾವು ಅನುಸರಿಸುತ್ತ ಬಂದಿರುವ ಸಾಮರಸ್ಯದ ವಿಧಾನದಲ್ಲಿ ಬೆಂಬತ್ತಲಾದ ಇನ್ನೊಂದು ತತ್ವದ ಸುಳಿವಿದೆ, ಅದನ್ನು ಯೋಗದ ಸಾಧ್ಯತೆಗಳಿಂದ ದೊರಕಿಸಲಾಗಿದೆ. ಇದು ವೇದಾಂತದಿಂದ ಸುರುವಾಗಿ ತಂತ್ರದ ಗುರಿಯತ್ತ ಬರುತ್ತದೆ. ತಾಂತ್ರಿಕ ವಿಧಾನದಲ್ಲಿ ಶಕ್ತಿ ಬಹಳ ಮಹತ್ವದ್ದು, ಅದು ಆತ್ಮವನ್ನು ಕಂಡುಕೊಳ್ಳುವುದಕ್ಕೆ ಬೀಗದಕೈಯಾಗಿರುತ್ತದೆ, ಈ ಸಮನ್ವಯದಲ್ಲಿ ಆತ್ಮ ಎಲ್ಲದಕ್ಕಿಂತಲೂ ಮಹತ್ವದ್ದಾಗಿರುತ್ತದೆ ಅದು ಶಕ್ತಿಯನ್ನು ಕೈಗೆತ್ತಿಕೊಳ್ಳುವ ರಹಸ್ಯವಾಗುತ್ತದೆ.

**(CWSA, 24/612)** **– ಶ್ರೀ ಅರವಿಂದರು**

*



# ಸಮಗ್ರ ಸ್ವ–ಪರಿಪೂರ್ಣತೆಯತ್ತ

## ಅವೈಯಕ್ತಿತ್ವ, ವಿಶ್ವಂಭರತೆ ಹಾಗೂ ಕ್ರಿಯೆಯ ಬದಲಾದ ಮನೋಭಾವ

ವಿವೇಕವಿರುವ ಅವೈಯಕ್ತಿತ್ವ, ಅಚಂಚಲವಾದ ಸಮತೆ, ವಿಶ್ವಂಭರತೆ, ಈ ವಿಶ್ವಂಭರತೆ ಎಲ್ಲ ವಸ್ತು–ವಿಷಯಗಳನ್ನು ಕುರಿತು ಭಗವಂತನ ಪ್ರಕಟಣೆಯಾಗಿದೆ, ಅಸ್ತಿತ್ವದಲ್ಲಿರುವುದು ಆಗಿದೆ, ಕೋಪದಿಂದಿರುವುದಿಲ್ಲ, ತೊಂದರೆಗೀಡಾಗಿರುವುದಿಲ್ಲ, ವಸ್ತು–ವಿಷಯಗಳ ರೀತಿಗಳೊಂದಿಗೆ ತಾಳ್ಮೆ ಕಳೆದುಕೊಂಡಿರುವುದಿಲ್ಲ ಇಲ್ಲವೆ ಇನ್ನೊಂದೆಡೆಗೆ ಉದ್ರೇಕಕ್ಕೊಳಗಾಗಿರುವುದಿಲ್ಲ, ಅತ್ಯಾಸಕ್ತವಾಗಿರುವುದಿಲ್ಲ,

ಅತಿರಭಸದ್ದಾಗಿರುವುದಿಲ್ಲ, ಆದರೆ ನಿಯಮಕ್ಕೆ ವಿಧೇಯವಾಗಿರಬೇಕೆಂಬುದನ್ನು ನೋಡುತ್ತದೆ, ಕಾಲದ ಹೆಜ್ಜೆಗೆ ಮರ್ಯಾದೆ ಕೊಡಬೇಕಾಗುತ್ತದೆ, ವಸ್ತು–ವಿಷಯಗಳ ಹಾಗೂ ಸತ್ತೆಗಳ ವಾಸ್ತವತೆಯನ್ನು ಸಹಾನುಭೂತಿಯಿಂದ ಅವಲೋಕಿಸುತ್ತದೆ, ಆದರೆ ಸದ್ಯದ ತೋರಿಕೆಗಳನ್ನು ಕುರಿತು ಹಿಂದೆಯೂ ಕೂಡ ನೋಡುತ್ತದೆ, ಮುಂದೆ ಬರಲಿರುವ ದೈವೀ ಸಾಧ್ಯತೆಗಳ ಆಂತರಿಕ ಪ್ರಾಮುಖ್ಯತೆಗಳನ್ನು ಕೂಡ ನೋಡುತ್ತದೆ. ಭಗವಂತನ ಪರಿಪೂರ್ಣ ಉಪಕರಣಗಳೆಂದು ಕಾರ್ಯ ಕೈಕೊಳ್ಳುವವರಿಂದ ಇದನ್ನೇ ಒತ್ತಾಯದಿಂದ ಬೇಡಲಾಗಿರುತ್ತದೆ.

ಪರಿಪೂರ್ಣಗೊಂಡ ಮಾನವ ಆತ್ಮ, ಯಾವಾಗಲೂ, ಉತ್ಕ್ರಾಂತಿಯ ರೀತಿಗಳು ತೀವ್ರಗತಿಯಿಂದಾಗುವುದಕ್ಕೆ ಉಪಕರಣವಾಗಿರಬೇಕು. ಅದಕ್ಕಾಗಿ ಸ್ವಭಾವದಲ್ಲಿ ಯಾವುದೇ ದರ್ಜೆಯ ಮಟ್ಟಿಗಿರುವ ದೈವೀಪ್ರಭುತ್ವದ ಸಂಕಲ್ಪ ಕಾರ್ಯಮಾಡುವಂತೆ ಕಾರ್ಯಕೈಕೊಳ್ಳುತ್ತಿರುವ ದೈವೀ ಸಾಮರ್ಥ್ಯವಿರಬೇಕು. ಆದರೆ ಸಿದ್ಧಿಸಿಕೊಳ್ಳುವುದಕ್ಕೆ, ಶಾಶ್ವತವಾಗುವುದಕ್ಕೆ, ಕ್ರಿಯೆಯಲ್ಲಿ ಅಚಂಚಲವಾಗುವುದಕ್ಕೆ ಅದು ಆಧ್ಯಾತ್ಮಿಕ ಸಮತೆ, ಸ್ಥಿರತೆ, ಅವ್ಯೈಯಕ್ತಿಕ ಹಾಗೂ ಎಲ್ಲ ಸತ್ತೆಗಳೊಡನೆ ಸ್ವ–ಗುರುತಿಸಿಕೊಳ್ಳುವಿಕೆ, ಎಲ್ಲ ಚೈತನ್ಯಗಳನ್ನು ಅರ್ಥ ಮಾಡಿಕೊಳ್ಳುವಿಕೆ ಇವುಗಳಿಂದ ಮುಂದುವರಿಯಬೇಕು. ವಿಶ್ವದ ಅಸಂಖ್ಯಾತ ಕಾರ್ಯಗತಿಗಳಲ್ಲಿ ಭಗವಂತ ಅಧಿಕಬಲದಿಂದ ಕಾರ್ಯಕೈಕೊಳ್ಳುತ್ತಾನೆ, ಆದರೆ ಆಧಾರ ನೀಡುವ ಪ್ರಕಾಶ ಹಾಗೂ ಅಡೆತಡೆಗೊಳಗಾಗದ ಏಕತೆ, ಸ್ವಾತಂತ್ರ್ಯ ಹಾಗೂ ಶಾಂತಿ ಇವುಗಳಿಂದ ಕಾರ್ಯಕೈಕೊಳ್ಳುತ್ತಾನೆ. ಪರಿಪೂರ್ಣಗೊಂಡ ಆತ್ಮದ ದೈವೀ ಕಾರ್ಯಗಳು ಆ ಮಾದರಿಯವಾಗಿರಬೇಕು. ಕ್ರಿಯೆಯಲ್ಲಿ ಈ ಬಗೆಯ ಮನೋಭಾವ ಸಾಧ್ಯವಾಗುವಂತೆ ಮಾಡಲು ಸತ್ತೆಯಲ್ಲಿ ಸಮತೆ ಷರತ್ತಾಗಿರುತ್ತದೆ.

**(CWSA, 24/700–01)** **– ಶ್ರೀ ಅರವಿಂದರು**

*

**ಸಮತೆ ಮುಕ್ತಿಯದೇ ಕುರುಹಾಗಿರುತ್ತದೆ**

ಆತ್ಮದಲ್ಲಷ್ಟೇ ಇರುವ ಸಮತೆಯಲ್ಲ, ಸ್ವಭಾವದಲ್ಲೂ ಇರುವ ಸಮತೆ ಪರಿಪೂರ್ಣ ಯೋಗದ ಷರತ್ತಾಗಿರುತ್ತದೆ. ನಮ್ಮ ಮನೋವಿಕಾರದ ಹಾಗೂ ಪ್ರಾಣಿಕ ಸತ್ತೆಗಳ ಮೇಲೆ ಜಯಸಾಧಿಸುವುದು ಸ್ಪಷ್ಟವಾಗಿ ಮೊದಲ

ಹೆಜ್ಜೆಯಾಗಿರುತ್ತದೆ. ಏಕೆಂದರೆ ಇಲ್ಲಿ ಅತ್ಯಂತ ದೊಡ್ಡ ತೊಂದರೆ, ಅತ್ಯಂತ ಅಸಮತೆಯ, ಅಧೀನತೆಯ ಅತಿರೇಕದ ಶಕ್ತಿಗಳು ಇರುತ್ತವೆ, ನಮ್ಮ ಅಪರಿಪೂರ್ಣತೆಯ ಮೇಲೆ ಒತ್ತಾಯಪೂರ್ವಕ ಹಕ್ಕನ್ನು ಸಾಧಿಸುತ್ತವೆ. ನಮ್ಮ ಸ್ವಭಾವದ ಈ ಭಾಗಗಳ ಸಮತೆ ಪರಿಶುದ್ಧಗೊಳ್ಳುವುದರಿಂದ, ಸ್ವಾತಂತ್ರ್ಯದಿಂದ ಬರುತ್ತದೆ. ನಾವು ಸಮತೆ ಮುಕ್ತಿಯದೇ ಒಂದು ಕುರುಹು ಎಂದು ಹೇಳಬಹುದು. ಪ್ರಾಣಿಕ ಆಸೆಯ ಪ್ರಾಬಲ್ಯದಿಂದ ಹಾಗೂ ಭಾವೋದ್ರೇಕದ ಬಿರುಗಾಳಿಯಂತಹ ಪ್ರಭುತ್ವದಿಂದ ಮುಕ್ತರಾಗುವುದು. ಸ್ಥಿರ ಹಾಗೂ ಸಮತೆಯಿರುವ ಹೃದಯ, ಅದರ ಮೇಲೆ ಭವ್ಯ ಹಾಗೂ ಸಮನಾದ ವಿಶ್ವಂಭರದ ದೃಷ್ಟಿಕೋನ ಆಳಿಕೆ ನಡೆಸುತ್ತದೆ. ಆಸೆ ಪ್ರಾಣದ, ಜೀವನ ತತ್ವದ ಹಾಗೂ ಅದರ ಸರಣಿ ಬಂಧಕದ ಅಶುದ್ಧತೆ. ಮುಕ್ತಪ್ರಾಣ ಎಂದರೆ ತೃಪ್ತಿ, ಸಮಾಧಾನವಿದ್ದ ಜೀವಾತ್ಮ, ಅದು ಬಾಹ್ಯ ವಿಷಯಗಳನ್ನು ಆಸೆಯಿಲ್ಲದೆ ಎದುರಿಸುತ್ತದೆ. ಅವುಗಳನ್ನು ಸಮತೆ ಇರುವ ಪ್ರತಿಸ್ಪಂದನದಿಂದ ಸ್ವೀಕರಿಸುತ್ತದೆ. ಇಷ್ಟಪಡುವ, ಇಷ್ಟಪಡದೆ ಇರುವ ಗುಲಾಮಗಿರಿಯಿಂದ ಮೇಲಕ್ಕೆತ್ತಲ್ಪಟ್ಟಿರುತ್ತದೆ. ಹರ್ಷ–ನೋವುಗಳ ಪ್ರೇರಣೆಗಳಿಗೆ ಉದಾಸೀನವಾಗಿರುತ್ತದೆ, ಹರ್ಷವಿದ್ದುದರಿಂದ ಉದ್ರೇಕ್ಕೊಳಗಾಗುವುದಿಲ್ಲ. ಹರ್ಷ ನೀಡದಿದ್ದುದರಿಂದ ತೊಂದರೆಗೀಡಾಗುವುದಿಲ್ಲ. ಹೆಚ್ಚಿನ ಬಲಧೀನವಾಗುವುದಿಲ್ಲ, ಅದು ಆದ್ಯತೆ ನೀಡುವ ಸ್ಪರ್ಶಗಳಿಗೆ ಆಸಕ್ತಿಯಿಂದ ಅಂಟಿಕೊಳ್ಳುವುದಿಲ್ಲ, ಅದಕ್ಕೆ ಜುಗುಪ್ಸೆ ತರಿಸುವುದನ್ನು ಹಿಂಸಾತ್ಮಕವಾಗಿ ದೂರದೂಡುವುದಿಲ್ಲ. ಅದು ಅನುಭವದ ಮೌಲ್ಯಗಳ ಶ್ರೇಷ್ಠತರ ಪದ್ಧತಿಗೆ ತೆರೆದುಕೊಂಡಿರುತ್ತದೆ. ಅದರತ್ತ ಜಗತ್ತಿನಿಂದ ಬೆದರಿಕೆ ಇಲ್ಲವೆ ಆತುರ ಹುಟ್ಟಿಸುವುದೆಲ್ಲ ಉಚ್ಚತರ ತತ್ವಗಳತ್ತ ಗಮನ ಸೆಳೆಯುತ್ತದೆ. ಆತ್ಮದ ಸ್ಥಿರ ಸಂತೋಷ ಹಾಗೂ ಪ್ರಕಾಶದಿಂದ ಬದಲಾಗಿ ಇವುಗಳ ತರ್ಕ, ಹೃದಯ ಇವುಗಳ ಸ್ಪರ್ಶದಿಂದ ಬಂದ ತತ್ವಗಳಾಗಿರುತ್ತವೆ. ಹೀಗೆ ಆತ್ಮದಿಂದ ಅಚಂಚಲವಾಗಿರಿಸಿದ, ಪ್ರಭುತ್ವಪಡೆದ, ಅದು ತನ್ನದೇ ಪ್ರಯತ್ನದಿಂದ ನಮ್ಮೊಳಗಿರುವ ಸೂಕ್ಷ್ಮ ಆತ್ಮದ ಮೇಲೆ ಇನ್ನು ಮುಂದೆ ತನ್ನದೇ ಪ್ರಭುತ್ವ ಹೇರದ ಈ ಜೀವಾತ್ಮ ಸ್ವತಃ ಆಧ್ಯಾತ್ಮೀಕರಣ ಹೊಂದುತ್ತದೆ ಮತ್ತು ವಸ್ತು–ವಿಷಯಗಳೊಂದಿಗೆ ಹೆಚ್ಚು ದೈವಿಕವಾದ ವ್ಯವಹಾರಗಳೊಂದಿಗೆ ಸ್ಪಷ್ಟ ಹಾಗೂ ಉದಾರವಾದ ಉಪಕರಣದ ಹಾಗೆ ಕಾರ್ಯಮಾಡುತ್ತದೆ. ಜೀವನದ ಪ್ರಚೋದನೆಯನ್ನು ಹಾಗೂ ಅದರ ಹುಟ್ಟುಗುಣದ ಉಪಯುಕ್ತತೆಗಳನ್ನು

ವೈರಾಗ್ಯದಿಂದ ಹನನ ಮಾಡುವ ಪ್ರಶ್ನೆಯಿರುವುದಿಲ್ಲ, ಹನನ ಮಾಡುವುದನ್ನು ಒತ್ತಾಯದಿಂದ ಬೇಡಲಾಗಿಲ್ಲ, ಆದರೆ ಅದರ ಪರಿವರ್ತನೆಯನ್ನು ಬೇಡಲಾಗಿದೆ.

**(CWSA, 24/702–03)** **– ಶ್ರೀ ಅರವಿಂದರು**

*

## ಸಮತೆಯ ರೀತಿ

ಪ್ರಭುತ್ವವನ್ನಪೇಕ್ಷಿಸುವ ಜೀವನ ಈ ಆಘಾತಗಳಿಗೆ ಅವುಗಳನ್ನೆದುರಿಸುವ ಸಶಕ್ತ, ಸಮ ಸಹನೆಯನ್ನು ತೋರಿಸಬಹುದು ಇಲ್ಲವೆ ಅವುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲೆತ್ನಿಸಬಹುದು. ಇವುಗಳನ್ನು ತಿರಸ್ಕರಿಸುವ ಬದಲು, ಇವುಗಳಿಂದ ಓಡಿಹೋಗುವ ಬದಲು ಇವುಗಳನ್ನು ಧೈರ್ಯದಿಂದ ಎದುರಿಸಿ ಇವುಗಳನ್ನು ಸಹಿಸಲು, ಸತತ ಪ್ರಯತ್ನದಿಂದ ನಾವು ತಾಳಿಕೊಳ್ಳಲು ಕಲಿಯಬಹುದು. ಸಾಧಕನು ತನ್ನಲ್ಲಿ ಬೆಳೆಯುತ್ತಿರುವ ಸಮಭಾವವನ್ನಾಗಲಿ, ಪ್ರಶಾಂತ ಕಠೋರ ಸ್ವೀಕೃತಿಯನ್ನಾಗಲಿ ಉಪಯೋಗಿಸಿಕೊಳ್ಳಬಹುದು.

ಪಕ್ಷಪಾತರಹಿತ ಉದಾಸೀನತೆಯು ಎರಡನೆಯ ರೀತಿಯಾಗಿದೆ. ಇದು ವಸ್ತುಗಳ ಆಕರ್ಷಣೆಯನ್ನಾಗಲಿ, ನಿರಾಕರಣೆಯನ್ನಾಗಲಿ ನಿರಾಕರಿಸುವುದು. ಇದು ಪ್ರದೀಪ್ತ ನಿಷ್ಕ್ರಿಯತೆಯನ್ನು, ನಿಯಂತ್ರಿತ ನಿರಾಕರಣೆಯನ್ನು, ಸಂಬಂಧ ರಾಹಿತ್ಯವನ್ನು ತಂದುಕೊಳ್ಳುವುದು. ಮೊದಲಿನ ರೀತಿಯು ಸಂಕಲ್ಪವನ್ನವಲಂಬಿಸಿದರೆ ಈ ರೀತಿಯು ಜ್ಞಾನವನ್ನವಲಂಬಿಸುವುದು.

ಮೂರನೆಯ ರೀತಿಯು ವಿಧೇಯತೆಯದಾಗಿದೆ. ಇದು ದೇವನ ಸಂಕಲ್ಪಕ್ಕೆ ಬಾಗಿ ನಡೆಯುವುದಾಗಿದೆ. ವಸ್ತುಗಳು, ಘಟನೆಗಳು ಕಾಲದಲ್ಲಿ ರೂಪುಗೊಳ್ಳುವ ವಿಶ್ವಸಂಕಲ್ಪದ ಪ್ರಕಟನೆಗಳೆಂದು ತಿಳಿದು ಬಂದುದೆಲ್ಲವನ್ನೂ ಅಹಂಕಾರವಿಲ್ಲದೆ ಸ್ವೀಕರಿಸುವುದು ಇದಾಗಿದೆ. ವ್ಯಕ್ತಿಯು ಪರಿಪೂರ್ಣವಾಗಿ ತನ್ನನ್ನು ದೇವನಿಗೆ ಅರ್ಪಿಸಿಕೊಳ್ಳುವುದು ಇದಾಗಿದೆ. ಈ ಪ್ರಯತ್ನವನ್ನು ಪರಾಕಾಷ್ಠತೆಯತ್ತ ಒಯ್ದರೆ ಪರಿಪೂರ್ಣ ಸಮತೆಯು ಬರುವುದು. ಮೊದಲನೆಯದು ಸಂಕಲ್ಪದ ರೀತಿಯಾಗಿ–ರುವಂತೆ, ಎರಡನೆಯದು ಜ್ಞಾನದ ರೀತಿಯಾಗಿರುವಂತೆ ಇದು ಹೃದಯದ ರೀತಿಯಾಗಿದ್ದು ಭಕ್ತಿಯೋಗಕ್ಕೆ ಸಂಬಂಧಿಸಿದುದಾಗಿದೆ. ಈಗ ಅಹಂಭಾವದ ಕಗ್ಗಂಟು ಸಡಿಲಾಗುವುದು, ವೈಯಕ್ತಿಕ ಬೇಡಿಕೆಗಳು ಮಾಯವಾಗುವವು. ನಾವೀಗ

ಸುಖ–ದುಃಖ ಯಾತನೆಗೆ ಬಂಧಿತರಾಗಿ ಉಳಿಯುವುದಿಲ್ಲ. ನಾವು ದ್ವಂದ್ವಗಳನ್ನೆಲ್ಲ ಆತುರದ ಸ್ವೀಕೃತಿಯಿಂದಾಗಲಿ, ಉದ್ವಿಗ್ನ ನಿರಾಕರಣೆಯಿಂದಾಗಲಿ ಎದುರಿಸುವುದಿಲ್ಲ. ನಾವು ಎಲ್ಲವನ್ನೂ ನಮ್ಮ ಸತ್ವದ ಪರಮ ಪ್ರಭುವಾದ ಪರಮಾತ್ಮನಿಗೆ ಒಪ್ಪಿಸುವೆವು. ವೈಯಕ್ತಿಕ ಪರಿಣಾಮದ ಗೊಡವೆಯೇ ನಮಗೀಗ ಇರದು. ದೇವನತ್ತ ಸಾಗುವುದೊಂದೇ ನಮ್ಮ ಅಭೀಪ್ಸೆಯಾಗುವುದು. ವಿಶ್ವಾತ್ಮಕ ಹಾಗೂ ಅನಂತ ಅಸ್ತಿತ್ವದಲ್ಲಿ ಸಮರಸರಾಗಲು ನಾವೀಗ ಪ್ರಯತ್ನಿಸುವೆವು. ನಾವು ದೇವನೊಡನೊಂದಾಗಲಪೇಕ್ಷಿಸುವೆವು. ನಾವು ದೇವನ ಮಾಧ್ಯಮರು, ಉಪಕರಣರು, ಸೇವಕರು, ಪ್ರಿಯಕರರು ಆಗಲಪೇಕ್ಷಿಸುವೆವು. ನಾವು ಆತನಲ್ಲಿ, ಆತನೊಡನೆ ಹೊಂದಬಲ್ಲ ಸಂಬಂಧಗಳಲ್ಲಿ ಸಂತೋಷಿಸುವೆವು. ನಮಗೀಗ ಸುಖ–ದುಃಖಗಳ ಕಾರಣಗಳೇ ಇಲ್ಲ.

*

**ಸಂಪೂರ್ಣ ಶರಣಾಗತಿ ಪ್ರಧಾನ ಆಧಾರವಾಗಿರುತ್ತದೆ**

ಈ ಪರಿಪೂರ್ಣ ಸಮತೆಯು ಸಾಧಕನ ಪ್ರಮುಖ ಆಧಾರವಾಗಿರಬೇಕು. ಏಕೆಂದರೆ ಆತನಿಗೆ ಇರುವುದು ಇದೊಂದೇ ಮಾರ್ಗ. ಆತನು ನಿಷ್ಕ್ರಿಯತೆ, ಉದಾಸೀನತೆಗಳಿಗೆಡೆಕೊಡಕೂಡದು. ಈ ಸರ್ವಸಮರ್ಪಣ ಭಾವದಿಂದಲೇ ಪರಮ ಪ್ರಶಾಂತಿಯು ಬರಲು ಸಾಧ್ಯ. ನಮ್ಮಲ್ಲಿ ಅಶಾಂತಿಯು ಮುಂದುವರೆಯುವುದರಿಂದ, ಪರಿಶುದ್ಧಿ, ಪರಿಪೂರ್ಣತೆಗಳಿಗೆ ಬೇಕಾಗುವ ಕಾಲವು ಸುದೀರ್ಘವಾಗುವುದು, ತಾಳ್ಮೆಗೇಡಿತನಕ್ಕೆ, ಉತ್ಸಾಹ ಹೀನತೆಗೆ ಕಾರಣಗಳಾಗಕೂಡದು. ನಮ್ಮ ಪ್ರಕೃತಿಯಲ್ಲಿಯ ಯಾವುದೋ ಒಂದು ಅಂಶವು ಇವುಗಳಿಗೆ ಇನ್ನೂ ಓಗೊಡುತ್ತಿರುವುದರಿಂದಲೇ ಹೀಗಾಗುವುದು. ನಮಗೊದಗಿದ ಅಡ್ಡಿ ಆತಂಕಗಳು ನಮ್ಮ ಲೋಪದೋಷಗಳನ್ನು ನಮ್ಮೆದುರು ಎತ್ತಿ ಹಿಡಿಯುವವು. ಇದರಿಂದ ಸಾಧಕನು ಜಾಗರೂಕನಾಗುವನು. ಇವುಗಳನ್ನು ಹೊಡೆದೋಡಿಸಲು ಆತನು ಇನ್ನೂ ಹೆಚ್ಚು ಪ್ರದೀಪ್ತ, ನಿರಂತರ, ಸಂಕಲ್ಪಾತ್ಮಕ ಕಾರ್ಯವನ್ನು ಕೈಕೊಳ್ಳುವನು. ವಿರೋಧವು ಆತನ ಶಕ್ತಿಗೆ ಮೀರಿದ್ದಾಗಿದ್ದರೆ ಆತನು ಶಾಂತನಾಗಿದ್ದು ಅದು ತಾನೇ ತಾನಾಗಿ ಮಾಯವಾಗುವಂತೆ ನೋಡಿಕೊಳ್ಳಬೇಕು, ಆಧ್ಯಾತ್ಮೀಕೃತ ಬುದ್ಧಿಯ ಹಿರಿದಾದ ಜಾಗರೂಕತೆಯು ಅದರ ಪುನರುಚ್ಚಾರವನ್ನು ತಡೆಯಬೇಕು. ಹೀಗೆ ಹಟ ಹಿಡಿದು ಮುಂದುವರೆಯಲು ಇವು ತಮ್ಮ ಶಕ್ತಿಯನ್ನು ಕಳೆದುಕೊಂಡು ಕೇವಲ ಬಾಹ್ಯ ಸ್ತರದಲ್ಲಷ್ಟೇ ತುಸು ಹೊತ್ತಿನವರೆಗಿದ್ದು

ಮಾಯವಾಗುವವು.

ನಿಸ್ವಾರ್ಥ ಕರ್ಮಯೋಗಿ, ಜ್ಞಾನಯೋಗಿಯ ಜೀವನ ತಾರತಮ್ಯರಹಿತ ಸಮಭಾವವು ದಿವ್ಯ ಪ್ರೇಮದ ಪರಮ ಸ್ಪರ್ಶದ ಜಾದುವಿನಿಂದಾಗಿ ಸರ್ವ–ವನ್ನಾಲಿಂಗಿಸುವ ಪರಮ ಸುಖವಾಗುವುದು. ಅದು ಅನಂತ ದೇಹಧಾರಿಯಾದ ಏಕೈಕನ ಪರಮಾನಂದದಲ್ಲಿ ಪರಿವರ್ತಿತವಾಗುವುದು. ದಿವ್ಯ ಪ್ರೇಯಸಿಯು ತನ್ನ ಅಸೀಮ ಲೀಲಾಸೌಧದಲ್ಲಿರುವಳು. ಎಲ್ಲ ವಸ್ತುಗಳು ಆಕೆಯ ದೇಹಗಳಾಗುವವು. ಎಲ್ಲ ಚಲನೆಗಳು ಆಕೆಯ ರಾಸಕ್ರೀಡೆಗಳೇ ಆಗುವವು. ಈಗ ದುಃಖವೂ ಕೂಡ ಸುಖವಾಗಿ ಪರಿಣಮಿಸುವುದು. ಯಾತನೆಯನ್ನು ತರುವ ಸಂದರ್ಭಗಳು ಸಾರದಲ್ಲಿಯೇ ಬದಲಾಗುವವು. ಈಗ ದುಃಖದಾಯಕವಾದುದೆಂಬುದು ಉಳಿಯುವುದೇ ಇಲ್ಲ. ಎಲ್ಲವೂ ಮೂರ್ತಿಮಂತ ಆನಂದವೇ ಆಗುವುದು.

*

**ಕಲ್ಯಾಣ ಶ್ರದ್ಧಾ: ಹೃದಯದ ನಂಬಿಕೆ ಮತ್ತು ಒಳ್ಳೆಯದರಲ್ಲಿ ನಂಬಿಕೆ**

ಸಮತ್ವವನ್ನು ಹೊಂದಿದ ಹೃದಯವು ಪರಿಪೂರ್ಣತೆಗೆ ಅನಿವಾರ್ಯ. ಆದರೆ ಇದು ನಿಷ್ಕ್ರಿಯ ಸಮತೆಯಾಗಿರಕೂಡದು. ಯಾವಾಗಲೂ ಎಲ್ಲದರ ಒಳಿತಿಗಾಗಿಯೇ ಹೆಣಗುತ್ತಿರುವ ದಿವ್ಯಶಕ್ತಿಯ ಅರಿವಿರಬೇಕು. ಜಗದ ವಿಷವನ್ನು ಅಮೃತವನ್ನಾಗಿ ಪರಿವವರ್ತಿಸುವ ಶ್ರದ್ಧೆ, ಸಂಕಲ್ಪಗಳಿರಬೇಕು. ಗಂಡಾಂತರದ ಹಿಂದಿದ್ದ ಸುಖಮಯ ಆಧ್ಯಾತ್ಮಿಕ ಉದ್ದೇಶವನ್ನರಿಯಬೇಕು. ಯಾತನೆಯ ಹಿಂದಿದ್ದ ರಹಸ್ಯ ಪ್ರೇಮವನ್ನು ಕಾಣಬೇಕು. ದುಃಖದ ಬೀಜದಿಂದಲೇ ದಿವ್ಯಶಕ್ತಿ, ಸುಖಗಳ ಹೂವು ಅರಳುವುದನ್ನು ನೋಡಿ ನಲಿಯಬೇಕು. ಹೃದಯದಲ್ಲಿ ಹಾಗೂ ಬಾಹ್ಯದಲ್ಲಿ ಪ್ರಕಟವಾದ ಚೈತ್ಯಾತ್ಮಕ ಸತ್ವಗಳು ರಹಸ್ಯ ದಿವ್ಯಾನಂದಕ್ಕೆ ಓಗೊಟ್ಟು ತಮ್ಮನ್ನು ಈ ನಿಜ, ಮೂಲಭೂತ ಸಾರದಲ್ಲಿ ಪರಿವರ್ತಿಸಿಕೊಳ್ಳಲು ಈ ಕಲ್ಯಾಣ ಶ್ರದ್ಧೆಯು ಅನಿವಾರ್ಯವಾದುದಾಗಿದೆ. ಈ ಶ್ರದ್ಧೆ, ಸಂಕಲ್ಪಗಳು ಪ್ರೇಮದ ಅಸೀಮ, ಅತಿ ವಿಶಾಲ, ಅತಿ ಪ್ರಖರ ಶಕ್ತಿಯನ್ನು ತಮ್ಮಲ್ಲಿ ತಂದುಕೊಳ್ಳಬೇಕು. ಪ್ರೇಮವೇ ಹೃದಯದ ಪ್ರಮುಖ ಭಾವನೆ. ಅದುವೇ ನಮ್ಮನ್ನು ದೇವನೊಡನೆ ಸಮಗ್ರವಾಗಿ ಒಂದಾಗಿಸುವುದು. ಕೇವಲ ಜ್ಞಾನದಿಂದ ಬಂದ ಐಕ್ಯವು ಸಾಲದು. ಈ ಐಕ್ಯವನ್ನು ನಾವು ನಮ್ಮ ಹೃದಯದಿಂದ, ಚೈತ್ಯಾತ್ಮಕ ಸತ್ವದಿಂದ ಅನುಭವಿಸಬೇಕು. ಇದೆಂದರೆ ಏಕೈಕನಲ್ಲಿ, ಪರಮಾತ್ಮನೊಳಗೇ ಇದ್ದ ಎಲ್ಲ

ವಿಶ್ವಾತ್ಮಕ ಅಸ್ತಿತ್ವಗಳಲ್ಲಿ ಪರಮಾನಂದವನ್ನು ಹೊಂದುವುದಾಗಿದೆ. ಇದು ದೇವನನ್ನು ಎಲ್ಲ ಜೀವಿಗಳಲ್ಲಿ ಪ್ರೀತಿಸುವುದಾಗಿದೆ. ವಿಶ್ವ ಕಲ್ಯಾಣಕ್ಕಾಗಿ ಹೃದಯವು ತಾಳಿದ ಶ್ರದ್ಧೆ, ಸಂಕಲ್ಪಗಳು ದೇವನು ಸರ್ವಾಂತರ್ಯಾಮಿಯಾಗಿದ್ದು, ವಿಶ್ವದ ಮಾರ್ಗದರ್ಶಕನಾಗಿರುವನೆಂಬ ಗ್ರಹಿಕೆಯನ್ನವಲಂಬಿಸಿವೆ.

*

**ಒತ್ತಾಯದಿಂದ ಬೇಡಲಾದ ನಂಬಿಕೆಯ ರೀತಿ**

ನಮ್ಮ ಶ್ರದ್ಧೆಯು ಮೊದಲು ಯೋಗದ ಸಾರಭೂತ ತತ್ವಗಳಲ್ಲಿರಬೇಕು. ಈ ಶ್ರದ್ಧೆಗಾಗಿ ಬುದ್ಧಿಯು ಸಂಶಯಪಡಬಹುದು, ಹೃದಯವು ಉದಾಸೀನ–ವಾಗಿರಬಹುದು, ನಿರಂತರವಾಗಿ ಒದಗಿಬರುವ ನಿರಾಕರಣೆ, ಸೋಲುಗಳಿಂದಾಗಿ ಪ್ರಾಣಮನದಾಶೆಯು ಇದನ್ನು ಒಪ್ಪದಿರಬಹುದು, ಆದರೂ ಆತ್ಮನಾಳದಲ್ಲಿಯ ಯಾವುದೋ ಒಂದಂಶವು ಈ ಶ್ರದ್ಧೆಗೆ ಅಂಟಿಕೊಂಡಿರಬೇಕು. ತಾತ್ಕಾಲಿಕ, ಕ್ಷಣಿಕ ಸಂದರ್ಭಗಳು ಈ ಅಂಶದಲ್ಲಿಯ ಶ್ರದ್ಧೆಯನ್ನು ಅಳಿಸಿದಂತೆ ತೋರಬಹುದು. ಏನಾದರೂ ಈ ಅಂಶವು ತಾನು ಹೊಂದಿದ ಶ್ರದ್ಧೆಯತ್ತ ಮರಳಲೇಬೇಕು. ಇಲ್ಲದಿದ್ದರೆ ನಾವು ಮಾರ್ಗದಲ್ಲಿ ಕೆಳಗೆ ಬಿದ್ದುಬಿಡಬಹುದು, ತಾತ್ಕಾಲಿಕ ಸೋಲು, ನಿರಾಶೆ, ಕಠಿಣತೆಗಳನ್ನು ಎದುರಿಸುವ ಸಾಮರ್ಥ್ಯವಿಲ್ಲದೆ ಈ ಶ್ರದ್ಧೆಯನ್ನು ಬಿಟ್ಟುಬಿಡಬಹುದು. ಜೀವನದಲ್ಲಿಯಂತೆಯೇ ಯೋಗದಲ್ಲಿಯೂ ಕೂಡ ಯಾವುದೇ ಗಂಡಾಂತರ ಇಲ್ಲವೆ ಭ್ರಮ ನಿರಸನದಿಂದ ಬಾಗದೆ ಕೊನೆಯವರೆಗೂ ಬಾಳಿ ಬದುಕುವವನೇ ವಿಜಯಿಯಾಗುವನು. ಆಧ್ಯಾತ್ಮಿಕ ಸಾಧ್ಯತೆಗಳನ್ನಲ್ಲಗಳೆವ, ನಿರಾಶೆ ಹೊಂದಿದ ಸಂಶಯ ಇಲ್ಲವೆ ತುಚ್ಛ ಅಸೃಜನಾತ್ಮಕ ಬುದ್ಧಿಯ ಅಸೂಯೆ ಇವುಗಳಿಗಿಂತಲೂ ಅಂಥ ಶ್ರದ್ಧೆಯೇ ಮೇಲು, ಈ ಸಂಶಯ ಹಾಗೂ ಅಸೂಯೆಗಳು ಧೃತಿಗೆಡಿಸುವ ಅಸೂಯೆಯಿಂದೊಡಗೂಡಿ ನಮ್ಮ ಪ್ರಯತ್ನವನ್ನು ಹಿಂಬಾಲಿಸುವವು.

*

**ದೈವೀ ಶಕ್ತಿಯಲ್ಲಿ ನಂಬಿಕೆ ಹಾಗೂ ಅವಳ ಕಾರ್ಯಗತಿಗಳು**

ಪರಾಶಕ್ತಿಯು ತನ್ನ ಕಾರ್ಯಾಚರಣೆಯಿಂದ ಅಜ್ಞಾನದ, ಕುರುಡುತನದ ಎಲ್ಲ ರೂಪಗಳನ್ನು, ತನ್ನಲ್ಲಿ ಮೂಢ ನಂಬಿಕೆಯಿಂದ ತಪ್ಪಾಗಿ ವಿಶ್ವಸ್ಥವಾಗಿರುವು–

ದೆಲ್ಲವನ್ನು ನಿಷ್ಕರುಣೆಯಿಂದ ಹೊಡೆದುಹಾಕುವಳು. ಆದುದರಿಂದ ನಾವು ನಮ್ಮ ಶ್ರದ್ಧೆಯ ಬಾಹ್ಯ ಸ್ವರೂಪಗಳಿಗೆ ಅತಿಯಾಗಿ ಅಂಟಿಕೊಳ್ಳಕೂಡದು. ನಮ್ಮನ್ನು ಸದಾ ರಕ್ಷಿಸುತ್ತಿರುವ ಸತ್ಯದಲ್ಲಿಯೇ ಶ್ರದ್ಧೆಯುಳ್ಳವರು ನಾವಾಗಿರಬೇಕು. ಹಿರಿದಾದ ಸಾಧ್ಯತೆಗಳಿಗೆ ಒಪ್ಪಿಗೆಯನ್ನೀಯುವ ಹಿರಿದಾದ ಬುದ್ಧಿಯಿಂದೊಡಗೂಡಿದ ಉಚ್ಚ, ವಿಶಾಲ, ಸುಜ್ಞ ಆಧ್ಯಾತ್ಮಿಕ ಶ್ರದ್ಧೆಯೇ ನಮ್ಮದಾಗಿರಬೇಕು.

ಈ ಶ್ರದ್ಧೆಯು ನಿಜವಾಗಿ ಪರಾತ್ಪರ ಪರಮ ಪುರುಷೋತ್ತಮನು ನಮ್ಮ ಮೇಲೆ ಬೀರಿದ ಪ್ರಭಾವವೇ ಆಗಿರುವುದು. ಈ ಶ್ರದ್ಧೆಯ ಜ್ಯೋತಿಯು ನಮ್ಮ ಅತಿಮಾನಸ ಸತ್ವದಿಂದ ಬಂದ ಸಂದೇಶವಾಗಿದೆ. ಈ ಸಂದೇಶವು ನಮ್ಮ ನಿಮ್ನ ಪ್ರಕೃತಿಯು ತನ್ನ ಸದ್ಯದ ತುಚ್ಛ ಸ್ಥಿತಿಯನ್ನು ಬಿಟ್ಟು ಹಿರಿದಾದ ಆತ್ಮ ಪ್ರಕಟನೆ, ಆತ್ಮಾತೀತತೆಗಳತ್ತ ಸಾಗುವಂತೆ ಅದನ್ನು ಪ್ರೇರೇಪಿಸುವುದು. ಈ ಪ್ರಭಾವವನ್ನು ಸ್ವೀಕರಿಸಿ ಈ ಕರೆಗೆ ಓಗೊಡುವುದು ನಮ್ಮ ಬುದ್ಧಿಯಲ್ಲ, ನಮ್ಮ ಹೃದಯವಲ್ಲ, ನಮ್ಮ ಪ್ರಾಣಮನವಲ್ಲ. ತನ್ನ ಕಾರ್ಯ ಹಾಗೂ ತಾನು ದೊರಕಿಸಿಕೊಳ್ಳಬೇಕಾದ ಪರಮ ಸಿದ್ಧಿಗಳ ಅರಿವುಳ್ಳ ಆಂತರಿಕ ಆತ್ಮವೇ ಈ ಕರೆಗೆ ಓಗೊಡುವುದು. ಈ ಮಾರ್ಗದಲ್ಲಿ ನಮ್ಮಿಂದ ಪ್ರಾರಂಭದ ಹೆಜ್ಜೆಯನ್ನಿಡಿಸಿದ ಘಟನೆಯು ನಮ್ಮೊಳಗೆ ಕಾರ್ಯಗೈಯುತ್ತಿರುವ ಅಂಶದ ನಿಜವಾದ ಸೂಚಕ ಸಂಗತಿಯಾಗಿರುವುದಿಲ್ಲ. ಇಲ್ಲಿ ಬುದ್ಧಿಯಾಗಲಿ, ಹೃದಯವಾಗಲಿ, ಪ್ರಾಣದ ಆಸೆಯಾಗಲಿ ಮಹತ್ವದ ಪಾತ್ರವನ್ನು ವಹಿಸಿರಬಹುದು. ನಾವು ಆಕಸ್ಮಿಕವಾಗಿಯೇ ಈ ಮಾರ್ಗವನ್ನನು–ಸರಿಸಲು ಒಪ್ಪಿಗೆಯನ್ನಿತ್ತಿರಬಹುದು. ಬಾಹ್ಯ ಪ್ರೇರಣೆಗಳ ಪಾತ್ರವಿಲ್ಲಿರಬಹುದು. ಆದರೆ ಇದಿಷ್ಟೇ ಆಗಿದ್ದರೆ ನಮ್ಮ ಓಗೊಡುವಿಕೆಯು ನಿಜವಾಗಿಯೂ ಪ್ರಾಮಾಣಿಕವಾಗಿರುವುದೆಂದು ಹೇಳಲಿಕ್ಕಾಗದು. ನಾವು ಸತತವಾಗಿ ಯೋಗ ಮಾರ್ಗದಲ್ಲಿ ಮುನ್ನಡೆದೇ ತೀರುತ್ತೇವೆಂದು ಹೇಳಲಿಕ್ಕಾಗದು. ಬುದ್ಧಿಯು ತನ್ನನ್ನಾಕರ್ಷಿಸಿದ ಕಲ್ಪನೆಯನ್ನು ತ್ಯಜಿಸಬಹುದು. ಹೃದಯವು ಮಾರ್ಗದಲ್ಲಿ ದಣಿದು ನಮ್ಮ ಕೈಬಿಡಬಹುದು. ಪ್ರಾಣಮನದಾಶೆಗಳು ಬೇರೆ ವಸ್ತುಗಳನ್ನು ಬಯಸತೊಡಗಬಹುದು. ಆದರೆ ಬಾಹ್ಯ ಘಟನೆಗಳು ಆತ್ಮನ ನಿಜ ಕಾರ್ಯಾಚರಣೆಯ ಆವರಣಗಳಾಗಿರುವವು. ಆತ್ಮವು ಸ್ಪರ್ಶಿಸಲ್ಪಟ್ಟಿದ್ದರೆ, ಆಂತರಿಕ ಜೀವನ ಕರೆಯನ್ನು ಕೇಳಿದ್ದರೆ ಶ್ರದ್ಧೆಯು ಸುದೃಢವಾಗಿ ಉಳಿದೇ ತೀರುವುದು. ಯಾವ ಆಘಾತವಾಗಲಿ, ಸೋಲಾಗಲಿ ಈ ಶ್ರದ್ಧೆಯನ್ನು ಕದಡದು.

*

## ದೈವೀ ಶಕ್ತಿಯ ಕಾರ್ಯಗತಿಗಳು ನಮ್ಮನ್ನು ಕಂಗೆಡಿಸಬಾರದು

ಸದ್ಯ ನಮ್ಮೊಳಗಿರುವ ಅಜ್ಞಾನದ, ನಿಮ್ನ ಪ್ರಕೃತಿಯ ಶಕ್ತಿಗಳು ಹಾಗೂ ಇವುಗಳನ್ನು ಹೊರಹಾಕಿ ಇವುಗಳ ಸ್ಥಾನವನ್ನಲಂಕರಿಸಲಿರುವ ಶಕ್ತಿಗಳ ನಡುವೆ ಕಾಳಗವೇ ಹೂಡಲ್ಪಡುವುದು. ಸಾದಕನು ಈ ಕಾಳಗದಲ್ಲಿ ವಿಜಯಶಾಲಿ–ಯಾಗಲೇಬೇಕು. ಇದೂ ಅಲ್ಲದೆ ಮಾರ್ಗದಲ್ಲಿ ಬರುವ ಆಧ್ಯಾತ್ಮಿಕ ಅನುಭವಗಳು, ವಿಚಾರ ಹಾಗೂ ಭಾವನೆಗಳ ಸ್ಥಾಯಿಗಳು, ಸಹಾಯಕ ಸಾಕ್ಷಾತ್ಕಾರಗಳ ಸ್ವರೂಪಗಳು ತಾತ್ಕಾಲಿಕವಾಗಿ ಪರಾತ್ಪರ ಅಂಶಗಳೆಂದೇ ತೋರುವವು. ಆದರೆ ಸದ್ಯ ಇವೆಲ್ಲವುಗಳನ್ನು ಸ್ವೀಕರಿಸಿಕೊಂಡು ಕೂಡ ಮುನ್ನಡೆದ ನಂತರ ನಮಗೆ ಇವೆಲ್ಲವುಗಳನ್ನೂ ಬಿಡಲೇಬೇಕಾಗಿ ಬರುವುದು. ಇವು ನಾವು ನಮ್ಮ ಮಹಾಪರಿವರ್ತನೆಯ ಮಾರ್ಗದಲ್ಲಿ ದಾಟಬೇಕಾದ ಮೆಟ್ಟಿಲುಗಳಾಗಿರುವವು. ಇವೆಲ್ಲವುಗಳನ್ನು ದಾಟಿ ನಾವು ಮುನ್ನಡೆಯಲೇಬೇಕು. ಇವುಗಳಲ್ಲಿ ನಾವಿಟ್ಟ ಶ್ರದ್ಧೆಯು ಬದಲಾಗಲೇಬೇಕು. ಇನ್ನೂ ಹಿರಿದಾದ, ವ್ಯಾಪಕವಾದವುಗಳಾದ ಸಮಗ್ರವಾದವುಗಳಾದ ಅನುಭವ ಹಾಗೂ ಸಾಕ್ಷಾತ್ಕಾರಗಳಲ್ಲಿ ನಾವು ನಮ್ಮ ಶ್ರದ್ಧೆಯನ್ನಿಡಬೇಕಾಗುವುದು. ನಮ್ಮ ಹಿಂದಿನ ಶ್ರದ್ಧೆಯು ಈ ಹೊಸ ಶ್ರದ್ಧೆಯಲ್ಲಿ ರೂಪಾಂತರಗೊಳ್ಳುವುದು. ಪೂರ್ಣಯೋಗ ಸಾಧಕನಿಗೆ ಮಧ್ಯಂತರದಲ್ಲಿ ವಿಶ್ರಾಂತಿ ಧಾಮಗಳೆಂಬುವು ಇಲ್ಲವೇ ಇಲ್ಲ. ಆತನು ದಣಿದು ಮಾರ್ಗದಲ್ಲಿ ಎಲ್ಲಿಯೂ ತಂಗಕೂಡದು. ತಾನು ತನ್ನ ಪರಿಪೂರ್ಣತೆಯ ವಿಶಾಲ ತಳಪಾಯವನ್ನು ಹಾಕಿಕೊಳ್ಳುವವರೆಗೆ, ಈ ಪರಿಪೂರ್ಣತೆಯ ಅಸೀಮ ಅನಂತತೆಗಳನ್ನು ಭೇದಿಸುವವರೆಗೆ ಆತನಿಗೆ ತೃಪ್ತಿಯೆಂಬುದಿರಕೂಡದು. ಅಲ್ಲಿಯೂ ಕೂಡ ಆತನು ಅನಂತನ ಅನಂತ ಅನುಭವಗಳಿಂದ ತುಂಬಿಕೊಳ್ಳುತ್ತಲೇ ಇರಬೇಕು. ಮೆಟ್ಟಿಲಿನಿಂದ ಮೆಟ್ಟಿಲಿಗೆ ಆತನ ಆರೋಹಣವಿರುವುದು. ಆತನೇರಿದ ಶಿಖರವು ಆತನಿಗೆ ತಾನು ಇನ್ನೂ ಏರಬೇಕಾಗಿರುವ ಉನ್ನತ ಶಿಖರಗಳ ದರ್ಶನವನ್ನು ಮಾಡಿಸುವುದು. ಆತನು ಸಾಧಿಸಿಕೊಳ್ಳಬೇಕಾದುದು ಎಂದಿಗೂ ಮುಗಿಯುವುದಿಲ್ಲ. ಆತನ ಎಲ್ಲ ಪ್ರಯತ್ನಗಳು ಕೊನೆಯಲ್ಲಿ ಆದಿಶಕ್ತಿಯ ಜವಾಬ್ದಾರಿಯೇ ಆಗುವ ತನಕ ಆತನು ಆಕೆಯ ಪ್ರದೀಪ್ತ ಕಾರ್ಯಾಚರಣೆಗೆ ಒಪ್ಪಿಗೆಯನ್ನು ಕೊಟ್ಟು ಅದರಲ್ಲಿ ಪಾಲ್ಗೊಳ್ಳುತ್ತಲೇ ಇರಬೇಕು. ಬುದ್ಧಿ, ಭಾವನೆಗಳು ಯಾವಾಗಲೂ ಯಾವುದೋ ಒಂದನ್ನು ಖಚಿತವಾದುದೆಂದು ಅವಸರದಿಂದ

ಅಪ್ಪಿಕೊಳ್ಳುವವು. ಅವು ಸಾಕಷ್ಟು ಆಧಾರವಿಲ್ಲದೆಯೇ ಎಲ್ಲವನ್ನೂ ನಿಜವೆಂದೇ ನಂಬುವವು. ಪರಾಶಕ್ತಿಯಲ್ಲಿ ಸಾಧಕನಿಟ್ಟ ಶ್ರದ್ಧೆಯೇ ಆತನನ್ನು ಇದೆಲ್ಲದರ ಮೂಲಕ ಮುಂದೊಯ್ಯುವುದು. ಈ ಶಕ್ತಿಯನ್ನು ಪರಿಣಾಮಕಾರಿಯಾಗಿ ವಿರೋಧಿಸಬಲ್ಲದಾವುದಿರುವುದು? ಸಾಧಕನು ತನ್ನ ಪರಮ ಪ್ರಭುವಿನ ಮಾರ್ಗದರ್ಶನದಲ್ಲಿ ಶ್ರದ್ಧೆಯುಳ್ಳವನಾಗಿರಬೇಕು. ಸರ್ವಜ್ಞನಾದ ಆತನು ಅಜ್ಞರಾದ ನಮ್ಮಂತೆ ಅವಸರಪಡುವುದಿಲ್ಲ. ಮನಸ್ಸಿನ ಎಲ್ಲ ಗೊಂದಲಗಳ ಮೂಲಕ ಆತನು ಧೈರ್ಯದಿಂದಲೇ ಮುನ್ನುಗ್ಗುವನು. ಆತನು ನಮ್ಮ ಪ್ರಕೃತಿಯ ಅಗತ್ಯತೆಗಳನ್ನರಿತವನಾಗಿರುವನು.

*

## ದೈವೀ ಶಕ್ತಿಯ ದೈವೀ ಸಾಮರ್ಥ್ಯ ಮಿತಿರಹಿತವಾದದ್ದು

ಸದ್ಯದ ಅತಿ ಭಾರವಾದ ಅಸಾಧ್ಯತೆಯೂ ಕೂಡ ನಮ್ಮ ಶ್ರದ್ಧೆಯ ಪರೀಕ್ಷೆಯೇ ಆಗಿದೆ. ಇದು ತಾತ್ಕಾಲಿಕವಾದುದಾಗಿರುವುದು. ತನ್ನ ಅಶಕ್ತತೆಯನ್ನೇ ನಂಬಿಕೊಂಡು ಕೂಡುವುದು ಪೂರ್ಣಯೋಗ ಸಾಧಕನಲ್ಲಿ ಹುಚ್ಚುತನದ ಮಾತಾಗುವುದು. ಆತನು ತನ್ನೊಳಗೇ ಸದ್ಯ ಸುಪ್ತವಾಗಿದ್ದ ಪರಿಪೂರ್ಣತೆಯನ್ನು ತನ್ನಲ್ಲಿ ಪ್ರಕಟಿಸಿಕೊಳ್ಳಲೆತ್ನಿಸುತ್ತಿರುವವನಾಗಿರಬೆಕು. ದಿವ್ಯ ಜೀವನದ ಬೀಜವು ಮಾನವನೊಳಗೇ ಮೊಳಕೆಯೊಡೆಯಲು ಕಾಯುತ್ತಿರುವುದು. ಆತನ ಪ್ರಯತ್ನ–ದೊಳಗೆ ವಿಜಯವಡಗಿರುವುದು. ಆತನ ಸಾಧನೆಯ ಹಿಂದೆ ಸರ್ವಸಮರ್ಥ ಶಕ್ತಿಯ ಕರೆ ಹಾಗೂ ಮಾರ್ಗದರ್ಶನಗಳಿರುವವು. ಆದರೆ ಈ ಆತ್ಮವಿಶ್ವಾಸದಲ್ಲಿ ರಾಜಸಿಕ ಅಹಂಭಾವವಾಗಲಿ, ಆಧ್ಯಾತ್ಮಿಕ ಗರ್ವವಾಗಲಿ ಇರಕೂಡದು. ಸಾಧಕನ ಶಕ್ತಿಯು ಆತನ ವೈಯಕ್ತಿಕ ಶಕ್ತಿಯಾಗಿರುವುದಿಲ್ಲ. ಆತನ ಈ ಶಕ್ತಿಯಲ್ಲಿ ಅಹಂಭಾವವಿರಕೂಡದು. ಜಗದಲ್ಲಿದ್ದುದು ಒಂದೇ ಒಂದು ಶಕ್ತಿ. ಅದು ಪರಾಶಕ್ತಿಯ ಏಕೈಕ ಶಕ್ತಿಯೇ ಆಗಿರುವುದು. ಈ ಶಕ್ತಿಯನ್ನು ಉಪಯೋಗಿಸುವಲ್ಲಿ ಅಹಂಭಾವವನ್ನು ತಾಳಿದ ಸಾಧಕನಲ್ಲಿ ಪ್ರಾಕೃತಿಕ ಪ್ರಗತಿಯು ಸೀಮಿತತೆಯಿಂದಾಗಿ ಕುಂಠಿತವಾಗುವುದು. ನಮ್ಮ ಅಭೀಪ್ಸೆಯ ಹಿಂದಿದ್ದ ದಿವ್ಯ ವಿಶ್ವಾತ್ಮಕ ಶಕ್ತಿಯ ಸಾಮರ್ಥ್ಯವು ಅಸೀಮವಾದುದಾಗಿದೆ. ಅದನ್ನು ಸರಿಯಾಗಿ ಆಹ್ವಾನಿಸಿದವರಲ್ಲಿ ಅದು ತನ್ನನ್ನು ಸುರುವಿಕೊಳ್ಳುವುದು. ಈಗ ಸಾಧಕನಲ್ಲಿಯ ಅಸಾಮರ್ಥ್ಯ

ಹಾಗೂ ವಿರೋಧಗಳು ಮಾಯವಾಗುವವು. ಪರಮ ಸಿದ್ಧಿಗೆ ಬೇಕಾದ ಕಾಲಾವಧಿಯು ಮೊದಲು ಆಂಶಿಕವಾಗಿ ನಮ್ಮ ಶ್ರದ್ಧೆ, ಪ್ರಯತ್ನಗಳ ಉಪಕರಣ ಭಾವವನ್ನವಲಂಬಿಸುವುದು. ಆದರೆ ಕೊನೆಯಲ್ಲಿ ನಿಜವಾಗಿಯೂ ಈ ಕಾಲಾವಧಿಯು ಯೋಗೇಶ್ವರನಾದ, ಈಶ್ವರನಾದ ಏಕೈಕ ರಹಸ್ಯ ಪರಬ್ರಹ್ಮನ ಸರ್ವಜ್ಞ ನಿರ್ಧಾರವನ್ನೇ ಅವಲಂಬಿಸಿದುದಾಗುವುದು.

*

## ದೈವೀ ಮಾತೆ ಹಾಗೂ ಅವಳ ನಾಲ್ಕು ಮುಖಗಳು

ದಿವ್ಯ ಪರಾಶಕ್ತಿಯಲ್ಲಿ ನಾವಿಟ್ಟ ಶ್ರದ್ಧೆಯು ಯಾವಾಗಲೂ ನಮ್ಮ ಪ್ರಯತ್ನದ ಹಿನ್ನೆಲೆಯಲ್ಲಿರಬೇಕು. ಪರಾಶಕ್ತಿಯ ಸಾಕ್ಷಾತ್ಕಾರವಾಗಲು ಈ ಶ್ರದ್ಧೆಯು ಸಹಜವೂ, ಪರಿಪೂರ್ಣವೂ ಆಗುವುದು. ಆದಿಯಿಂದಲೂ ಸೃಷ್ಟಿಕರ್ತೃ ಸ್ವರೂಪವನ್ನು ತಾಳಿದ, ಪರಮಾತ್ಮದ ಸರ್ವಸಮರ್ಥತೆಯ ಆಯುಧವನ್ನು ಹಿಡಿದ, ವಿಶ್ವಾತ್ಮ ಸ್ವರೂಪಳಾದ, ಪರಬ್ರಹ್ಮನ ಸಪ್ರಜ್ಞ ಶಕ್ತಿಯಾದ ಪರಾಶಕ್ತಿಗೆ ಅಸಾಧ್ಯವಾದು–ದೆಂಬುದೇ ಇಲ್ಲ. ಎಲ್ಲ ಜ್ಞಾನ, ಎಲ್ಲ ಸಾಮರ್ಥ್ಯ, ಎಲ್ಲ ವಿಜಯ, ಎಲ್ಲ ಕೌಶಲ್ಯ, ಎಲ್ಲ ಕ್ರಿಯಾಶೀಲತೆಗಳು ಆಕೆಯಲ್ಲಡಗಿರುವವು. ಇವು ಪರಮಾತ್ಮನ ಎಲ್ಲ ಪರಿಪೂರ್ಣತೆಗಳಿಂದ, ಸಿದ್ಧಿಗಳಿಂದ, ಸಮೃದ್ಧಿಗಳಿಂದ ತಮ್ಮನ್ನು ತುಂಬಿಕೊಂಡಿರುವವು. ಈಕೆಯು ಪರಾತ್ಪರ ಜ್ಞಾನದ ದೇವಿಯಾದ ಮಹೇಶ್ವರಿಯಾಗಿರುವಳು. ಈಕೆಯು ನಮಗಾಗಿ ಎಲ್ಲ ದಿವ್ಯ ದರ್ಶನಗಳನ್ನು, ಸತ್ಯದ ವೈಶಾಲ್ಯಗಳನ್ನು, ಆಧ್ಯಾತ್ಮಿಕ ಸಂಕಲ್ಪದ ಖಚಿತತೆಗಳನ್ನು, ತನ್ನ ಅತಿಮಾನಸ ವೈಶಾಲ್ಯದ ಪ್ರಶಾಂತಿ ಹಾಗೂ ತೀವ್ರತೆಗಳನ್ನು, ಪ್ರದೀಪ್ತಿಯ ತನ್ನ ಪರಮಾನಂದವನ್ನು ತರುವಳು. ಈಕೆಯು ಪರಾತ್ಪರ ಸಾಮರ್ಥ್ಯದ ದೇವಿಯಾದ ಮಹಾಕಾಳಿಯಾಗಿರುವಳು. ಈಕೆಯಲ್ಲಿ ಎಲ್ಲ ಸಾಮರ್ಥ್ಯಗಳು ಅಡಗಿರುವವು: ಆಧ್ಯಾತ್ಮಿಕ ಶಕ್ತಿ, ಅತಿ ಕಠೋರ ತಪಶ್ಚರ್ಯ, ರಣಾಂಗಣದತ್ತದ ಧಾವಿಸುವಿಕೆ, ವಿಜಯ, ಅಟ್ಟಹಾಸಗಳು ಇವಳವಾಗಿರುವವು. ಈಕೆಯು ಸೋಲನ್ನು, ಮರಣವನ್ನು, ಅಜ್ಞಾನದ ಶಕ್ತಿಗಳನ್ನು ಲೆಕ್ಕಿಸುವುದೇ ಇಲ್ಲ. ಈಕೆಯು ಪರಾತ್ಪರ ಪ್ರೇಮ, ಆನಂದಗಳ ದೇವಿಯಾದ ಮಹಾಲಕ್ಷ್ಮಿಯಾಗಿರುವಳು. ಆತ್ಮದ ಪ್ರಸನ್ನತೆ, ಆನಂದದ ಒನಪು, ಒಯ್ಯಾರ ಹಾಗೂ ಸೌಂದರ್ಯಗಳು, ರಕ್ಷಣೆ, ಇಹಪರಗಳೆರಡರಲ್ಲಿಯ ಎಲ್ಲ ಕಾಣಿಕೆಗಳು ಇವಳವಾಗಿರುವವು. ಪರಮಾತ್ಮನ

ಕಾರ್ಯಗಳು ಹಾಗೂ ಎಲ್ಲ ಕೌಶಲ್ಯಗಳ ದೇವತೆಯಾದ ಮಹಾಸರಸ್ವತಿಯು ಈಕೆಯಾಗಿರುವಳು. ಕರ್ಮಗಳಲ್ಲಿಯ ಕೌಶಲ್ಯವೇ ಈಕೆಯ ಯೋಗವಾಗಿರುವುದು. ದಿವ್ಯ ಜ್ಞಾನದ ಎಲ್ಲ ಉಪಯುಕ್ತತೆಗಳು, ಜೀವನದಲ್ಲಿ ತೊಡಗಿದ ಪರಮಾತ್ಮನ ಆತ್ಮಮಗ್ನತೆಯು ಇವೆಲ್ಲವುಗಳ ಸಾಮರಸ್ಯದ ಸುಖಗಳು ಈಕೆಯವಾಗಿರುವವು. ತನ್ನೆಲ್ಲ ಸ್ವರೂಪಗಳಲ್ಲಿ, ಶಕ್ತಿಗಳಲ್ಲಿ ಈಕೆಯು ಸನಾತನ ಈಶ್ವರಿಯ ಪ್ರಭುತ್ವಗಳ ಪರಮ ಭಾವವನ್ನು ತಾಳಿರುವಳು. ಉಪಕರಣಗಳಿಂದ ಅಪೇಕ್ಷಿಸಲ್ಪಡುತ್ತಿರುವ ಎಲ್ಲ ಕಾರ್ಯಗಳ ದಿವ್ಯ, ಧೃತಿ ಸಾಮರ್ಥ್ಯವು, ಐಕ್ಯಭಾವವು ಪಾಲ್ಗೊಳ್ಳುತ್ತಿರುವ ಅನುಕಂಪವು, ಸ್ವತಂತ್ರ ತಾದಾತ್ಮ್ಯವು ಇವಳದಾಗಿರುವವು. ಇವಳು ಎಲ್ಲ ಜೀವಿಗಳಲ್ಲಿ, ಎಲ್ಲ ಶಕ್ತಿಗಳಲ್ಲಿ ತಾದಾತ್ಮ್ಯವನ್ನು ಹೊಂದಿದವಳಾಗಿರುವಳು. ಆದುದರಿಂದ ವಿಶ್ವದಲ್ಲಿಯ ದಿವ್ಯ ಸಂಕಲ್ಪದೊಡನೆ ಸಹಜ, ಫಲಕಾರಿ ಸಾಮರಸ್ಯವನ್ನು ಹೊಂದಿದವಳು ಇವಳಾಗಿರುವಳು. ಇವಳ ಸನ್ನಿಧಾನ, ಶಕ್ತಿಗಳ ಅತಿ ನಿಕಟ ಅನುಭವ ಹಾಗೂ ನಮ್ಮ ಸತ್ವವು ತನ್ನಲ್ಲಿ, ತನ್ನ ಸುತ್ತಲೂ ಸಾಗುತ್ತಿರುವ ಪರಾಶಕ್ತಿಯ ಕಾರ್ಯಗಳಿಗೆ ಕೊಡುವ ಸಂತೃಪ್ತ ಒಪ್ಪಿಗೆ ಇವು ಪರಾಶಕ್ತಿಯಲ್ಲಿ ನಾವು ತಾಳಬಹುದಾದ ಪರಮ ಶ್ರದ್ಧೆಯ ಕೊನೆಯ ಪರಿಪೂರ್ಣತೆಯಾಗಿದೆ.

ಪೂರ್ಣಯೋಗ ಸಾಧಕನು ಪರಮ ಪುರುಷನಲ್ಲಿ ಹಾಗೂ ಪರಾಶಕ್ತಿಯಲ್ಲಿ ಶ್ರದ್ಧೆಯುಳ್ಳವನಾಗಿರಬೇಕು, ತನ್ನೊಳಗೆ, ಜಗದೊಳಗೆ ಪರಾಶಕ್ತಿಯ ಸನ್ನಿಧಾನ ಹಾಗೂ ಸಾಮರ್ಥ್ಯಗಳಿರುವವೆಂಬುದರಲ್ಲಿ ಶ್ರದ್ಧೆಯುಳ್ಳವನಾಗಿರಬೇಕು; ಜಗದೊಳಗಿನ ಎಲ್ಲ ಚಲನೆಗಳು ಪರಾಶಕ್ತಿಯ ಕಾರ್ಯಗಳೇ ಆಗಿರುವವೆಂಬುದರಲ್ಲಿ ಶ್ರದ್ಧೆಯುಳ್ಳವನಾಗಿರಬೇಕು; ಯೋಗದ ಮುನ್ನಡೆಯು, ಪ್ರಯತ್ನಗಳು, ಯಾತನೆಗಳು, ಸೋಲುಗಳು, ಗೆಲುವುಗಳು, ತೃಪ್ತಿಗಳು, ಪರಾಶಕ್ತಿಯ ಕಾರ್ಯಾಚರಣೆಯ ಅಗತ್ಯಗಳೇ ಆಗಿರುವವೆಂಬುದರಲ್ಲಿ ಶ್ರದ್ಧೆಯುಳ್ಳವನಾಗಿರಬೇಕು; ತನ್ನೊಳಗಿನ ಪರಮ ಪುರುಷ, ಪರಾಶಕ್ತಿಯರನ್ನೇ ಪೂರ್ಣವಾಗಿ ಅವಲಂಬಿಸಿ ಅವರಿಗೆ ಪರಿಪೂರ್ಣ ಆತ್ಮ ಸಮರ್ಪಣೆಯನ್ನು ಮಾಡಿಕೊಳ್ಳುವುದರಿಂದಲೇ ಐಕ್ಯ, ಸ್ವಾತಂತ್ರ್ಯ, ವಿಜಯ ಹಾಗೂ ಪರಿಪೂರ್ಣತೆಗಳು ದೊರಕಲೇಬೇಕೆಂಬುದರಲ್ಲಿ ಶ್ರದ್ಧೆಯುಳ್ಳವನಾಗಿರಬೇಕು.

*

# ಶ್ರೀಮಾತೆಯವರ ನುಡಿಗಳು

## ಭಗವಂತನನ್ನು ಕುರಿತು ಒಂದು ಸಮಗ್ರ ವಿಚಾರ

"ನಾವು ಸಮಗ್ರ ಯೋಗವನ್ನು ಆಚರಿಸಲು ಪ್ರಯತ್ನಿಸಿದರೆ ಭಗವಂತನನ್ನು ಕುರಿತು ತಾನೇ ಸಮಗ್ರವಾಗಿರುವ ವಿಚಾರದೊಂದಿಗೆ ಪ್ರಾರಂಭಿಸುವುದು ಒಳ್ಳೆಯದು. ಯಾವುದೇ ಸಂಕುಚಿತ ಮಿತಿಗಳಿಲ್ಲದ ಸಿದ್ಧಿಗಾಗಿ ಹೃದಯದಲ್ಲಿ ಸಾಕಷ್ಟು ವಿಶಾಲವಾದ ಅಭೀಪ್ಸೆಯಿರಬೇಕು. ಪಂಥೀಯ ಧಾರ್ಮಿಕ ಸಂಕುಚಿತತೆಯಿಂದ ತಪ್ಪಿಸಿಕೊಳ್ಳಬೇಕು ಅಷ್ಟೇ ಅಲ್ಲ, ಕಟ್ಟುನಿಟ್ಟಿಗೊಳಪಡಿಸುವ ತಾತ್ವಿಕ ಒಂದು ಬದಿಯಲ್ಲಿರುವ ಕಲ್ಪನೆಗಳಿಂದಲೂ ತಪ್ಪಿಸಿಕೊಳ್ಳಬೇಕು, ಅವು ವರ್ಣನಾತೀತನಾದವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತವೆ."

**ಪ್ರಶ್ನೆ :** *ಮಧುರ ಮಾತೆಯವರೆ, "ಭಗವಂತನನ್ನು ಕುರಿತು ಒಂದು ಸಮಗ್ರ ವಿಚಾರ" ಎಂದು ಹೇಳಿರುವುದರಲ್ಲಿ ಶ್ರೀ ಅರವಿಂದರ ಇರಿಸಿದ ಅರ್ಥವೇನು?*

**ಶ್ರೀಮಾತೆ :** ಪ್ರತಿಯೊಬ್ಬನೂ ತನಗಾಗಿ, ತನ್ನ ವೈಯಕ್ತಿಕ ಅಭಿರುಚಿಗನುಗುಣವಾಗಿ, ತಿಳಿದುಕೊಳ್ಳುವ ಸಾಧ್ಯತೆಗಳಿಗನುಗುಣವಾಗಿ, ತನ್ನ ಆಸೆಗಳಿಂದಲೂ ಕೂಡ ಭಗವಂತನನ್ನು ಕುರಿತು ಒಂದು ವಿಚಾರವನ್ನು ರೂಪಿಸಿಕೊಂಡಿರುತ್ತಾನೆ. ಜನರು ತಾವು ಬಯಸುವ, ಭೇಟಿ ಮಾಡಲು ಇಚ್ಛೆ ಇಟ್ಟುಕೊಂಡಿರುವ ಭಗವಂತನನ್ನು ಕುರಿತು ವಿಚಾರವನ್ನು ರೂಪಿಸಿಕೊಂಡಿರುತ್ತಾರೆ ಮತ್ತು ಹಾಗಾಗಿ, ಸ್ವಾಭಾವಿಕವಾಗಿ, ತಮ್ಮ ಸಿದ್ಧಿಯನ್ನು ಹೆಚ್ಚಿನ ರೀತಿಯಲ್ಲಿ ಮಿತಿಗೊಳಪಡಿಸುತ್ತಾರೆ.

ನಿಮ್ಮ ಸ್ವಭಾವಕ್ಕೆ ಹಾಗೂ ಕಲ್ಪನೆಗೆ ಹೊಂದಿಕೊಳ್ಳುವ ವಿಚಾರದಿಂದ ಭಗವಂತನನ್ನು ರೂಪಿಸಿರುತ್ತೀರಿ, ಅಲ್ಲವೆ? ಹಾಗಾಗಿ ನಿಮ್ಮಿಂದಲೇ ಸ್ವಲ್ಪ ಹೊರಗೆ ಬರಲು ಬಯಸಿದರೆ ಮತ್ತು ನಿಜವಾಗಿ ಸಮಗ್ರ ಯೋಗವನ್ನು ಆಚರಿಸಲು ಪ್ರಯತ್ನಿಸಿದರೆ ನೀವು ಯೋಚಿಸುವ ಹಾಗೂ ಭಾವನೆಗೆ ತಂದುಕೊಂಡಿರುವ–ವನಷ್ಟೇ ಭಗವಂತನಾಗಿರುವುದಿಲ್ಲ, ಆದರೆ ಇತರರು ಅವನೇನಿರುವನೆಂದು ಯೋಚಿಸುವ ಹಾಗೂ ಭಾವನೆ ತಂದುಕೊಳ್ಳುವ ರೀತಿಯವನೂ ಆಗಿರುತ್ತಾನೆ – ಮತ್ತು ಅದಕ್ಕೆ ಅಧಿಕವಾಗಿ ಯಾರೂ ಯೋಚಿಸಲಾಗದ, ಭಾವನೆಗೆ ತಂದುಕೊಳ್ಳಲಾಗದಂತಹನೂ ಆಗಿರುತ್ತಾನೆ.

ಹಾಗಾಗಿ ನೀವು ಇದನ್ನು ತಿಳಿದುಕೊಂಡರೆ, ಸಮಗ್ರತೆಯ ಮಾರ್ಗದ ಮೇಲೆ ನೀವು ಮೊದಲ ಹೆಜ್ಜೆಯನ್ನಿರಿಸುತ್ತೀರಿ.

ಹುಟ್ಟುಗುಣದಿಂದ, ಅದರ ಬಗ್ಗೆ ಅರಿವೂ ತಂದುಕೊಳ್ಳದೆ ಜನರು ತಮ್ಮದೇ ಕಲ್ಪನೆಗಳಿಗೆ ಹೊಂದಿಕೊಳ್ಳುವ ಭಗವಂತನಿರಬೇಕು ಎಂದು ಬಯಸುವುದರಲ್ಲಿ ಪಟ್ಟುಹಿಡಿದಿರುತ್ತಾರೆ. ಏಕೆಂದರೆ ಯೋಚನೆ ಮಾಡದೆ ಬಹಳ ಸ್ವಯಂಪ್ರೇರಣೆಯಿಂದ ನಿಮಗೆ ಹೇಳುತ್ತಾರೆ: "ಓಹ್ ಇದು ಭಗವಂತ, ಇದು ಭಗವಂತನಲ್ಲ. ಅದರ ಬಗ್ಗೆ ಅವರಿಗೇನು ತಿಳಿದಿರುತ್ತದೆ? ಇನ್ನೂ ಮಾರ್ಗದ ಮೇಲೆ ಹೆಜ್ಜೆ ಇರಿಸಿರದ ಜನರಿರುತ್ತಾರೆ, ಅವರು ಇಲ್ಲಿಗೆ ಬಂದಾಗ ಹಾಗೂ ವಸ್ತು–ವಿಷಯಗಳನ್ನು ನೋಡಿದಾಗ ನಿಮಗೆ ಹೇಳುತ್ತಾರೆ: "ಆಶ್ರಮ ಭಗವಂತನೊಂದಿಗೆ ಏನನ್ನೂ ಕೈಕೊಳ್ಳುವುದಿರುವುದಿಲ್ಲ, ಅದು ದೈವಿಕವಾದುದು ಅಲ್ಲವೇ ಅಲ್ಲ." ಆದರೆ ನೀವು ಅವರಿಗೆ "ದೈವಿಕವಾದದ್ದು ಎಂದರೇನು?" ಎಂದು ಕೇಳಿದರೆ ಅವರಿಗೆ ಉತ್ತರ ಕೊಡುವುದು ಕಷ್ಟಕರವಾಗುತ್ತದೆ, ಅದರ ಬಗ್ಗೆ ಅವರಿಗೆ ಏನೂ ತಿಳಿದಿರುವುದಿಲ್ಲ. ಮನುಷ್ಯ ಕಡಿಮೆ ತಿಳಿದುಕೊಂಡಾಗ ಹೆಚ್ಚಿನ ರೀತಿಯಲ್ಲಿ ತೀರ್ಮಾನ ನೀಡುತ್ತಾನೆ. ಮನುಷ್ಯ ಹೆಚ್ಚು ತಿಳಿದುಕೊಂಡ ಹಾಗೆ ವಸ್ತು–ವಿಷಯಗಳನ್ನು ಕುರಿತು ಉಚ್ಚರಿಸುವುದು ಕಡಿಮೆಯಾಗುತ್ತದೆ. ಒಂದು ಸಮಯ ಬರುತ್ತದೆ. ಆಗ ಮನುಷ್ಯ ಕೈಕೊಳ್ಳಬೇಕಾದದ್ದೆಲ್ಲ ಅವಲೋಕನ ಮಾಡುವುದಿರುತ್ತದೆ, ತೀರ್ಮಾನ ನೀಡುವುದು ಅಸಾಧ್ಯವಾಗುತ್ತದೆ. ಮನುಷ್ಯ ವಸ್ತು–ವಿಷಯಗಳನ್ನು ಅವಿರುವ ಹಾಗೆ ಆವುಗಳ ಸಂಬಂಧದಲ್ಲಿ ಹಾಗೂ ಅವುಗಳಿರುವ ಸ್ಥಾನದಲ್ಲಿ ನೋಡಬಲ್ಲ. ಅದರೊಂದಿಗೆ ಒಂದು ದಿನ ಅವು ಹೊಂದಿರಬೇಕಾದ ಸ್ಥಾನದಲ್ಲಿ ಇರುವ ವ್ಯತ್ಯಾಸವನ್ನು ಗಮನಿಸುತ್ತಾನೆ. – ಏಕೆಂದರೆ ಜಗತ್ತಿನಲ್ಲಿ ಇದೇ ದೊಡ್ಡ ಅಸ್ತವ್ಯಸ್ತತೆಯಾಗಿದೆ – ಆದರೆ ಮನುಷ್ಯ ತೀರ್ಮಾನ ನೀಡುವುದಿಲ್ಲ, ಅವನು ಕೇವಲ ಅವಲೋಕನ ಮಾಡುತ್ತಾನೆ.

ಒಂದು ಕ್ಷಣವಿರುತ್ತದೆ, ಆಗ ಮನುಷ್ಯ "ಇದು ದೈವಿಕವಾದದ್ದು, ಅದು ದೈವಿಕವಾದದ್ದಲ್ಲ ಎಂದು ಹೇಳಲು ಶಕ್ತನಾಗದೆ ಹಾಗಿರುತ್ತದೆ. ಏಕೆಂದರೆ ಒಂದು ಸಮಯ ಬರುತ್ತದೆ, ಆಗ ಮನುಷ್ಯ ಇಡೀ ವಿಶ್ವವನ್ನು ಎಷ್ಟೊಂದು ಸರ್ವವನ್ನು ವ್ಯಾಪಿಸಿಕೊಳ್ಳುವ ರೀತಿಯಲ್ಲಿ ನೋಡುತ್ತಾನೆ ಎಂದರೆ, ನಿಜ ಹೇಳುವುದಾದರೆ ಪ್ರತಿಯೊಂದನ್ನು ಕದಡದೆ ಅದರಿಂದ ಏನನ್ನಾದರೂ ತೆಗೆದುಹಾಕುವುದು

ಅಸಾಧ್ಯವಾಗುತ್ತದೆ. ಈಗ ಈ ಪ್ರಜ್ಞೆಯಿಂದ ಮನುಷ್ಯ ಕೆಳಗೆ ಹೆಚ್ಚು ಬಾಹ್ಯ ಪ್ರಜ್ಞೆಯತ್ತ ಇಳಿದು ಬಂದರೆ, ಸ್ವಾಭಾವಿಕವಾಗಿ, ಅವನು ಬಹಳ ನಿಖರವಾದ, ನಿಜವಾದ ಪ್ರಜ್ಞೆಯತ್ತ ತಲುಪಲು ಸಹಾಯಕವಾಗುವ ವಿಷಯಗಳನ್ನು ಮತ್ತು ಮಾರ್ಗದಲ್ಲಿ ಅಡ್ಡಿಪಡಿಸುವ ಇಲ್ಲವೆ ಹಿಂದೆ ಎಳೆಯುವ ಇಲ್ಲವೆ ಪ್ರಗತಿಗಾಗಿ ಹೋರಾಡಬೇಕಾದ ವಿಷಯಗಳನ್ನು ಕುರಿತು ಭಾವನೆ ತಂದುಕೊಳ್ಳಲು ಪ್ರಾರಂಭಿಸುತ್ತಾನೆ. ಹಾಗಾಗಿ ದೃಷ್ಟಿಕೋನ ಬದಲಾಗುತ್ತದೆ. ಮನುಷ್ಯ: "ಇದು ದೈವಿಕವಾದದ್ದು ಇಲ್ಲವೆ ಇದು ಭಗವಂತನತ್ತ ಹೋಗಲು ಸಹಾಯಕವಾದದ್ದು, ಆ ಇನ್ನೊಂದು ದೈವಿಕವಾದದ್ದರ ವಿರುದ್ಧವಿದೆ, ಅದು ಭಗವಂತನ ಶತ್ರು" ಎಂದು ಹೇಳುವುದಿರುತ್ತದೆ.

ಆದರೆ ಇದು ಕ್ರಿಯೆಗಾಗಿ, ಭೌತಿಕ ಜೀವನದಲ್ಲಿ ಇರುವ ಚಲನೆಗಾಗಿ ಇರುವ ವ್ಯಾವಹಾರಿಕ ದೃಷ್ಟಿಕೋನ – ಏಕೆಂದರೆ ಮನುಷ್ಯ ಇನ್ನೂ ಅದೆಲ್ಲವನ್ನು ದಾಟಿ ಹೋಗುವ ಪ್ರಜ್ಞೆಯನ್ನು ತಲುಪಿರುವುದಿಲ್ಲ, ಏಕೆಂದರೆ ಮನುಷ್ಯ ಆಂತರಿಕ ಪರಿಪೂರ್ಣತೆಯನ್ನು ಸಿದ್ಧಿಸಿಕೊಂಡಿರುವುದಿಲ್ಲ, ಅದನ್ನು ಹೊಂದಿದ ಮನುಷ್ಯ ಇನ್ನು ಮುಂದೆ ಹೋರಾಟ ನಡೆಸುವುದು ಇರುವುದಿಲ್ಲ, ಏಕೆಂದರೆ ಅವನು ಹೋರಾಟದ, ಇಲ್ಲವೆ ಹೋರಾಟ ನಡೆಸುವ ಸಮಯದ ಇಲ್ಲವೆ ಹೋರಾಟದ ಉಪಯುಕ್ತತೆಯ ವಲಯದಾಚೆಗೆ ಹೋಗಿರುತ್ತಾನೆ. ಆದರೆ ಅದಕ್ಕಿಂತ ಮೊದಲು ಮನುಷ್ಯ ಆ ಸ್ಥಿತಿಯನ್ನು ತನ್ನ ಪ್ರಜ್ಞೆಯಲ್ಲಿ ಹಾಗೂ ಕ್ರಿಯೆಯಲ್ಲಿ ಸಿದ್ಧಿಸಿ–ಕೊಳ್ಳುವಿಕೆಗಿಂತ ಮೊದಲು ಅವಶ್ಯವಾಗಿ ಅಲ್ಲಿ ಹೋರಾಟವಿರುತ್ತದೆ ಮತ್ತು ಹೋರಾಟವಿದ್ದಾಗ ಅಲ್ಲಿ ಆಯ್ಕೆ ಮಾಡಿಕೊಳ್ಳುವುದಿರುತ್ತದೆ ಮತ್ತು ಆಯ್ಕೆಗಾಗಿ ವಿವೇಚನಾಶಕ್ತಿ ಅವಶ್ಯವಾಗಿರುತ್ತದೆ.

ದೈವೀ ಸಂಕಲ್ಪಕ್ಕೆ ಹಾಗೂ ಮಾರ್ಗದರ್ಶನಕ್ಕೆ ಸಾಧ್ಯವಿದ್ದಷ್ಟು ಸಂಪೂರ್ಣವಾಗಿರುವ ಒಂದು ಪ್ರಜ್ಞೆ ಹಾಗೂ ಸ್ವ–ಸಂತೋಷದ ಸಮ್ಮತಿಯಿರುವ ಶರಣಾಗತಿ ವಿವೇಚನಾ ಶಕ್ತಿಯ ಅತ್ಯಂತ ಸುನಿಶ್ಚಿತ ಸಾಧನ. ಆಗ ತಪ್ಪು ಮಾಡುವ ಹಾಗೂ ಮಿಥ್ಯೆಯ ಪ್ರಕಾಶಗಳನ್ನು ನಿಜವಾದವುಗಳೆಂದು ಕೈಗೆತ್ತಿಕೊಳ್ಳುವ ಅಪಾಯವಿರುವುದಿಲ್ಲ.

**(CWM, 8/1–2)** **– ಶ್ರೀಮಾತೆ**

*

## ಬೌದ್ಧಿಕ ತಯಾರಿ ಹಾಗೂ ಸಮಗ್ರ ಯೋಗ

"ಈ ಬೌದ್ಧಿಕ ತಯಾರಿ ಸಾಮರ್ಥ್ಯಪೂರ್ಣ ಯೋಗದಲ್ಲಿ ನಿಜವಾಗಿ ಮೊದಲ ಹಂತವಾಗಬಹುದು. ಆದಾಗ್ಯೂ ಅತ್ಯಗತ್ಯದ್ದಾಗಿರುವುದಿಲ್ಲ."

**ಶ್ರೀಮಾತೆ :** ಸಾಮರ್ಥ್ಯಪೂರ್ಣವಾದ ಯೋಗ ಬಹಳ ಸಂಪೂರ್ಣವಾದ ಯೋಗ, ಅದು ಹಲವಾರು ವಿಷಯಗಳನ್ನು ಒಳಗೊಂಡಿರುತ್ತದೆ, ಹಾಗಾಗಿ ಬೌದ್ಧಿಕ ಜ್ಞಾನದ ಈ ಅಂಶ ಯೋಗವನ್ನು ಹೆಚ್ಚು ಸಾಮರ್ಥ್ಯಪೂರ್ಣವಾದದ್ದನ್ನಾಗಿ ಮಾಡುತ್ತದೆ.

**ಪ್ರಶ್ನೆ :** *ಅದು ಮತ್ತು ಸಮಗ್ರ ಯೋಗ ಒಂದೇ ಆಗಿರುತ್ತವೆಯೆ?*

**ಶ್ರೀಮಾತೆ :** ಪೂರ್ತಿಯಾಗಿ ಅಲ್ಲ. ಸಮಗ್ರ ಯೋಗ ಸತ್ತೆಯ ಎಲ್ಲ ಭಾಗಗಳನ್ನು ಹಾಗೂ ಅದರ ಎಲ್ಲ ಕ್ರಿಯೆಗಳನ್ನು ಅಂತರ್ಗತಮಾಡಿಕೊಂಡಿರುತ್ತದೆ. ಆದರೆ ಒಂದು ಸತ್ತೆಯ ಕ್ರಿಯೆಗಳು ಇನ್ನೊಬ್ಬ ಸತ್ತೆಯ ಕ್ರಿಯೆಗಳಷ್ಟು ಸಾಮರ್ಥ್ಯ–ಪೂರ್ಣವಾಗಿರುವುದಿಲ್ಲ ಹಾಗೂ ಒಬ್ಬನ ಸಮಗ್ರತೆ ಇನ್ನೊಬ್ಬನದ ಹಾಗಿರುವುದಿಲ್ಲ; ಮತ್ತು ಒಂದು ಸತ್ತೆಯ ಸಮಗ್ರತೆ ಇನ್ನೊಬ್ಬನ ಸಮಗ್ರತೆಯಷ್ಟು ಇಡಿಯಾಗಿರುವುದಿಲ್ಲ. ನಿಮಗೆ ಅರ್ಥವಾಯಿತೆ?

ನಿಮ್ಮ ಇಡೀ ಸತ್ತೆ, ಅದಿದ್ದ ಹಾಗೆ, ಯೋಗದಲ್ಲಿ ಭಾಗ ವಹಿಸಿದರೆ ಅದು ನಿಮಗೆ ಸಮಗ್ರ ಯೋಗವಾಗುತ್ತದೆ. ಇನ್ನೊಬ್ಬನ ಭಾಗವಹಿಸುವಿಕೆಗೆ ಹೋಲಿಸಿದರೆ ನಿಮ್ಮ ಭಾಗವಹಿಸುವಿಕೆ ಬಡವಾದದ್ದು, ಮಧ್ಯಮ ಸ್ತರದ್ದು ಆಗಿರಬಹುದು ಮತ್ತು ನೀವು ಒಳಗೊಂಡಿರುವ ಪ್ರಜ್ಞೆಯ ಅಂಶಗಳು ಇನ್ನೊಬ್ಬ ವ್ಯಕ್ತಿ ಒಳಗೊಂಡಿರುವ ಅಂಶಗಳಿಗಿಂತ ಬಹಳ ಕಡಿಮೆಯಾಗಿರಬಹುದು. ಮತ್ತು ಆದಾಗ್ಯೂ ನಿಮ್ಮ ಯೋಗ ನಿಮಗೆ ಸಮಗ್ರವಾದದ್ದಾಗಿರುತ್ತದೆ, ಎಂದರೆ ಅದನ್ನು ನಿಮ್ಮ ಸತ್ತೆಯ ಎಲ್ಲ ಭಾಗಗಳಲ್ಲಿ ಹಾಗೂ ಎಲ್ಲ ಕ್ರಿಯೆಗಳಲ್ಲಿ ಮಾಡಲಾಗಿರುತ್ತದೆ.

**(CWM, 8/7)** **– ಶ್ರೀಮಾತೆ**

*

## ಕ್ರಿಯೆಯ ಋಣಾತ್ಮಕ ಹಾಗೂ ಧನಾತ್ಮಕ ಬದಿ

**ಪ್ರಶ್ನೆ :** *ಮಧುರ ಮಾತೆಯವರೆ, ಶ್ರೀ ಅರವಿಂದರು ಇಲ್ಲಿ ಹೀಗೆ ಬರೆದಿದ್ದಾರೆ: ಈ ಎಲ್ಲ ಮೊದಲ ಅವಧಿಗಾಗಿ ಅವನು (ವ್ಯಕ್ತಿ) ನಿಮ್ನ ಪ್ರಕೃತಿಯ*

*ಉಪಕರಣಗಳನ್ನು ಸಾಧನಗಳೆಂದು ಉಪಯೋಗಿಸಿ ಕಾರ್ಯಮಾಡ-ಬೇಕಾಗುತ್ತದೆ.*

*ಈ ಕಾರ್ಯವೆಂದರೇನು ಮತ್ತು ಅದನ್ನು ಹೇಗೆ ಸಿದ್ಧಿಸಿಕೊಳ್ಳಲಾಗುತ್ತದೆ?*

**ಶ್ರೀಮಾತೆ :** ಈ ಕಾರ್ಯಕ್ಕೆ ಋಣಾತ್ಮಕ ಹಾಗೂ ಧನಾತ್ಮಕ ಬದಿಗಳಿರುತ್ತವೆ. ಧನಾತ್ಮಕ ಬದಿ ಮನುಷ್ಯ ತನ್ನ ಅಭೀಪ್ಸೆಯನ್ನು ಹೆಚ್ಚಿಸುವುದಾಗಿದೆ, ತನ್ನ ಪ್ರಜ್ಞೆಯನ್ನು ಅಭಿವೃದ್ಧಿಗೊಳಿಸುವುದಾಗಿದೆ, ತನ್ನ ಚೈತ್ಯಸತ್ತೆಯ ಸಂಪರ್ಕದಲ್ಲಿ ಪ್ರವೇಶಿಸಲು ಅಂತರಂಗದಲ್ಲಿ ಹೋಗುವುದಾಗಿದೆ, ತನ್ನ ಸತ್ತೆಯ ಎಲ್ಲ ಭಾಗಗಳನ್ನು, ಎಲ್ಲ ಚಲನೆಗಳನ್ನು, ಎಲ್ಲ ಕ್ರಿಯೆಗಳನ್ನು ಕೈಗೆತ್ತಿಕೊಂಡು ಚೈತ್ಯಸತ್ತೆಯ ಪ್ರಜ್ಞೆಯ ಎದುರಿಗೆ ಇರಿಸುವುದಾಗಿದೆ, ಅದರಿಂದಾಗಿ ಈ ಕೇಂದ್ರಕ್ಕೆ ಸಂಬಂಧಿಸಿದ ನಿಜವಾದ ಸ್ಥಾನದಲ್ಲಿ ಅವು ಬೀಳುವಂತಾಗುತ್ತದೆ. ಕೊನೆಯದಾಗಿ ಮನುಷ್ಯ ಭಗವಂತನತ್ತ, ಭಗವಂತನೆಡೆಗೆ ಇರುವ ಪ್ರಗತಿಯತ್ತ ತನ್ನ ಎಲ್ಲ ಅಭೀಪ್ಸೆಯನ್ನು ಸಂಘಟಿಸುವುದಾಗಿದೆ. ಅದು ಧನಾತ್ಮಕ ಬದಿ. ಅದೇ ಸಮಯದಲ್ಲಿ ಋಣಾತ್ಮಕ ಬದಿ ಎಂದರೆ ಬಾಹ್ಯದಿಂದ ಬರುವ ಇಲ್ಲವೆ ಅಪ್ರಜ್ಞೆಯಿಂದ ಇಲ್ಲವೆ ಅವಚೇತನದಿಂದ ಇಲ್ಲವೆ ಅಚೇತನದಿಂದ ಇಲ್ಲವೆ ಸುತ್ತುವರಿದಿರುವ ವಾತಾವರಣದಿಂದ ಎಲ್ಲ ಪ್ರಭಾವಗಳೊಂದಿಗೆ ಬರುವ ಎಲ್ಲವನ್ನು ವಿಧಾನಪೂರಕವಾಗಿ, ವಿವೇಚನಾ ಶಕ್ತಿಯಿಂದ ನಿರಾಕರಿಸುವುದಾಗಿದೆ. ಮನುಷ್ಯ ಈ ಪ್ರಭಾವಗಳನ್ನು, ಸೂಚನೆಗಳನ್ನು, ಪ್ರಚೋದನೆಗಳನ್ನು ವಿವೇಚಿಸಿ ನೋಡಬೇಕು ಮತ್ತು ಶಿಸ್ತುಬದ್ಧತೆಯಿಂದ ಅವುಗಳನ್ನು ತಿರಸ್ಕರಿಸಬೇಕು, ಅವುಗಳ ಪಟ್ಟುಹಿಡಿಯುವಿಕೆಗೆ ಎಂದೆಂದಿಗೂ ಎದೆಗುಂದಬಾರದು, ಎಂದೆಂದಿಗೂ ಅವುಗಳ ಸಂಕಲ್ಪಕ್ಕೆ ಶರಣಾಗಬಾರದು. ಮನುಷ್ಯ ಅದೇ ವೇಳೆಗೆ ತನ್ನ ಸತ್ತೆಯಲ್ಲಿ ಎಲ್ಲ ಭಿನ್ನ ಅಂಶಗಳನ್ನು, ಮಬ್ಬಾದ ಅಹಂಭಾವದ, ಅಪ್ರಜ್ಞೆಯ, ಅನಿಷ್ಟ ಸಂಕಲ್ಪವಿರುವವುಗಳ ಕೂಡ ಇರುವ ಅಂಶಗಳನ್ನು ಸ್ಪಷ್ಟವಾಗಿ ಅವಲೋಕನ ಮಾಡಬೇಕು, ಅವು ಪ್ರಜ್ಞೆಯೊಂದಿಗೆ ಇಲ್ಲವೆ ಪ್ರಜ್ಞೆ ಇಲ್ಲದೆ ಈ ಕೆಟ್ಟ ಪ್ರಭಾವಗಳಿಗೆ ಉತ್ತರ ನೀಡುತ್ತವೆ, ಅವುಗಳು ಪ್ರಜ್ಞೆಯಲ್ಲಿ ಒಳನುಗ್ಗುವುದಕ್ಕೆ ಅನುವು ಮಾಡಿಕೊಡುತ್ತವೆಯಷ್ಟೇ ಅಲ್ಲ, ಆದರೆ ಕೆಲವೊಮ್ಮೆ ಅಲ್ಲಿ ನೆಲೆಸಿ ಬಿಡುತ್ತವೆ. ಅದು ಋಣಾತ್ಮಕ ಬದಿ.

ಎರಡನ್ನೂ ಒಂದೇ ಕಾಲಕ್ಕೆ ಆಚರಿಸಬೇಕು. ಕ್ಷಣ, ಪ್ರಸಂಗ, ಆಂತರಿಕ

ತಯಾರಾಗಿರುವಿಕೆ ಇವುಗಳಿಗನುಗುಣವಾಗಿ ಈಗ ಒಂದರ ಮೇಲೆ, ಈಗ ಮತ್ತೊಂದರ ಮೇಲೆ ಒತ್ತುಕೊಡಬೇಕು, ಆದರೆ ಅವುಗಳಲ್ಲಿ ಯಾವುದನ್ನೂ ಮರೆಯಬಾರದು.

**(CWM, 8/22)** **– ಶ್ರೀಮಾತೆ**

*

**ಆಂತರಿಕ ಶತ್ರುಗಳು**

**ಪ್ರಶ್ನೆ :** *ಮಧುರ ಮಾತೆಯವರೆ, ನಾನು ಇದನ್ನು ಅರ್ಥಮಾಡಿಕೊಂಡಿಲ್ಲ: "ಆತ್ಮದ ಆಂತರಿಕ ಶತ್ರುಗಳನ್ನು, ಶಬ್ದದ ಒರಟು ಅರ್ಥದಲ್ಲಿಯಾದರೂ ಕೂಡ ಯಜ್ಞಾಹುತಿಗೆ ಅರ್ಪಿಸಬೇಕಾಗಿರುತ್ತದೆ, ಅವು ಹೋಗುವಾಗ ಸಾಧಕನ ಪ್ರಜ್ಞೆಯ ಮೇಲೆ ಯಾವುದೇ ಬಗೆಯ ನೋವನ್ನು ಚೆಲ್ಲಿಕೊಡಬಹುದು.*

**ಶ್ರೀಮಾತೆ :** ತಿಳಿದುಕೊಳ್ಳಲಾಗಲಿಲ್ಲವೆ? ಇದು ನಿನಗೆ ಎಂದೂ ಸಂಭವಿಸಿಲ್ಲವೆ? ಇಲ್ಲ? ಉದಾಹರಣೆಗೆ ನಿನ್ನಲ್ಲಿ ನಿನಗಿಷ್ಟವಾಗಿರದ ಒಂದು ಚಲನೆಯಿರಬಹುದು – ಕೋಪದ ಇಲ್ಲವೆ ವೈರವಿರುವ ಚಲನೆ, ಎಲ್ಲ ಬಗೆಯ ಅಂತಹ ವಿಷಯಗಳು ಇಲ್ಲವೆ ಕಪಟತನ ಇಲ್ಲವೆ ನಿಮಗಿಷ್ಟವಿರದ ಏನೋ ಒಂದು – ಅದನ್ನು ನಿನ್ನಿಂದ ನಿರಾಕರಿಸಿದಾಗ, ಅದು ಇನ್ನು ಮುಂದೆ ಬರದಿರುವ ಹಾಗೆ ಪ್ರಯತ್ನ ಮಾಡಬೇಕೆಂದು ಬಯಸಿದಾಗ ಅದು ನಿನಗೆ ನೋವು ನೀಡುತ್ತದೆ, ಕೊಡುತ್ತದಲ್ಲವೆ? ಏನೋ ಒಂದನ್ನು ಕಿತ್ತಿತೆಗೆಯುವಾಗ ಆಗುವ ರೀತಿಯಲ್ಲಿ ನೋವನ್ನುಂಟು ಮಾಡುತ್ತದೆ. ಸರಿ ಈ ನೋವನ್ನೇ ಕುರಿತು ಅವರು ಹೇಳುತ್ತಿದ್ದಾರೆ: ಕೆಟ್ಟ ವಿಷಯವನ್ನು ನಿನ್ನಿಂದ ಹೊರಗೆ ಚೆಲ್ಲಿಕೊಡುತ್ತಿರುವಿ, ಅದು ಬಿಟ್ಟುಹೋಗುವಾಗ ನಿನಗೆ ಬೀಳ್ಕೊಡುವಿನ ಕೊಡುಗೆಯ ಹಾಗೆ ಒಂದು ಅಂದವಾಗಿರುವ ಏಟನ್ನು ಕೊಡುತ್ತದೆ. ಅದನ್ನೇ ಅವರು ಹೇಳುತ್ತಿದ್ದಾರೆ.

ಏಕೆಂದರೆ ನೀನು ಯಾವಗಲೂ ನೋವು ನಿನಗೆ ಸೇರಿರುತ್ತದೆ ಎಂಬ ಭ್ರಮೆಯಲ್ಲಿ ಇರುತ್ತಿರುವಿ. ಇದು ಸತ್ಯವಲ್ಲ, ನೋವನ್ನು ನಿನ್ನ ಮೇಲೆ ಹೇರಲಾಗಿರುತ್ತದೆ. ಅದೇ ಬಗೆಯ ಘಟನೆ ಸಂಭವಿಸಬಹುದು, ನಿಖರವಾಗಿ ವಿವರಗಳಲ್ಲಿ ಅದೇ ಬಗೆಯದಾಗಿರುವ ಘಟನೆ, ನಿನ್ನ ಮೇಲೆ ನೋವಿನ ಛಾಯೆಯನ್ನೂ ಹೇರದಂತಹದು; ತದ್ವಿರುದ್ಧವಾಗಿ ಅದು ನಿನ್ನನ್ನು

ಅತ್ಯಾನಂದದಿಂದ ತುಂಬಬಹುದು. ಅದು ನಿಖರವಾಗಿ ಅದೇ ವಿಷಯವಾಗಿದೆ. ಆದರೆ ಒಂದು ಸಂದರ್ಭದಲ್ಲಿ ನಿನ್ನಿಂದ ನಿರಾಕರಿಸಲು ಬಯಸಿದ ವಿರೋಧೀ ಶಕ್ತಿಗಳಿಗೆ ನೀನು ತೆರೆದುಕೊಂಡಿರುವಿ, ಮತ್ತು ಇನ್ನೊಂದು ಸಂದರ್ಭದಲ್ಲಿ ಹಾಗೆ ಮಾಡಿರುವುದಿಲ್ಲ. ಅವುಗಳಿಂದ ಪರಿಣಾಮಕ್ಕೊಳಗಾಗಲು ನೀನು ಈಗಾಗಲೆ ಬಹಳ ದೂರದಲ್ಲಿರುವಿ ಮತ್ತು ಹಾಗಾಗಿ ಅವು ಪ್ರತಿನಿಧಿಸುವ ನಕಾರಾತ್ಮಕ ಬದಿಯ ಆ ಅನುಭವದಲ್ಲಿ ಭಗವಂತ ಪ್ರತಿನಿಧಿಸುವ ಕೇವಲ ಧನಾತ್ಮಕ ಬದಿಯನ್ನು ಭಾವನೆಗೆ ತಂದುಕೊಳ್ಳುತ್ತೀ. ನೀನು ಪ್ರಗತಿ ಹೊಂದುವಂತೆ ದೈವೀ ಕೃಪೆ ಮಾಡುತ್ತದೆ ಮತ್ತು ದೈವೀ ಕೃಪೆಯೊಂದಿಗೆ ದೈವೀ ಸಂತೋಷದ ಭಾವನೆ ತಂದುಕೊಳ್ಳುತ್ತೀ. ನೀನು ಪ್ರಗತಿ ಹೊಂದುವಂತೆ ಮಾಡುವ ದೈವೀ ಕೃಪೆಯೊಂದಿಗೆ ಗುರುತಿಸಿಕೊಳ್ಳುವುದರ ಬದಲಾಗಿ ನೀನು ತೊಡೆದು ಹಾಕಲು ಬಯಸುವ ಕುರೂಪದ ವಿಷಯದೊಂದಿಗೆ ಗುರುತಿಸಿಕೊಳ್ಳುತ್ತೀ ಮತ್ತು ಹಾಗಾಗಿ, ಸ್ವಾಭಾವಿಕವಾಗಿ, ನೀನು ಅದಿರುವ ಹಾಗೆ ಭಾವನೆ ತಂದುಕೊಳ್ಳುತ್ತೀ ಮತ್ತು ವೇದನೆಗೆ ಒಳಗಾಗುತ್ತೀ.

**(CWM, 8/83–84)** **– ಶ್ರೀಮಾತೆ**

*

## ಸ್ವ–ಕ್ರಿಯಾಶೀಲತೆಯನ್ನುಂಟು ಮಾಡುವ ಧ್ಯಾನ

"ಈ ಯೋಗದ ಆಚರಣೆ ಒಂದು ಕೇಂದ್ರ ಮುಕ್ತಗೊಳಿಸುವ ಜ್ಞಾನದ ನೆನಪನ್ನು ಹೊಂದಿರಬೇಕಾದುದನ್ನು ಒತ್ತಾಯದಿಂದ ಬೇಡುತ್ತದೆ. ಎಲ್ಲರಲ್ಲಿಯೂ ಏಕೈಕ ದಿವ್ಯಾತ್ಮನಿದ್ದಾನೆ, ಏಕೈಕ ಭಗವಂತ ಎಲ್ಲವೂ ಆಗಿದ್ದಾನೆ, ಎಲ್ಲರೂ ಭಗವಂತನಲ್ಲಿದ್ದಾರೆ, ಎಲ್ಲರೂ ಭಗವಂತನಾಗಿದ್ದಾರೆ ಮತ್ತು ವಿಶ್ವದಲ್ಲಿ ಬೇರೇನೂ ಇಲ್ಲ. ಅದು ಕಾರ್ಯಕರ್ತನ ಪ್ರಜ್ಞೆಯ ಇಡೀ ದ್ರವ್ಯವಾಗುವವರೆಗೆ ಈ ಯೋಚನೆ ಇಲ್ಲವೆ ಈ ನಂಬಿಕೆ ಇಡೀ ಹಿನ್ನೆಲೆಯಾಗಿರುತ್ತದೆ. ಈ ಬಗೆಯ ಒಂದು ನೆನಪು ಹಾಗೂ ಸ್ವ–ಕ್ರಿಯಾಶೀಲತೆಯನ್ನುಂಟು ಮಾಡುವ ಧ್ಯಾನ ಅದರ ಕೊನೆಗೆ ಗಾಢ ಹಾಗೂ ಅಡತಡೆಗೊಳಗಾಗದ ದೃಷ್ಟಿ ಮತ್ತು ವೈವಿಧ್ಯಮಯ, ಎಲ್ಲವನ್ನೂ ಅಪ್ಪಿಕೊಳ್ಳುವ ಪ್ರಜ್ಞೆಯಾಗಿ ಹೊರಳುತ್ತದೆ, ಅದನ್ನು ನಾವು ಎಷ್ಟೊಂದು ಸಾಮರ್ಥ್ಯಪೂರ್ಣವಾಗಿ ನೆನಪಿಗೆ ತಂದುಕೊಳ್ಳುತ್ತೇವೆ ಇಲ್ಲವೆ ಅದನ್ನು ಕುರಿತು ಸತತ ಧ್ಯಾನ ಮಾಡುತ್ತೇವೆ."

**ಪ್ರಶ್ನೆ :** *ಮಧುರ ಮಾತೆಯವರೆ, "ಸ್ವ-ಕ್ರಿಯಾಶೀಲತೆಯನ್ನುಂಟು ಮಾಡುವ ಧ್ಯಾನ" ಎಂಬುದರಲ್ಲಿ ಶ್ರೀ ಅರವಿಂದರು ಯಾವ ಅರ್ಥವನ್ನಿರಿಸಿದ್ದಾರೆ?*

**ಶ್ರೀಮಾತೆ :** ಅದು ನಿಮ್ಮ ಸತ್ತೆಯನ್ನು ಪರಿವರ್ತನೆಗೊಳಪಡಿಸುವ ಸಾಮರ್ಥ್ಯ-ಪೂರ್ಣ ಧ್ಯಾನವಾಗಿರುತ್ತದೆ, ಸ್ಥಿರ ಸ್ಥಿತಿಯನ್ನು ಕೈಕೊಳ್ಳುವ ಧ್ಯಾನಕ್ಕೆ ವಿರುದ್ಧವಾಗಿ ಅದು ನೀವು ಪ್ರಗತಿಗೊಳಗಾಗುವಂತೆ ಮಾಡುತ್ತದೆ, ಸ್ಥಿರ ಸ್ಥಿತಿಯ ಧ್ಯಾನ ಚಲಿಸದಂತಹದು ಮತ್ತು ಸಾಪೇಕ್ಷವಾಗಿ ಜಡಸ್ವರೂಪದ್ದಾಗಿರುತ್ತದೆ, ಅದು ನಿಮ್ಮ ಪ್ರಜ್ಞೆಯಲ್ಲಿ ಇಲ್ಲವೆ ನಿಮ್ಮ ಸತ್ತೆಯ ರೀತಿಯಲ್ಲಿ ಏನನ್ನೂ ಬದಲು ಮಾಡುವುದಿಲ್ಲ. ಕ್ರಿಯಾಶೀಲ ಧ್ಯಾನ ಪರಿವರ್ತನೆ ಉಂಟು ಮಾಡುವ ಧ್ಯಾನವಾಗಿರುತ್ತದೆ.

ಸರ್ವಸಾಧಾರಣವಾಗಿ ಜನರಲ್ಲಿ ಕ್ರಿಯಾಶೀಲ ಧ್ಯಾನ ಕೈಕೊಳ್ಳುವುದು ಇರುವುದಿಲ್ಲ. ಅವರು ಧ್ಯಾನವೆಂದು ಕರೆಯುವುದರಲ್ಲಿ ಪ್ರವೇಶಿಸಿದಾಗ ಅವರು ಒಂದು ಬಗೆಯ ನಿಶ್ಚಲತೆಯಲ್ಲಿ ಪ್ರವೇಶಿಸುತ್ತಾರೆ, ಅಲ್ಲಿ ಯಾವುದೂ ಅಲುಗಾಡುತ್ತಿರುವುದಿಲ್ಲ ಮತ್ತು ಅದರಿಂದ ಹೊರಬರುವಾಗ, ನಿಖರವಾಗಿ, ಅವರು ಹೋಗುವಾಗ ಇದ್ದ ರೀತಿಯಲ್ಲಿಯೇ ಹೊರಳಿ ಬರುತ್ತಾರೆ. ಅವರ ಸತ್ತೆಯಲ್ಲಿ ಇಲ್ಲವೆ ಪ್ರಜ್ಞೆಯಲ್ಲಿ ಯಾವ ಬದಲಾವಣೆ ಆಗಿರುವುದಿಲ್ಲ, ಅದು ಹೆಚ್ಚು ಚಲನೆರಹಿತವಾದಂತೆ ಅವರು ಹೆಚ್ಚಿನ ಸಂತೋಷ ಪಡೆಯುತ್ತಾರೆ. ಅವರು ಈ ರೀತಿಯಲ್ಲಿ ಯುಗ ಯುಗಾಂತರಗಳವರೆಗೆ ಧ್ಯಾನ ಕೈಕೊಳ್ಳಬಹುದು, ಅದು ಎಂದೆಂದಿಗೂ ತಮ್ಮಲ್ಲಿ ಹಾಗೂ ವಿಶ್ವದಲ್ಲಿ ಏನನ್ನೂ ಬದಲು ಮಾಡದು. ಆ ಕಾರಣದಿಂದಾಗಿಯೇ ಶ್ರೀ ಅರವಿಂದರು ಕ್ರಿಯಾಶೀಲ ಧ್ಯಾನವನ್ನು ಕುರಿತು ಮಾತನಾಡುತ್ತಾರೆ, ಅದು ನಿಶ್ಚಲ ಧ್ಯಾನದ ವಿರುದ್ಧವಾಗಿರುತ್ತದೆ.

**ಪ್ರಶ್ನೆ :** *ಅದನ್ನು ಹೇಗೆ ಕೈಕೊಳ್ಳಲಾಗುತ್ತದೆ; ಅದನ್ನು ಭಿನ್ನ ರೀತಿಯಲ್ಲಿ ಮಾಡಲಾಗುವುದೆ?*

**ಶ್ರೀಮಾತೆ :** ಅಲ್ಲಿ ಭಿನ್ನವಾಗಿರಬೇಕಾದುದು ಅಭೀಪ್ಸೆ ಹಾಗೂ ಮನೋಭಾವ, ಆ ರೀತಿಯೆಂದರೆ ಏನೆಂದು ತಿಳಿದಿರುವಿ – (ನಗುತ್ತ) ಕುಳಿತುಕೊಳ್ಳುವ ರೀತಿಯೆ? – ಅದಲ್ಲ. ಆಂತರಿಕ ರೀತಿ.

ಹೌದು.

ಆದರೆ ಅದು ಪ್ರತಿಯೊಬ್ಬನಿಗೆ ಭಿನ್ನವಾಗಿದೆ.

ಮನುಷ್ಯ ಏಕೆ ಧ್ಯಾನ ಮಾಡುತ್ತಾನೆ ಎಂಬುದನ್ನು ತಿಳಿದುಕೊಳ್ಳುವುದು ಮಹತ್ವದ ಸಂಗತಿಯಾಗಿರುತ್ತದೆ, ಅದೇ ಧ್ಯಾನದ ಗುಣಲಕ್ಷಣವನ್ನು ಕೊಡುತ್ತದೆ ಮತ್ತು ಅದು ಒಂದು ರೀತಿಯ ಇಲ್ಲವೆ ಇನ್ನೊಂದು ರೀತಿಯ ಕ್ರಮಬದ್ಧತೆ–ಯುಳ್ಳದ್ದಾಗುತ್ತದೆ. ನೀವು ದೈವೀ ಶಕ್ತಿಗೆ ನಿಮ್ಮನ್ನು ತೆರೆದಿರಿಸಿಕೊಳ್ಳಲು, ಸಾಮಾನ್ಯ ಪ್ರಜ್ಞೆಯನ್ನು ನಿರಾಕರಿಸಲು, ನಿಮ್ಮ ಸತ್ತೆಯ ಆಳಗಳಲ್ಲಿ ಪ್ರವೇಶ ಮಾಡಲು, ನಿಮ್ಮನ್ನು ಸಮಗ್ರವಾಗಿ ಹೇಗೆ ಕೊಟ್ಟುಕೊಳ್ಳಬೇಕು ಎಂಬುದನ್ನು ಕಲಿತುಕೊಳ್ಳುವುದಕ್ಕಾಗಿ ಹಾಗೂ ಎಲ್ಲ ಬಗೆಯ ವಿಷಯಗಳಿಗಾಗಿ ಧ್ಯಾನ ಮಾಡಬಹುದು. ಶಾಂತಿ, ಸ್ಥಿರತೆ ಹಾಗೂ ನಿಶ್ಚಲನೀರವತೆಯಲ್ಲಿ ಪ್ರವೇಶಿಸಲು ನೀವು ಧ್ಯಾನ ಮಾಡುತ್ತೀರಿ – ಸರ್ವಸಾಧಾರಣವಾಗಿ ಜನರು ಇದನ್ನೇ ಕೈಕೊಳ್ಳುತ್ತಾರೆ, ಹೆಚ್ಚಿನ ಯಶಸ್ಸನ್ನು ಕಂಡುಕೊಳ್ಳುವುದಿಲ್ಲ. ಪರಿವರ್ತನೆಯ ದೈವೀ ಶಕ್ತಿಯನ್ನು ಸ್ವೀಕರಿಸಲು, ಪರಿವರ್ತನೆ–ಗೊಳಿಸಬೇಕಾದ ಬಿಂದುಗಳನ್ನು ಶೋಧಿಸಲು, ಪ್ರಗತಿಯ ಮಾರ್ಗವನ್ನು ಹುಡುಕಿ ತೆಗೆಯಲು ಕೂಡ ನೀವು ಧ್ಯಾನವನ್ನು ಕೈಕೊಳ್ಳಬಹುದು. ಮತ್ತು ನಂತರ ಬಹಳ ವ್ಯಾವಹಾರಿಕ ಕಾರಣಗಳಿಗಾಗಿ ಎಂದರೆ ಒಂದು ತೊಂದರೆಯನ್ನು ತೆಗೆದು ಹಾಕುವುದಿದ್ದಾಗ, ಪರಿಹಾರವೊಂದನ್ನು ಕಂಡುಕೊಳ್ಳಬೇಕಾದಾಗ, ಒಂದಿಲ್ಲೊಂದು ಕ್ರಿಯೆಯಲ್ಲಿ ನೀವು ಸಹಾಯವನ್ನು ಬಯಸಿದಾಗ ಧ್ಯಾನವನ್ನು ಕೈಕೊಳ್ಳಬಹುದು. ನೀವು ಅದಕ್ಕಾಗಿಯೂ ಕೂಡ ಧ್ಯಾನ ಮಾಡಬಹುದು.

ಪ್ರತಿಯೊಬ್ಬನಿಗೂ ಅವನದೇ ರೀತಿಯಲ್ಲಿ ಧ್ಯಾನ ಕೈಕೊಳ್ಳುವುದಿರುತ್ತದೆ. ಆದರೆ ಧ್ಯಾನ ಕ್ರಿಯಾತ್ಮಕವಾಗಲಿ ಎಂದು ಮನುಷ್ಯ ಬಯಸಿದರೆ ಪ್ರಗತಿಗಾಗಿ ಒಂದು ಅಭೀಪ್ಸೆಯಿರಬೇಕು ಮತ್ತು ಈ ಅಬೀಪ್ಸೆಯ ನೆರವೇರಿಕೆ ಕಂಡುಕೊಳ್ಳಲು ಸಹಾಯ ಮಾಡುವುದಕ್ಕಾಗಿ ಧ್ಯಾನ ಮಾಡಬೇಕು. ಆಗ ಅದು ಕ್ರಿಯಾಶೀಲ–ವಾಗುತ್ತದೆ.

**(Questions and Answers 1956, p. 88–89) – ಶ್ರೀಮಾತೆ**

*

**ಭಗವಂತನಿಂದ ಬೇಡುವುದು**

ಅಪರಿಪೂರ್ಣತೆ ಇಲ್ಲವೆ ಮಿಥ್ಯೆಯಿರುವ ಈ ಜಗತ್ತಿನ ಒಳ್ಳೆಯದನ್ನು ಹಾಗೂ ಅನಿಷ್ಟವಾದದ್ದನ್ನು ಒಂದು ಆಧ್ಯಾತ್ಮಿಕ ಸತ್ವ ಅಪರಾಧಿಯೆಂದು ತೀರ್ಮಾನಿಸಿದೆ ಮತ್ತು ಪರಮೋಚ್ಚ ಸತ್ಯವನ್ನು ಪರದೆಯ ಮುಂದಿರಿಸಿದೆ. ಆದರೆ

ಇವೆಲ್ಲವುಗಳ ಹಿಂದೆ ಹಾಗೂ ಇವೆಲ್ಲವುಗಳಲ್ಲಿ ಅವನು ದೈವಿಕತೆ ಇರುವ ಭಾವನೆ ತಂದುಕೊಂಡಿದ್ದಾನೆ, ಅವನೇ ಈ ಎಲ್ಲ ವಿಷಯಗಳಾಗಿದ್ದಾನೆ, ದೈವೀ ಪ್ರಕಾಶವನ್ನು ತರುವವನು, ಮಾರ್ಗದರ್ಶಕ, ಎಲ್ಲವನ್ನೂ ತಿಳಿದುಕೊಂಡವನು, ದೈವೀ ಶಕ್ತಿಯ ಪ್ರಭು, ದಿವ್ಯಾನಂದವನ್ನು ಕೊಡುವವನು, ಮಿತ್ರ, ಸಹಾಯಕ, ತಂದೆ, ತಾಯಿ ಜಗತ್ತಿನ ಆಟದಲ್ಲಿ ಸಹ–ಆಟಗಾರ, ತನ್ನದೇ ಸತ್ತೆಯ ಪರಿಪೂರ್ಣ ಪ್ರಭು, ಅವನ ಆತ್ಮಕ್ಕೆ ಪ್ರೀತ್ಯಾಸ್ಪದನಾದವನು ಹಾಗೂ ಪ್ರೇಮಿ."

**ಪ್ರಶ್ನೆ :** *ಉದಾಹರಣೆಗೆ ಮನುಷ್ಯ ಏನನ್ನಾದರೂ ತಿಳಿದುಕೊಳ್ಳಲು ಬಯಸಿದರೆ, ಇಲ್ಲವೆ ಮಾರ್ಗದರ್ಶನ ಬೇಕಾಗಿದ್ದರೆ ಇಲ್ಲವೆ ಬೇರೆ ಏನೋ ಬೇಕಾಗಿದ್ದರೆ ಅವನ ಆವಶ್ಯಕತೆಗನುಗುಣವಾಗಿ ಭಗವಂತನಿಂದ ಅದನ್ನು ದೊರಕಿಸಬಲ್ಲ?*

**ಶ್ರೀಮಾತೆ :** ಅದಕ್ಕಾಗಿ ಭಗವಂತನನ್ನು ಬೇಡುವುದರ ಮೂಲಕ ದೊರಕಿಸಬಲ್ಲಿರಿ, ಅವನಿಗೆ ಕೇಳದಿದ್ದರೆ ಅದನ್ನು ನೀವು ಹೇಗೆ ದೊರಕಿಸಬಲ್ಲಿರಿ?

ನೀವು ಭಗವಂತನತ್ತ ಹೊರಳಿ ಪೂರ್ತಿ ವಿಶ್ವಾಸದೊಂದಿಗೆ ಅವನಲ್ಲಿ ಬೇಡಿಕೊಂಡರೆ ನಿಮಗೇನು ಬೇಕೋ ಅದನ್ನು ದೊರಕಿಸುವಿರಿ. ಅವಶ್ಯವಾಗಿ ನೀವು ಕಲ್ಪನೆ ಮಾಡಿಕೊಂಡ ಆವಶ್ಯಕತೆಯಂತಹದಲ್ಲ, ಆದರೆ ನಿಜವಾಗಿ ನಿಮಗೆ ಅವಶ್ಯವಾಗಿರುವುದನ್ನು ನೀವು ದೊರಕಿಸುವಿರಿ. ಆದರೆ ಅದಕ್ಕಾಗಿ ನೀವು ಅವನಲ್ಲಿ ಬೇಡಬೇಕು.

ನೀವು ಆ ಪ್ರಯೋಗವನ್ನು ನಿಷ್ಕಪಟತನದಿಂದ ಕೈಕೊಳ್ಳಬೇಕು, ನೀವು ಅದನ್ನು ಎಲ್ಲ ಬಗೆಯ ಬಾಹ್ಯ ಸಾಧನೆಗಳಿಂದ ದೊರಕಿಸಲು ಪ್ರಯತ್ನ ಮಾಡಬಾರದು ಮತ್ತು ನಂತರ ಭಗವಂತ ಅದನ್ನು ನಿಮಗೆ ಕೊಡುವನೆಂದು ನಿರೀಕ್ಷಿಸಬಾರದು, ನೀವು ಅದನ್ನು ಕೊಡು ಎಂದು ಅವನಲ್ಲಿ ಬೇಡಿಕೊಂಡಿರುವುದಿಲ್ಲ. ನಿಜವಾಗಿ ಯಾರಾದರೂ ನಿಮಗೆ ಏನನ್ನೋ ಕೊಡಲೆಂದು ಬಯಸಿದಾಗ ನೀವು ಅವನಲ್ಲಿ ಅದಕ್ಕಾಗಿ ಕೇಳುತ್ತೀರಿ, ಅಲ್ಲವೆ? ಭಗವಂತನಲ್ಲಿ ನೀವು ಅದಕ್ಕಾಗಿ ಬೇಡಿಕೊಳ್ಳದೆ ಇದ್ದಾಗ ಅವನು ಅದನ್ನು ನಿಮಗೆ ಕೊಡಲಿ ಎಂದು ನಿರೀಕ್ಷಿಸುವುದೇಕೆ? ಸಾಮಾನ್ಯ ಪ್ರಜ್ಞೆಯಲ್ಲಿ ಚಲನೆ ವಿರುದ್ಧ ರೀತಿಯದಾಗಿರುತ್ತದೆ. ನೀವು ಮನಸ್ಸಿನಲ್ಲಿ ಏನನ್ನೋ ಇಟ್ಟುಕೊಂಡು: "ನನಗೆ ಇದು ಬೇಕಾಗಿದೆ. ಈ ಸಂಬಂಧ ಬೇಕಾಗಿದೆ. ಈ ಮಮತೆ ಬೇಕಾಗಿದೆ, ಈ ಜ್ಞಾನ ಬೇಕಾಗಿದೆ ಇತ್ಯಾದಿ. ಸರಿ ಭಗವಂತ ನನಗೆ ಅದನ್ನು ಕೂಡ ಬೇಕು ಇಲ್ಲದಿದ್ದರೆ ಅವನು ಭಗವಂತನೇ

ಅಲ್ಲ.” ಅದರ ಬಗ್ಗೆ ಹೇಳಬೇಕಾದುದೆಂದರೆ ನೀವು ಸಮಸ್ಯೆಯನ್ನು ವಿರುದ್ಧ ದಿಸೆಯಲ್ಲಿ ಸಂಪೂರ್ಣವಾಗಿ ತಿರುಗಿಸುತ್ತೀರಿ. ಮೊದಲನೆಯದಾಗಿ ನೀವು ಹೇಳುತ್ತೀರಿ: “ಇದು ನನಗೆ ಅವಶ್ಯವಾಗಿದೆ.” ಅದು ನಿಜವಾಗಿ ನಿಮಗೆ ಅವಶ್ಯವಾಗಿದೆಯೆ ಇಲ್ಲವೆ ಅದು ಕೇವಲ ನಿಮ್ಮಲ್ಲಿದ್ದ ಒಂದು ಅನಿಸುವಿಕೆ ಇಲ್ಲವೆ ಆಸೆಯಾಗಿರುತ್ತದೆಯೆ ಇಲ್ಲವೆ ಬಹಳ ಅಜ್ಞಾನದ ಚಲನೆಯಾಗಿರುತ್ತದೆಯೆ? ಮೊದಲ ವಿಷಯ, ನಿಮಗೆ ಅದರ ಬಗ್ಗೆ ಏನೂ ತಿಳಿದಿರುವುದಿಲ್ಲ. ಎರಡನೆಯ ವಿಷಯ: “ನನಗೆ ಇದು ಬೇಕಾಗಿದೆ” ಎಂಬುದನ್ನು ಭಗವಂತನಿಗೆ ಹೇಳುತ್ತ ನಿಖರವಾಗಿ ನಿಮ್ಮದೇ ಸಂಕಲ್ಪವನ್ನು ಅವನ ಮೇಲೆ ಹೇರಲು ಬಯಸುತ್ತೀರಿ. ಮತ್ತು ನಂತರ ಅದಕ್ಕಾಗಿ ಅವನಲ್ಲಿ ಬೇಡಿಕೊಳ್ಳುವುದಿಲ್ಲ: “ಅದನ್ನು ನನಗೆ ಕೊಡು” ಎನ್ನುವುದಿಲ್ಲ. ನೀವು ಹೇಳುತ್ತೀರಿ: “ನನಗೆ ಇದು ಅವಶ್ಯವಾಗಿದೆ. ಇದು ಬೇಕಾಗಿದೆಯಾದುದರಿಂದ ಅದು ಬಹಳ ಸ್ವಾಭಾವಿಕವಾಗಿ ಸ್ವಯಂಪ್ರೇರಣೆಯಿಂದ ನನ್ನ ಬಳಿ ಬರಬೇಕು, ನನಗೆ ಅವಶ್ಯವಾದದ್ದನ್ನೆಲ್ಲ ನನಗೆ ಕೊಡುವುದು ಭಗವಂತನ ಕರ್ತವ್ಯವಾಗಿರುತ್ತದೆ.”

ನಿಮಗೆ ನಿಜವಾಗಿ ಏನು ಬೇಕಾಗಿದೆ, ಅದು ಒಂದು ಭ್ರಮೆ. ಸತ್ಯವಲ್ಲದ್ದು ಎಂಬುದೂ ಕೂಡ ಸಂಭವಿಸಬಹುದು. ಮತ್ತು ಅದನ್ನು ನೀವು ಲಾಭಕ್ಕಾಗಿ ಕೊಡಕೊಳ್ಳುವ ರೂಪದಲ್ಲಿ ನಿಮ್ಮನ್ನು ಸುತ್ತುವರಿದದ್ದರಿಂದ ಕೇಳುತ್ತೀರಿ, ಭಗವಂತನತ್ತ ಹೊರಳುವುದಿಲ್ಲ. ನಿಮ್ಮ ಹಾಗೂ ಅವನ ನಡುವೆ ಯಾವ ಸಂಬಂಧವನ್ನೂ ಸೃಷ್ಟಿಸುವುದಿಲ್ಲ, ಅವನನ್ನು ಕುರಿತು ಯೋಚಿಸುವುದಿಲ್ಲ, ನಿಮ್ಮ ಮನೋಧರ್ಮದಲ್ಲಿ ಕನಿಷ್ಠ ಪ್ರಮಾಣದಲ್ಲಿರುವ ನಿಷ್ಕಪಟತನದಿಂದ ಹೊರಳುವುದಿಲ್ಲ, ಮತ್ತು ಅವನಿಂದ ಏನನ್ನೂ ಕೇಳದೆ ಇರುವುದರಿಂದ ನಿಮಗೆ ಏನನ್ನಾದರೂ ಕೊಡಲು ಅವನಿಗೆ ಕಾರಣವಿರುವುದಿಲ್ಲ.

ಆದರೆ ನೀವು ಅವನನ್ನು ಕೇಳಿದರೆ ಅವನು ಭಗವಂತನಾಗಿರುವುದರಿಂದ ನಿಮಗೆ ಅವಶ್ಯವಾದುದರ ಬಗ್ಗೆ ಸ್ವಲ್ಪ ಹೆಚ್ಚು ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಿರುತ್ತಾನೆ, ನಿಮಗೆ ಅವಶ್ಯವಾದದ್ದನ್ನು ಕೊಡುತ್ತಾನೆ. ಇಲ್ಲವೆ ನೀವು ಒತ್ತಾಯಪಡಿಸಿದರೆ ಮತ್ತು ನಮ್ಮದೇ ಸಂಕಲ್ಪವನ್ನು ಅವನ ಮೇಲೆ ಹೇರಲು ಬಯಸಿದರೆ ನಿಮಗೆ ಬೇಕಾದುದನ್ನು ಅವನು ನಿಮಗೆ ಕೊಡಬಹುದು, ಅದರಿಂದಾಗಿ ನೀವು ನಿಮ್ಮ ತಪ್ಪನ್ನು ಕಂಡುಕೊಳ್ಳುವಂತಾಗುತ್ತದೆ. ಅದು ನಿಜವಾಗಿ ನಿಮಗೆ ಬೇಕಾದ ವಿಷಯವಾಗಿರುವುದಿಲ್ಲ. ಆಗ ನೀವು ತಕರಾರು

ಮಾಡಲು ಪ್ರಾರಂಭಿಸುತ್ತೀರಿ – ವ್ಯಕ್ತಿಗತವಾಗಿ ನೀವು ಎಂದಲ್ಲ; ಎಲ್ಲ ಮಾನವ ಸತ್ತೆಗಳನ್ನು ಕುರಿತು ಮಾತನಾಡುತ್ತಿದ್ದೇನೆ. – ಮತ್ತು ನೀವು ಹೇಳುತ್ತೀರಿ: "ನನಗೆ ಹಾನಿಯನ್ನುಂಟುಮಾಡುವಂತಹದನ್ನು ಭಗವಂತ ನನಗೇಕೆ ಕೊಟ್ಟಿದ್ದಾನೆ?" ನೀವೇ ಅದನ್ನು ಕೇಳಿದ್ದಿರಿ ಎಂಬುದನ್ನು ಮರೆತುಬಿಟ್ಟಿರುತ್ತೀರಿ. ಎರಡೂ ಸಂದರ್ಭಗಳಲ್ಲಿ ಒಂದೇ ಬಗೆಯಲ್ಲಿ ತಕರಾರು ಮಾಡುತ್ತೀರಿ. ನೀವು ಕೇಳಿದ್ದನ್ನು ಭಗವಂತ ಕೊಡುತ್ತಾನೆ ಮತ್ತು ಆಗ ಅದು ಒಳ್ಳೆಯದಕ್ಕಿಂತ ಹೆಚ್ಚಾಗಿ ಹಾನಿಯನ್ನು ತರುತ್ತದೆ, ನೀವು ತಕರಾರು ಮಾಡುತ್ತೀರಿ. ಮತ್ತೆ ಅವನು ಕೊಡದೆ ಇದ್ದರೆ ಆಗಲೂ ನೀವು ತಕರಾರು ಮಾಡುತ್ತೀರಿ: "ಏನು ನನಗೆ ಅದು ಅವಶ್ಯವಿದೆ ಎಂದು ಹೇಳಿದ್ದೆ, ಮತ್ತು ಅವನು ಅದನ್ನು ನನಗೆ ಕೊಡುತ್ತಿಲ್ಲ." ಎರಡೂ ಸಂದರ್ಭಗಳಲ್ಲಿ ನೀವು ತಕರಾರು ಮಾಡುತ್ತೀರಿ, ಬಡ ಭಗವಂತನನ್ನು ಎರಡೂ ಸಂದರ್ಭಗಳಲ್ಲಿ ದೂಷಿಸಲಾಗಿರುತ್ತದೆ. ಕೇವಲ ಅದೆಲ್ಲದರ ಬದಲಾಗಿ ನಿಮ್ಮಂತರಂಗದಲ್ಲಿ ಒಂದು ಅಭೀಪ್ಸೆ, ಪ್ರೇರಣೆ, 'ತತ್'ನ್ನು ಕಂಡುಕೊಳ್ಳಲು ಅತ್ಯುತ್ಸಾಹದ ಆವಶ್ಯಕತೆ ಇದ್ದಾಗ, ಅದನ್ನು ಹೆಚ್ಚು ಕಡಿಮೆ ಸ್ಪಷ್ಟವಾಗಿ ನಿಮ್ಮ ಸತ್ತೆಯ ದೈವೀ ಸತ್ಯವೆಂದು ಕಲ್ಪನೆ ಮಾಡಿಕೊಂಡಿರುತ್ತೀರಿ. ಅದು ಎಲ್ಲ ವಿಷಯಗಳ ಮೂಲವಾಗಿರುತ್ತದೆ, ಪರಮೋಚ್ಚ ಒಳ್ಳೆಯದಾಗಿರುತ್ತದೆ, ನಾವು ಬಯಸುವುದಕ್ಕೆಲ್ಲ ಉತ್ತರವಾಗಿರುತ್ತದೆ, ಎಲ್ಲ ಸಮಸ್ಯೆಗಳಿಗೆ ದೈವೀ ಪರಿಹಾರವಾಗಿರುತ್ತದೆ, ಈ ಗಾಢ ಆವಶ್ಯಕತೆ ನಿಮ್ಮಲ್ಲಿದ್ದರೆ ಮತ್ತು ಅದನ್ನು ಸಿದ್ಧಿಸಿಕೊಳ್ಳಲು ಅಭೀಪ್ಸೆಪಡುತ್ತಿದ್ದರೆ ನೀವು ಇನ್ನು ಮುಂದೆ ಭಗವಂತನಿಗೆ "ನನಗೆ ಇದನ್ನು ಕೊಡು, ನನಗೆ ಅದನ್ನು ಕೊಡು" ಇಲ್ಲವೆ "ನನಗೆ ಇದು ಅವಶ್ಯವಿದೆ, ನಾನದನ್ನು ದೊರಕಿಸಲೇಬೇಕು" ಎಂದು ಹೇಳುವುದಿಲ್ಲ. "ನನಗೆ ಅವಶ್ಯವಿದ್ದನ್ನು ಮಾಡು ಮತ್ತು ನನ್ನ ಸತ್ತೆಯ ದೈವೀ ಸತ್ಯದತ್ತ ನನ್ನನ್ನು ಕರೆದುಕೊಂಡು ಹೋಗು. ನಿನ್ನ ಪರಮೋಚ್ಚ ದೈವೀ ವಿವೇಕದಿಂದ ಯಾವುದು ನನಗೆ ಅವಶ್ಯವಾಗಿದೆ ಎಂದು ನೋಡುವಿಯೋ ಅದನ್ನು ನನಗೆ ಕೊಡು."

ಮತ್ತು ಆಗ ನೀವು ತಪ್ಪು ಭಾವನೆ ಹೊಂದಿರುವುದಿಲ್ಲ ಎಂಬುದರ ಬಗ್ಗೆ ನಿಶ್ಚಿತತೆಯಿಂದ ಇರುತ್ತೀರಿ. ಮತ್ತು ಅವನು ನಿಮಗೆ ಹಾನಿಯನ್ನುಂಟು ಮಾಡುವಂತಹದೇನನ್ನೂ ಕೊಡುವುದಿಲ್ಲ.

ಅಲ್ಲಿ ಇನ್ನೂ ಉಚ್ಚತರವಾದ ಹೆಜ್ಜೆಯೊಂದಿದೆ, ಆದರೆ ಅದರೊಡನೆ ಪ್ರಾರಂಭಿಸುವುದು ಸ್ವಲ್ಪ ಹೆಚ್ಚು ಕಠಿಣವಾದದ್ದು.

"ನನಗೆ ಇದು ಅವಶ್ಯವಾಗಿದೆ, ಅದನ್ನು ನನಗೆ ಕೊಡು" ಎಂದು ಭಗವಂತನಿಗೆ ಹೇಳುವುದಕ್ಕಿಂತ ಮನುಷ್ಯ ಹೆಚ್ಚು ನಿಜವಾದ ಸಮೀಪಿಸುವಿಕೆಯಲ್ಲಿ ಈಗಾಗಲೆ ಇರುತ್ತಾನೆ. ಏಕೆಂದರೆ ಅತಿ ಕಡಿಮೆ ಜನರು ತಮಗೇನು ಅವಶ್ಯವಿದೆ ನಿಜವಾಗಿ ತಿಳಿದುಕೊಂಡಿರುತ್ತಾರೆ. ಮತ್ತು ಅದಕ್ಕೆ ಪ್ರಮಾಣವೆಂದರೆ ಅವರು ಯಾವಾಗಲೂ ಅವರು ತಮ್ಮ ಆಸೆಗಳ ನೆರವೇರಿಕೆಯನ್ನು ಬೆಂಬತ್ತಿರುತ್ತಾರೆ, ಅವರ ಎಲ್ಲ ಪ್ರಯತ್ನ ಅದರ ಮೇಲೆ ಬಾಗಿಕೊಂಡಿರುತ್ತದೆ. ಅವರ ಆಸೆಗಳಲ್ಲಿ ಒಂದು ನೆರವೇರಿಕೆ ಕಂಡುಕೊಂಡ ಪ್ರತಿಸಲ ಅವರು ನಿರಾಶೆಗೊಳಗಾಗುತ್ತಾರೆ. ಅವರು ಇನ್ನೊಂದರತ್ತ ಸಾಗಿ ಹೋಗುತ್ತಾರೆ.

ಬಹಳಷ್ಟು ಅರಸಿದ ನಂತರ, ಬಹಳಷ್ಟು ತಪ್ಪು ಮಾಡಿದ ನಂತರ ಬಹಳಷ್ಟು ವೇದನೆಯನ್ನು ಅನುಭವಿಸಿ ನಿರಾಶೆಗೊಳಗಾದ ನಂತರ ಆಗ ಕೆಲವೊಮ್ಮೆ ಮನುಷ್ಯ ವಿವೇಕಿಯಾಗಲು ಪ್ರಾರಂಭಿಸುತ್ತಾನೆ, ಇದೆಲ್ಲದರ ಹೊರಗೆ ಎಂದರೆ ತನ್ನದೇ ಅಜ್ಞಾನದ ಹೊರಗೆ ಬರಲು ಮಾರ್ಗವೊಂದಿದೆಯೆ ಎಂದು ಆಶ್ಚರ್ಯ ಪಡುತ್ತಾನೆ.

ಮತ್ತು ಆಗ ಆ ಕ್ಷಣದಲ್ಲಿ ಮನುಷ್ಯ ಇದನ್ನು ಕೈಕೊಳ್ಳಬಹುದು (ಶ್ರೀಮಾತೆಯವರು ತೋಳುಗಳನ್ನು ತೆರೆದಿರಿಸಿಸುತ್ತಾರೆ): "ನಾನಿಲ್ಲಿದ್ದೇನೆ, ನನ್ನನ್ನು ಕೈಗೆತ್ತಿಕೋ ಮತ್ತು ನಿಜವಾದ ಮಾರ್ಗದ ಮೆಲೆ ಕರೆದುಕೊಂಡು ಹೋಗು."

ಆಗ ಎಲ್ಲವೂ ಸರಿಯಾಗಿ ಸಾಗಲು ಪ್ರಾರಂಭಿಸುತ್ತದೆ.

**(CWM, 8/121–124)** **– ಶ್ರೀಮಾತೆ**

*

## ದೈವೀ ಪ್ರೇಮದ ಹಾಗೂ ಪೂಜೆಯ ಸಂಪೂರ್ಣ ಕ್ರಿಯೆ

ದೈವೀ ಪ್ರೇಮದ ಹಾಗೂ ಪೂಜೆಯ ಸಂಪೂರ್ಣ ಕ್ರಿಯೆಯಲ್ಲಿ ಮೂರು ಭಾಗಗಳಿವೆ ಎಂದು ಹೇಳಬಹುದು, ಅವು ಇಡಿಯಾಗಿ ಏಕೈಕವಾದುದರ ಅಭಿವ್ಯಕ್ತಿಗಳು – ಕ್ರಿಯೆಯಲ್ಲಿ ವ್ಯಾವಹಾರಿಕ ರೂಪದ ಪೂಜೆ, ಕ್ರಿಯೆಯ ರೂಪದಲ್ಲಿ ಸಾಂಕೇತಿಕ ಪೂಜೆ, ಆ ಕ್ರಿಯೆ ಒಂದು ದೃಷ್ಟಿಯನ್ನು ಮತ್ತು ಭಗವಂತನೊಡನೆ ಒಂದು ಸಂಬಂಧವನ್ನು ಅರಸುವುದು, ಆಂತರಿಕ ಆರಾಧನೆ ಮತ್ತು ಏಕತೆಗಾಗಿ ಹಾತೊರೆತ ಇಲ್ಲವೆ ಹೃದಯದಲ್ಲಿ, ಜೀವದಲ್ಲಿ ಹಾಗೂ ಆತ್ಮದಲ್ಲಿ ಏಕತೆಯ ಭಾವನೆ."

**ಪ್ರಶ್ನೆ :** ಮೊದಲಿನ ಎರಡು ಭಾಗಗಳನ್ನು ನಾನು ತಿಳಿದುಕೊಂಡಿಲ್ಲ.

**ಶ್ರೀಮಾತೆ :** ಆ ಕ್ರಿಯೆಗೆ ಕೇವಲ ಭೌತಿಕ ರೂಪವಿದೆ. ಪಂಥೀಯ ದರ್ಮಗಳು ಅನುಸರಿಸುವ ರೂಪಗಳಿವೆ, ಅವುಗಳಲ್ಲಿ ಒಂದು ವಿಶಿಷ್ಟ ಸಂಜ್ಞೆ, ಒಂದು ವಿಶಿಷ್ಟ ಚಲನೆ ಇವು ಮುಡಿಪಾಗಿರಿಸಿಕೊಳ್ಳುವುದಕ್ಕೆ ಸಾಧನಗಳಾಗಿವೆ. ಅದು ಕೇವಲ ಭೌತಿಕವಾದದ್ದು. ಉದಾಹರಣೆಗೆ ದೀಪದ ಕಡ್ಡಿ ಉರಿಸುವುದು, ಅರ್ಪಿಸಬೇಕಾದವುಗಳನ್ನು ವ್ಯವಸ್ಥೆಗೆ ಒಳಪಡಿಸುವುದು, ಇಲ್ಲವೆ ಒಂದು ದೇಗುಲದ ಕಾರ್ಯವನ್ನು ನೋಡಿಕೊಳ್ಳುವುದು, ಮೂರ್ತಿಯೊಂದನ್ನು ಅಲಂಕರಿಸುವುದು, ನಿಜವಾಗಿ ಇಂತಹ ಎಲ್ಲ ಭೌತಿಕ ಕ್ರಿಯೆಗಳು.

ಎರಡನೆಯ ಭಾಗ ಒಂದು ಬಗೆಯ ಮಾನಸಿಕ ಮುಡುಪಾಗಿರಿಸಿ–ಕೊಳ್ಳುವಿಕೆಯಾಗಿದೆ. ಅದು ಕೈಕೊಂಡ ಕ್ರಿಯೆಯನ್ನು ಸಂಕೇತವನ್ನಾಗಿ ಮಾಡುತ್ತದೆ. ಕೇವಲ ಧೂಪ ದ್ರವ್ಯವನ್ನು ಉರಿಸುವುದರಿಂದ ಮನುಷ್ಯ ತೃಪ್ತಿ ಪಡೆಯುವುದಿಲ್ಲ. ಆದರೆ ಧೂಪ ದ್ರವ್ಯವನ್ನು ಉರಿಸುವಾಗ ಈ ಕ್ರಿಯೆಯ ಸಂಜ್ಞೆಯನ್ನು ಸಾಂಕೇತಿಕವಾದದ್ದನ್ನಾಗಿ ಮಾಡುತ್ತಾನೆ – ಉದಾಹರಣೆಗೆ ದೇಹದಲ್ಲಿ ಪ್ರಜ್ವಲಿಸುವಂತೆ ಮಾಡುವ ಪ್ರಜ್ಞೆಯ ಅಭೀಪ್ಸೆಯ ಸಂಜ್ಞೆ, ಇಲ್ಲವೆ ಆ ಜ್ವಾಲೆಯಲ್ಲಿ ಪರಿಶುದ್ಧಗೊಳಿಸುವ ಸಂಜ್ಞೆ, ಎಂದರೆ ಮೊದಲು ಕ್ರಿಯೆ ಕೈಕೊಳ್ಳುವುದು ಮತ್ತು ನಂತರ ಈ ಕ್ರಿಯೆಯ ಮತ್ತು ನಂತರ ಈ ಕ್ರಿಯೆಯಲ್ಲಿರುವ ಸಂಕೇತ ಮತ್ತು ಕೈಕೊಂಡದ್ದರ ಸಾಂಕೇತಿಕ ತಿಳುವಳಿಕೆ ಪಡೆಯುವುದು.

ಮತ್ತು ಕೊನೆಯದಾಗಿ ಇವೆರಡರ ಹಿಂದೆ ಏಕತೆಗಾಗಿ ಒಂದು ಅಭೀಪ್ಸೆ, ಇದೆಲ್ಲ ನೀವು ಮಾಡಿದ ಈ ಕ್ರಿಯೆಗಳು, ಅವುಗಳಿಂದ ನೀವು ಮಾಡಿರುವ ಸಂಕೇತಗಳು ಭಗವಂತನಿಗೆ ಹೆಚ್ಚು ಹತ್ತಿರ ಎಳೆದುಕೊಂಡು ಹೋಗಲು ಮತ್ತು ಅವನೊಡನೆ ಏಕವಾಗಲು ನೀವು ಯೋಗ್ಯರಾಗುವಂತೆ ಮಾಡುವುದು ಇದಕ್ಕೆ ಕೇವಲ ಒಂದು ಸಾಧನವಾಗಿರುತ್ತದೆ.

ಕ್ರಿಯೆ ಸಂಪೂರ್ಣವಾಗಲು ಈ ಮೂರು ವಿಷಯಗಳು ಅಲ್ಲಿರಬೇಕು: ಎಂದರೆ ಕೇವಲ ಭೌತಿಕವಾಗಿರುವ ಏನೋ ಒಂದು, ಮಾನಸಿಕವಾದ ಏನೋ ಒಂದು ಮತ್ತು ಚೈತ್ಯಾತ್ಮಿಕವಾದ ಏನೋ ಒಂದು, ಚೈತ್ಯಾತ್ಮಿಕ ಅಭೀಪ್ಸೆಯಿರಬೇಕು. ಈ ಮೂರರಲ್ಲಿ ಎರಡು ವಿಷಯಗಳಿಲ್ಲದೆ ಕೇವಲ ಒಂದೇ ಇದ್ದರೆ, ಅದು ಸಂಪೂರ್ಣವಾಗಿರುವುದಿಲ್ಲ. ನಿಯಮವೆಂದಾಗಿ ಆ ಮೂರು ವಿಷಯಗಳು

ಪ್ರಜ್ಞಾಪೂರ್ವಕವಾಗಿ ಅಪರೂಪಕ್ಕೆ ಸಂಯೋಜನೆಗೆ ಒಳಗಾಗಿರುತ್ತವೆ, ಅದು ಅಸಾಧಾರಣ ನಿಷ್ಕಪಟತನ ಹಾಗೂ ಮುಡುಪಾಗಿರಿಸಿಕೊಳ್ಳುವಿಕೆ ಸತ್ತೆಗಳನ್ನು ಉತ್ಪಾದಿಸುತ್ತದೆ: ಇಡಿಯಾದ ಸತ್ತೆ, ಅದರ ಎಲ್ಲ ಭಾಗಗಳಲ್ಲಿ ಕ್ರಿಯೆಯಲ್ಲಿ ಭಾಗವಹಿಸುತ್ತದೆ.

**(CWM, 8/234–35)** **– ಶ್ರೀಮಾತೆ**

*

**ಚೈತ್ಯಾತ್ಮಿಕ ಅಗ್ನಿ ಪ್ರಜ್ವಲಿಸುವಂತೆ ಮಾಡುವುದು**

**ಪ್ರಶ್ನೆ :** *ಮಧುರ ಮಾತೆಯವರೆ, ಇಲ್ಲಿ ಶ್ರೀ ಅರವಿಂದರು ಹೀಗೆ ಬರೆದಿದ್ದಾರೆ: "ಚೈತ್ಯಾತ್ಮಿಕ ಅಗ್ನಿ ಪ್ರಜ್ವಲಿಸುವಂತೆ ಮಾಡಬೇಕು, ಅದರಲ್ಲಿ ಎಲ್ಲದರ ಮೇಲೆ ಭಗವಂತನ ಹೆಸರಿನ್ನಿರಿಸಿ ಚೆಲ್ಲಿಕೊಡಬೇಕು."*

**ಪ್ರಶ್ನೆ :** *ಚೈತ್ಯಾತ್ಮಿಕ ಅಗ್ನಿ ಯಾವಾಗಲೂ ಪ್ರಜ್ವಲಿಸುವಂತೆ ಮಾಡಿರುವುದಿಲ್ಲವೆ?*

**ಶ್ರೀಮಾತೆ :** ಅದು ಯಾವಾಗಲೂ ಪ್ರಜ್ವಲಿಸುವಂತೆ ಮಾಡಲಾಗಿರುವುದಿಲ್ಲ.

**ಪ್ರಶ್ನೆ :** *ಅದು ಪ್ರಜ್ವಲಿಸುವಂತೆ ಹೇಗೆ ಮಾಡಬೇಕು?*

**ಶ್ರೀಮಾತೆ :** ಅಭೀಪ್ಸೆಯ ಮೂಲಕ.

ಪ್ರಗತಿಗಾಗಿ ಸಂಕಲ್ಪ, ಪರಿಪೂರ್ಣತೆಗಾಗಿ ಇರುವ ಪ್ರೇರಣೆ ಇವುಗಳ ಮೂಲಕ ಕೈಕೊಳ್ಳಬಹುದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರಗತಿಗಾಗಿ ಹಾಗೂ ಸ್ವ–ಪರಿಪೂರ್ಣತೆಗಾಗಿ ಸಂಕಲ್ಪ ಆ ಜ್ವಾಲೆ ಪ್ರಜ್ವಲಿಸುವಂತೆ ಮಾಡುತ್ತವೆ. ಪ್ರಗತಿಗಾಗಿ ಸಂಕಲ್ಪವಿರಬೇಕು. ದೃಢವಾದ ಸಂಕಲ್ಪವಿದ್ದವರು ಅದನ್ನು ಆಧ್ಯಾತ್ಮಿಕ ಪ್ರಗತಿಯತ್ತ, ಪರಿಶುದ್ಧಗೊಳ್ಳುವಿಕೆಯತ್ತ ಹೊರಳಿಸಿದಾಗ ತಮ್ಮೊಳಗೆ ಆ ಜ್ವಾಲೆ ಸ್ವಯಂಪ್ರೇರಿತವಾಗಿ ಪ್ರಜ್ವಲಿಸುವಂತೆ ಮಾಡುತ್ತಾರೆ. ಮನುಷ್ಯ ಚಿಕಿತ್ಸೆಗೆ ಒಳಪಡಿಸಬೇಕೆಂದು ಬಯಸುವ ಪ್ರತಿಯೊಂದು ದೋಷವನ್ನು ಇಲ್ಲವೆ ಅವನು ಮಾಡಬೇಕೆಂದು ಬಯಸುವ ಪ್ರತಿಯೊಂದು ಪ್ರಗತಿಯನ್ನು, ಅದೆಲ್ಲವನ್ನು ಆ ಜ್ವಾಲೆಯಲ್ಲಿ ಚೆಲ್ಲಿಕೊಟ್ಟರೆ ಅದು ಹೊಸ ಗಾಢತೆಯಿಂದ ಪ್ರಜ್ವಲಿಸುತ್ತದೆ. ಮತ್ತು ಇದು ಒಂದು ಪ್ರತೀಕವಲ್ಲ, ಅದು ಸೂಕ್ಷ್ಮ ಭೌತಿಕದಲ್ಲಿ ಒಂದು ವಾಸ್ತವ ಸಂಗತಿಯಾಗಿದೆ. ಆ ಜ್ವಾಲೆ ಬೆಚ್ಚಗಿರುವ ಭಾವನೆಯನ್ನು ಮನುಷ್ಯ ತಂದುಕೊಳ್ಳಬಹುದು, ಆ ಜ್ವಾಲೆಯ ಪ್ರಕಾಶವನ್ನು ಸೂಕ್ಷ್ಮ ಭೌತಿಕದಲ್ಲಿ

ನೋಡಬಹುದು. ಮನುಷ್ಯ ಮುಂದುವರಿದುಕೊಂಡು ಹೋಗುವುದಕ್ಕೆ ತಡೆಯನ್ನು ಉಂಟುಮಾಡುವ ಏನೋ ಒಂದಿದ್ದಾಗ ಮತ್ತು, ಅದನ್ನು ಈ ಜ್ವಾಲೆಯಲ್ಲಿ ಚೆಲ್ಲಿಕೊಟ್ಟಾಗ ಅದು ಪ್ರಜ್ವಲಿಸಲು ಪ್ರಾರಂಭಿಸುತ್ತದೆ ಮತ್ತು ಜ್ವಾಲೆ ಹೆಚ್ಚು ಗಾಢವಾಗುತ್ತದೆ.

**(CWM, 8/251)** **– ಶ್ರೀಮಾತೆ**

*

**ತೊಂದರೆಯಲ್ಲಿಯ ಮಾಧುರ್ಯ ಹಾಗೂ ಸಂತೋಷ**

"ಏಕೆಂದರೆ ಭಕ್ತಿ ಕ್ರಿಯೆಗಳಲ್ಲಿ ಮೈವೆತ್ತುವುದರಿಂದಾಗಿ ತನ್ನದೇ ಮಾರ್ಗವನ್ನು ವಿಶಾಲ, ಪೂರ್ಣ ಹಾಗೂ ಕ್ರಿಯಾಶೀಲವಾದದ್ದನ್ನಾಗಿ ಮಾಡುತ್ತದೆ ಅಷ್ಟೇ ಅಲ್ಲ. ಆದರೆ ಒಮ್ಮೆಗೆ ಜಗತ್ತಿನ ಹೆಚ್ಚು ಕಠಿಣವಾದ ಕ್ರಿಯೆಗಳಲ್ಲಿ ದೈವೀ ಭಾವೋದ್ರೇಕದ ಅಂಶವನ್ನು ತರುತ್ತದೆ, ಈ ಅಂಶ ಪ್ರಾರಂಭದಲ್ಲಿ ಉಪಸ್ಥಿತವಿರುವುದಿಲ್ಲ, ಆಗ ಅದು ಕೇವಲ ವೈರಾಗ್ಯವಿರುವ ಆಧ್ಯಾತ್ಮಿಕ ಸಂಕಲ್ಪವಾಗಿರುತ್ತದೆ. ಅದನ್ನು ಅನುಸರಿಸಿ ಬರುವ ಅದು ಹೋರಾಡುವ, ಮೇಲಕ್ಕೆತ್ತುವ ಉದ್ರೇಕ ಹಾಗೂ ಕಡಿದಾದ ಹೆಚ್ಚು ಕಡಿಮೆ ಲಂಬವಾದ ಆರೋಹಣವಾಗಿರುತ್ತದೆ. ಹೃದಯ ಇನ್ನೂ ನಿದ್ರೆಯಲ್ಲಿರುತ್ತದೆ ಇಲ್ಲವೆ ನಿಶ್ಚಲನೀರವತೆಗೆ ಬದ್ಧವಾಗಿರುತ್ತದೆ, ದೈವೀ ಪ್ರೇಮದ ಅಂಶ ಮನೋಭಾವ ಪ್ರವೇಶ ಪಡೆಯಬಲ್ಲದುದಾದರೆ ಕಠಿಣತೆಯ ರೀತಿ ಕುಗ್ಗುತ್ತದೆ, ಉದ್ವೇಗ ಹಗುರಾಗುತ್ತದೆ, ತೊಂದರೆ ಹಾಗೂ ಹೋರಾಟಗಳ ತಿರುಳಿನಲ್ಲಿಯೂ ಕೂಡ ಮಾಧುರ್ಯ ಹಾಗೂ ಸಂತೋಷಗಳಿರುತ್ತವೆ."

**ಪ್ರಶ್ನೆ :** *ಮನುಷ್ಯ ತೊಂದರೆಯಲ್ಲಿದ್ದಾಗ ಮಾಧುರ್ಯ ಹಾಗೂ ಸಂತೋಷ ಇರುವ ಭಾವನೆಯನ್ನು ಹೇಗೆ ಹೊಂದಬಲ್ಲ?*

**ಶ್ರೀಮಾತೆ :** ನಿಖರವಾಗಿ, ತೊಂದರೆ ಅಹಂಭಾವದ್ದು ಹಾಗೂ ವೈಯಕ್ತಿಕವಾದುದು ಆದಾಗ, ಮನುಷ್ಯ ಅದರ ಅರ್ಪಣೆ ಮಾಡುತ್ತಾನೆ ಮತ್ತು ಪರಿಶುದ್ಧತೆಯ ಜ್ವಾಲೆಯಲ್ಲಿ ಚೆಲ್ಲಿಕೊಡುತ್ತಾನೆ ಮತ್ತು ಕೂಡಲೆ ಪ್ರಗತಿ ಸಾಧಿಸಿದ ಸಂತೋಷದ ನೆಲೆ ಅಲ್ಲಿರುತ್ತದೆ.

ನಿರಾಶೆಗೊಳಗಾಗುವುದರ ಹಾಗೂ ಸಂಕಟಪಡುವುದರ ಬದಲಾಗಿ ಮನುಷ್ಯ ಸ್ಪಷ್ಟವಾಗಿ ಅದನ್ನೇ ಕೈಕೊಳ್ಳಬೇಕು. ಮನುಷ್ಯ ಅರ್ಪಣೆ ಮಾಡಿ ನಿಷ್ಕಪಟತನದಿಂದ

ಪರಿವರ್ತನೆಗಾಗಿ ಮತ್ತು ಪರಿಶುದ್ಧತೆಗಾಗಿ ಅಭೀಪ್ಸೆ ಪಟ್ಟರೆ ಹೃದಯದ ಆಳಗಳಲ್ಲಿ ಕೂಡಲೆ ಸಂತೋಷ ಜಿಗಿದು ಬರುತ್ತಿರುವ ಭಾವನೆ ತಂದುಕೊಳ್ಳುತ್ತಾನೆ. ತೊಂದರೆ ಭವ್ಯವೇದನೆಯದು ಇದ್ದಾಗಲೂ ಕೂಡ ಅವನು ಇದನ್ನು ಹೆಚ್ಚು ಯಶಸ್ಸು ದೊರಕಿಸುವಂತೆ ಮಾಡಬಹುದು. ವೇದನೆಯ ಹಿಂದೆ, ಅದು ಎಷ್ಟೇ ಗಾಢವಾಗಿರಲಿ ದೈವೀ ಸಂತೋಷವಿರುತ್ತದೆ ಎಂಬುದರ ಅರಿವು ಪಡೆಯುತ್ತಾನೆ.

**(CWM, 8/251–52)** **– ಶ್ರೀಮಾತೆ**

*

**ಅನಂತನಿಂದ ಆಯ್ದುಕೊಂಡವರು**

**ಪ್ರಶ್ನೆ :** *ಇಲ್ಲಿ ಹೀಗೆ ಹೇಳಲಾಗಿದೆ: "ಅನಂತನನ್ನು ಯಾರು ಆಯ್ದುಕೊಂಡಿ–ರುತ್ತಾರೋ ಅವರನ್ನು ಅನಂತನೇ ಆಯ್ದುಕೊಂಡಿರುತ್ತಾನೆ."*

**ಶ್ರೀಮಾತೆ :** ಅದು ಅತ್ಯದ್ಭುತ ವಾಕ್ಯ!

ಅದು ಪರಿಪೂರ್ಣವಾಗಿ ಸತ್ಯವಾದದ್ದು "ಯೋಚನೆಗಳು ಹಾಗೂ ಇಣುಕು ನೋಟಗಳು" ಎಂಬ ಗ್ರಂಥದಲ್ಲಿಯೂ ಕೂಡ ಈ ರೀತಿಯ ಒಂದು ವಾಕ್ಯವಿದೆ, ಅಲ್ಲಿ ಅನಂತನ ಬದಲಾಗಿ ದೇವ ಎಂಬ ಶಬ್ದವನ್ನು ಶ್ರೀ ಅರವಿಂದರು ಉಪಯೋಗಿಸುತ್ತಾರೆ. ಆದರೆ ವಿಚಾರ ಅದೇ ಆಗಿದೆ – ದೇವ ನಿನ್ನನ್ನು ಆಯ್ದುಕೊಂಡಿದ್ದಾನೆ, ಭಗವಂತ ನಿನ್ನನ್ನು ಆಯ್ದುಕೊಂಡಿದ್ದಾನೆ ಆ ಕಾರಣದಿಂದಾಗಿಯೆ ನೀನು ಅವನ ಹಿಂದೆ ಓಡುತ್ತಿರುವಿ.

ಇದು ಈ ಬಗೆಯ ಗಾಢನಂಬಿಕೆಯನ್ನು, ನಿಶ್ಚಿತತೆಯನ್ನು ಕೊಡುತ್ತದೆ, ಅದನ್ನು ಅದೃಷ್ಟಪೂರ್ವದಲ್ಲಿ (predestines) ಇರಿಸಲಾಗಿರುತ್ತದೆ. ಮನುಷ್ಯ ಅದನ್ನು ಹೊಂದಿದ್ದರೆ ತೊಂದರೆಗಳು ಗುಡ್ಡದಷ್ಟಿರಲಿ ಮನುಷ್ಯ ಯಶಸ್ಸು ಗಳಿಸುವುದನ್ನು ನಿಶ್ಚಿತಪಡಿಸಲಾಗಿರುತ್ತದೆ ಹಾಗಾಗಿ ತೊಂದರೆಗಳಿಗೆ ಯಾವ ಮಹತ್ವವಿದೆ? ಇದು ಎಲ್ಲ ತೊಂದರೆಗಳನ್ನು ಎದುರಿಸಲು ದುರ್ದಮನೀಯವಾದ ಧೈರ್ಯವನ್ನು ಮತ್ತು ಎಲ್ಲ ಪರೀಕ್ಷಾ ಪ್ರಕ್ರಿಯೆಗಳನ್ನು ತಾಳಿಕೊಳ್ಳುವ ತಾಳ್ಮೆಯನ್ನು ನಿಮಗೆ ಕೊಡುತ್ತದೆ? ನೀವು ಯಶಸ್ಸನ್ನು ಗಳಿಸುವುದು ನಿಶ್ಚಿತ.

ಮತ್ತು ಅದೊಂದು ವಾಸ್ತವತೆ – ವಾಸ್ತವದಲ್ಲಿ ಅದು ಆ ರೀತಿಯದಾಗಿದೆ: ನೀವು ಅದರ ಬಗ್ಗೆ ಯೋಚಿಸಿದ ಕ್ಷಣದಲ್ಲಿ ನೀವು ಅದರ ಬಗ್ಗೆ

ಯೋಚಿಸಿರುತ್ತೀರಿ. ಏಕೆಂದರೆ ಯಾರೋ ಒಬ್ಬರು ನಿಮ್ಮ ಬಗ್ಗೆ ಯೋಚಿಸಿರುತ್ತಾರೆ ಮತ್ತು ನಿಮ್ಮನ್ನು ಒಮ್ಮೆ ಆಯ್ದುಕೊಂಡ ನಂತರ ನೀವು ಆ ವಿಷಯದ ಬಗ್ಗೆ ನಿಶ್ಚಿತತೆಯಿಂದಿರುತ್ತೀರಿ. ಹಾಗಾಗಿ ಸಂಶಯಗಳು, ಹಿಂದು ಮುಂದೆ ನೋಡುವಿಕೆಗಳು, ನಿರಾಶೆಗಳು, ಅನಿಶ್ಚಿತತೆಗಳು ಇವೆಲ್ಲ ಬಹಳಷ್ಟು ರೀತಿಯಲ್ಲಿ ಕೇವಲ ಸಮಯವನ್ನು ಹಾಗೂ ಚೈತನ್ಯವನ್ನು ಹಾಳುಮಾಡುತ್ತವೆ, ಅದು ಯಾವ ಬಗೆಯಲ್ಲೂ ಪ್ರಯೋಜನಕಾರಿಯಾಗಿರುವುದಿಲ್ಲ. ಮನುಷ್ಯ ಕೇವಲ ಒಮ್ಮೆ ತನ್ನಂತರಂಗದಲ್ಲಿ "ಅಹಾ! ಇದು ನನಗೆ ದೈವೀ ಸತ್ಯವಾಗಿದೆ" ಎಂಬ ಭಾವನೆ ತಂದುಕೊಂಡಾಗ ಅದು ಮುಗಿದು ಹೋಗಿರುತ್ತದೆ, ನೆಲೆಗೊಂಡಿರುತ್ತದೆ. ಬಳಸಿಲ್ಲದ ಅಡವಿಯಲ್ಲಿ ನಿಮ್ಮ ದಾರಿಯನ್ನು ಕತ್ತರಿಸಿಕೊಂಡು ಹೋಗುವುದಕ್ಕೆ ಹಲವಾರು ವರ್ಷಗಳನ್ನು ಕಳೆದರೂ ಅದು ಯಾವ ಮಹತ್ವವಿರುವ ವಿಷಯವೂ ಅಲ್ಲ. – ಅದು ಮುಗಿದು ಹೋಗಿರುತ್ತದೆ, ನೆಲೆಗೊಂಡಿರುತ್ತದೆ. ಆ ಕಾರಣದಿಂದಾಗಿಯೆ ಒಂದು ದಿನ ನಾನು ನಿಮಗೆ ಹೇಳಿದ್ದೆ "ಒಟ್ಟಿನಲ್ಲಿ ನೀವೆಲ್ಲ ಇಲ್ಲಿದ್ದೀರಿ, ಏಕೆಂದರೆ ಅದು ಎಲ್ಲಿಯೋ ಒಂದೆಡೆ ಇರಲಿ ಎಂದು ನೀವು ಬಯಸಿದ್ದಿರಿ, ಅದರರ್ಥ ಭಗವಂತ ಅದು ಹೀಗೆ ನಿಮ್ಮಲ್ಲಿರಲಿ ಎಂದು ಬಯಸಿದ್ದ. ಕೆಲವರಿದ್ದಾರೆ, ಅವರು ಬಹಳ ನೇರವಾದ ಮಾರ್ಗವನ್ನು ಅನುಸರಿಸುತ್ತಾರೆ ಮತ್ತು ತೀವ್ರಗತಿಯಿಂದ ತಲುಪುತ್ತಾರೆ. ಇತರರಿದ್ದಾರೆ ಅವರು ತೊಳಸುಬಳಸಿನ ಮಾರ್ಗವನ್ನು ಪ್ರೀತಿಸುತ್ತಾರೆ, ಅದು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಆದರೆ ಅಲ್ಲಿ ಕೊನೆಯೆಂಬುದಿದೆ, ಗುರಿ ಅಲ್ಲಿದೆ. ನಾನು ನನ್ನ ಅನುಭವದಲ್ಲಿ ಕಂಡುಕೊಂಡಿದ್ದೇನೆಂದರೆ ಯಾವುದೇ ಮನುಷ್ಯ ತನ್ನ ಜೀವನದಲ್ಲಿ ಶ್ರೇಷ್ಠ ಪ್ರಚೋದನೆಯತ್ತ – ಅದನ್ನು ಅವನು ಏನೆಂದೇ ಹೇಳಲಿ ಮಾತಿನ ಅನುಕೂಲತೆಗಾಗಿ ನಾನು ಅದನ್ನು ಭಗವಂತನತ್ತ ಎಂದು ಕರೆಯುತ್ತೇನೆ, ಕನಿಷ್ಠ ಪಕ್ಷ ಒಮ್ಮೆ ಅವನ ಜೀವನದಲ್ಲಿ ಹೊರಳಿದ್ದರೆ ಅವನು ನಿಶ್ಚಿತವಾಗಿ ತಲುಪಲು ಇರದೇ ಇರುವುದು ಸಾಧ್ಯವಿಲ್ಲ. ಕೆಲವೊಮ್ಮೆ ಅವನು ಭಗವಂತನತ್ತ ತನ್ನ ಬೆನ್ನನ್ನು ಹೊರಳಿಸಿರಬಹುದು, ಅದು ಮಹತ್ವದ್ದಲ್ಲ – ಅವನು ನಿಶ್ಚಿತವಾಗಿ ತಲುಪುತ್ತಾನೆ. ಅವನು ಹೆಚ್ಚು ಕಡಿಮೆ ಹೋರಾಡಬೇಕಾಗಬಹುದು, ತೊಂದರೆಗಳನ್ನು ಎದುರಿಸಬೇಕಾಗಬಹುದು, ಒಂದು ದಿನ ಅವನು ಯಶಸ್ವಿಯಾಗುವುದು ನಿಶ್ಚಿತ. ಆಯ್ದುಕೊಂಡದ್ದು ಆತ್ಮ, ಅದು ಪ್ರಜ್ಞೆಯಿಂದಿದೆ, ಏಕೆಂದರೆ ಅದರ ಗಳಿಗೆ ಸನ್ನಿಹಿತವಾಗಿದೆ. ಒಮ್ಮೆ ಅದರ ಗಳಿಗೆ ಸನ್ನಿಹಿತವಾದ ನಂತರ, ಸರಿ, ಪರಿಣಾಮ

ಹೆಚ್ಚು ಕಡಿಮೆ ತೀವ್ರಗತಿಯಿಂದ ಅನುಸರಿಸುತ್ತದೆ. ನೀವು ಇದನ್ನು ಕೆಲವೇ ತಿಂಗಳುಗಳಲ್ಲಿ ಕೈಕೊಳ್ಳಬಹುದು. ಕೆಲವು ವರ್ಷಗಳಲ್ಲಿ ಇಲ್ಲವೆ ಕೆಲವು ಜೀವನಗಳಲ್ಲಿ ಕೈಕೊಳ್ಳಬಹುದು – ಆದರೆ ನೀವು ಕೈಕೊಳ್ಳುತ್ತೀರಿ.

ಗಮನಾರ್ಹವಾದದ್ದೇನೆಂದರೆ ಆಯ್ದುಕೊಳ್ಳುವ ಈ ಸ್ವಾತಂತ್ರ್ಯವನ್ನು ನಿಮಗೆ ಬಿಟ್ಟುಕೊಡಲಾಗಿದೆ. ನಿಮ್ಮೊಳಗೆ ನೀವು ಈ ಜೀವನಾವಧಿಯಲ್ಲಿ ಕೈಕೊಳ್ಳಬೇಕು ಎಂದು ನಿರ್ಧರಿಸಿದರೆ ನೀವು ಅದನ್ನು ನೋಡುವಿರಿ. ನಾನಿಲ್ಲಿ ಶಾಶ್ವತ ಹಾಗೂ ಮುಂದುವರಿದುಕೊಂಡು ಹೋಗುವ ನಿರ್ಧಾರ ಕುರಿತು ಹೇಳುತ್ತಿಲ್ಲ. ಇಲ್ಲ, ನಾನು ಹೇಳುವುದರ ಅರ್ಥ ಹಠಾತ್ತನೆ "ನನಗೆ ಇದು ಬೇಕು" ಎಂಬುದು ನಿಮ್ಮನ್ನು ಹಿಡಿದುಕೊಂಡರೆ, ಒಮ್ಮೆಯಾಗಲಿ ಥಟ್ಟನೆ ಮನಸ್ಸಿಗೆ ಹೊಳೆದರೆ ಮುದ್ರೆಯನ್ನಿರಿಸಲಾಗುತ್ತದೆ, ಅದು ಹಾಗಿದೆ.

**(CWM, 7/337–39)** **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 11ನೇ ಜೂನ್ 2018ರ ಸೋಮವಾರದಂದು ಶ್ರೀ ಅರವಿಂದರ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ಗಂಟೆಯಿಂದ 7.30 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಂಬಂಧ ಸಾಯಂಕಾಲ 4.30 ರಿಂದ 5.45ರ ವರೆಗೆ ಶ್ರೀ ಶ್ರದ್ಧಾಳು ರಾನಡೆಯವರ "India's Reunion and World Union" ಎಂಬ ವಿಷಯದ ಬಗ್ಗೆ ವೀಡಿಯೋ ಚಿತ್ರಣವನ್ನು ಪ್ರದರ್ಶಿಸಲಾಯಿತು. ಈ ಕಾರ್ಯಕ್ರಮಕ್ಕೆ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು. ತತ್ಸಂಬಂಧ ದಿನಾಂಕ 11ನೇ ಜೂನ್‌ನಿಂದ 5ನೇ ಆಗಸ್ಟ್ 2018ರ ವರೆಗೂ "Prayer, Japa and Helping Humanity" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ.



*Even grief has joy hidden beneath its roots,*
*for nothing is truly vain the One has made.*

- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು–ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**

ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು – 560 078.
ದೂರವಾಣಿ: 080 – 22339882, 22459628

Ed. Dr. K.S. Amur, M.sc., PhD, Pub: Dr. Ajit S. Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.